
# ಕಮಲ ಪಥ

RNI No.:KARKAN/2023/84034

ಸಂಪುಟ : 01 | ಸಂಚಿಕೆ : 11 | ಫೆಬ್ರವರಿ 2024 | ಬೆಂಗಳೂರು | ₹ 10/-




## ಲೋಕಸಭಾ ಚುನಾವಣಾ ಸಿದ್ಧತೆ ಆರಂಭ

# ಅಮಿತ್ ಶಾ ರವರಿಂದ ಬೂಸ್ಟರ್ ಡೋಸ್...



# ರಾಮಾನಂದ ಭಾಷ್ಪ...













# ಬಿಜೆಪಿಯಿಂದ ಲೋಕಸಭೆ ಗೆಲ್ಲಲು ತಂತ್ರ, ಕಾಂಗ್ರೆಸ್‌ನಿಂದ ಕುತಂತ್ರ

**ಬೆಂ**ಗಳೂರಿನಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿಯು ಬಿಜೆಪಿಯನ್ನು ಲೋಕಸಭಾ ಚುನಾವಣೆಗೆ ಸಜ್ಜುಗೊಳಿಸುವಲ್ಲಿ ಯಶಸ್ವಿಯಾಗಿದೆ. ಲೋಕಸಭಾ ಚುನಾವಣೆಗೆ ಇಡೀ ರಾಜ್ಯ ಬಿಜೆಪಿ ಸರ್ವ ಸನ್ನದ್ಧ ರೀತಿಯಲ್ಲಿ ಟೇಕ್‌ಆಫ್ ಆಗುವಲ್ಲಿ ಯಶಸ್ವಿಯಾಗಿದೆ. ಬೆಂಗಳೂರಿನಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ, ಇಡೀ ರಾಜ್ಯದಲ್ಲಿ ವ್ಯಾಪಿಸಿರುವ ಅಯೋಧ್ಯಾ ಅಲೆಯ ಉತ್ಸಾಹ ಕಾರ್ಯಕರ್ತನಿಗೆ ಹೊಸ ಚೈತನ್ಯವನ್ನು ನೀಡಿದೆ. ಇದಕ್ಕೆ ಪೂರಕವಾಗಿ ಬಹುತೇಕ ಜಿಲ್ಲಾ ಕಾರ್ಯಕಾರಿಣಿಗಳು ಆಯಾ ಜಿಲ್ಲೆಗಳಲ್ಲಿ ಚುನಾವಣಾ ತಂತ್ರಗಳನ್ನು ಚರ್ಚಿಸಿ ಯೋಜನಾತ್ಮಕವಾಗಿ ಮುನ್ನಡೆಯಲು ಸಹಕಾರಿಯಾಗಿದೆ. ರೈತ ಮೋರ್ಚಾದಿಂದ ಗ್ರಾಮ ಪರಿಕ್ರಮ ಯಾತ್ರೆಯ ಮೂಲಕ ಕೇಂದ್ರ ಸರ್ಕಾರದ ಸಾಧನೆಗಳನ್ನು ರೈತರಿಗೆ ತಲುಪಿಸುವ ಕಾರ್ಯವಾಗುತ್ತಿದೆ. ಮಹಿಳಾ ಮೋರ್ಚಾ ವತಿಯಿಂದ ನಾರಿಶಕ್ತಿ ವಂದನಾ ಕಾರ್ಯಕ್ರಮದ ಮೂಲಕ ಸ್ವಸಹಾಯ ಸಂಘಗಳ ಮಹಿಳೆಯರನ್ನು ಸಂಘಟಿಸುವ ಕಾರ್ಯವಾಗುತ್ತಿದೆ. ಫಲಾನುಭವಿಗಳನ್ನು ಸಂಪರ್ಕಿಸಿ 'ನಮೋ ಆ್ಯಪ್'ಗೆ ಅವರುಗಳನ್ನು ಜೋಡಿಸುವ ಕಾರ್ಯವೂ ಆಗುತ್ತಿದೆ. ಮೈಸೂರಿಗೆ ಆಗಮಿಸಿ ಕ್ಲಸ್ಟರ್ ಮಟ್ಟದ ಸಭೆಯನ್ನು ಹಿಂದಿನ ರಾಷ್ಟ್ರೀಯ ಅಧ್ಯಕ್ಷರೂ ಹಾಗೂ ಪ್ರಸ್ತುತ ಗೃಹ ಸಚಿವರಾದ ಶ್ರೀ ಅಮಿತ್ ಶಾರವರು ತೆಗೆದುಕೊಂಡದ್ದು ಬಿಜೆಪಿಯೊಳಗಿನ ಕ್ರಿಯಾಶೀಲ ಚಟುವಟಿಕೆಗಳು ತೀವ್ರಗೊಳ್ಳಲು ಕಾರಣವಾಗಿದೆ.

ಈ ಮಧ್ಯೆ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಮತ್ತದೇ ದಾರಿಯಲ್ಲಿ ಸಾಗುತ್ತಿದೆ. ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಕೇಂದ್ರದ ಮೇಲೆ ಗೂಬೆ ಕೂರಿಸುವ ತನ್ನ ಹಳೇ ಚಾಳಿಯನ್ನು ಮುಂದುವರೆಸಿದೆ. ಕೇಂದ್ರದಿಂದ ರಾಜ್ಯಕ್ಕೆ ತೆರಿಗೆ ಸಮರ್ಪಕವಾಗಿ ಹಂಚಿಕೆಯಾಗುತ್ತಿಲ್ಲ ಎಂಬ ಹೊಸದೊಂದು ತಗಾದೆಯನ್ನು ಕಾಂಗ್ರೆಸ್ ಪ್ರಾರಂಭಿಸಿದೆ. ಮೊದಲಿನಿಂದಲೂ ಸತ್ವವಿಲ್ಲದ ಆರೋಪಗಳನ್ನು ಹೊರಿಸುವ ಮೂಲಕ ಜನರನ್ನು ದಿಕ್ಕು ತಪ್ಪಿಸುವ ಕಾಂಗ್ರೆಸ್‌ನ ನಡೆ ಮತ್ತೊಮ್ಮೆ ಪುನರಾವರ್ತನೆಯಾಗಿದೆ. ಈ ರೀತಿಯ ನಡೆಗಳಿಂದಾಗಿಯೇ ಮುಖಭಂಗ ಅನುಭವಿಸಿರುವ

## ಸಂಪಾದಕೀಯ

ಕಾಂಗ್ರೆಸ್ ಇತಿಹಾಸದಿಂದ ಪಾಠವನ್ನೇ ಕಲಿತಿಲ್ಲ. ಆದ್ದರಿಂದ ಕಾಂಗ್ರೆಸ್‌ನ ಈ ನಿಲುವು ಈಗಲೇ ಲೋಕಸಭಾ ಚುನಾವಣೆಯ ಸೋಲಿನ ಹತಾಶ ಸ್ಥಿತಿಯ ಅನಾವರಣ ಎನ್ನಲೇ ಬೇಕು. ಆದರೆ ಈ ಸುಳ್ಳು ಸಂಗತಿಯನ್ನು ಇಟ್ಟುಕೊಂಡು ದೇಶ ವಿಭಜನೆಯಂತಹ ಮಾತುಗಳನ್ನು ಆಡುತ್ತಿರುವ ಕಾಂಗ್ರೆಸ್ ಸಂಸದ ಶ್ರೀ ಡಿ.ಕೆ. ಸುರೇಶ್‌ರವರ ಹೇಳಿಕೆ ಅಕ್ಷಮ್ಯ ಅಪರಾಧ. ಇದನ್ನು ವ್ಯಾಪಕವಾಗಿ ಖಂಡಿಸಲೇ ಬೇಕು.

ಲೋಕಸಭಾ ಚುನಾವಣೆ ಸನ್ನಿಹಿತವಾಗುತ್ತಿರುವ ಈ ಹೊತ್ತಿನಲ್ಲಿ ಇಂಡಿಯಾ ಒಕ್ಕೂಟದಲ್ಲಿ ಬಿರುಕು ಹೆಚ್ಚಾಗುತ್ತಿದೆ. ಒಂದೊಂದೇ ಮಿತ್ರ ಪಕ್ಷಗಳು ಇಂಡಿಯಾ ಒಕ್ಕೂಟದಿಂದ ದೂರವಾಗುತ್ತಿದೆ. ಇದರಿಂದ ಸಹಜವಾಗಿ ಕಾಂಗ್ರೆಸ್‌ಗೆ ಬರಲಿರುವ ಲೋಕಸಭಾ ಚುನಾವಣೆಯ ಸೋಲಿನ ಭೀತಿ ಕಾಡುತ್ತಿದೆ. ಈ ಭೀತಿಯ ಪರಿಣಾಮ ಮತ್ತದೇ ಕುತಂತ್ರಗಳನ್ನು ನಡೆಸುವುದು, ಸುಳ್ಳು ಆರೋಪಗಳನ್ನು ಮಾಡುವುದು, ಇಲ್ಲವೇ ಸಮಾಜ ವಿರೋಧಿ ಚುಟವಟಿಕೆಗಳನ್ನು ನಡೆಸುವ ಶಕ್ತಿಗಳಿಗೆ ಬೆಂಬಲ ನೀಡುವಂತಹ ಧೋರಣೆಗಳು ಕಾಂಗ್ರೆಸ್ ನಾಯಕರಿಂದ ವ್ಯಕ್ತವಾಗುತ್ತಿದೆ. 'ಭಾರತ್ ಜೋಡೋ ಯಾತ್ರೆ'ಯನ್ನು ಮೊಟಕುಗೊಳಿಸಿ ಪಂಜಾಬ್‌ನ ರೈತರ ಸಮಾಜ ವಿರೋಧಿ ಚಳುವಳಿಯ ಬೆಂಬಲಕ್ಕೆ ಧಾವಿಸಿರುವ ಶ್ರೀ ರಾಹುಲ್ ಗಾಂಧಿ ನಡೆಯೇ ಇದಕ್ಕೆ ಸ್ಪಷ್ಟ ಉದಾಹರಣೆ.

ಲೋಕಸಭಾ ಚುನಾವಣೆಗೆ ಕೆಲವೇ ದಿನಗಳೂ ಉಳಿದಿವೆ. ದೇಶದ ದೃಷ್ಟಿಯಿಂದ ಮತ್ತೊಮ್ಮೆ ಶ್ರೀ ಮೋದಿಯವರನ್ನು ಪ್ರಧಾನಿಯಾಗಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಶ್ರೀ ಮೋದಿಯವರನ್ನು ಪ್ರಧಾನಿಯಾಗಿಸುವುದು ಬಿಟ್ಟರೆ ಮತ್ತೆಲ್ಲಾ ಸಂಗತಿಗಳು ಗೌಣವಾಗಿ ತೆಗೆದುಕೊಳ್ಳುವ ಪ್ರವೃತ್ತಿಯನ್ನು ಬಿಜೆಪಿಯ ಪ್ರತೀ ಕಾರ್ಯಕರ್ತನೂ ಅಳವಡಿಸಿಕೊಳ್ಳಬೇಕಾಗಿದೆ. ಮೊದಲಿನಿಂದಲೂ ದೇಶ ಮೊದಲೆಂಬ ಸಂಕಲ್ಪ ತೊಟ್ಟು, ತನ್ನೆಲ್ಲಾ ಶ್ರಮ, ಸಮಯವೆಲ್ಲವನ್ನೂ ಬಿಜೆಪಿಗೋಸ್ಕರ ಮುಡಿಪಿಟ್ಟಿರುವ ಬಿಜೆಪಿ ಕಾರ್ಯಕರ್ತನೆಂದೂ ಈ ನಂಬಿಕೆಗೆ ವಿರುದ್ಧವಾಗಿ ನಡೆದುಕೊಳ್ಳುವುದಿಲ್ಲ. ಅವನಿಗೊಂದಿಷ್ಟು ಸ್ಫೂರ್ತಿ, ಅವನಿಗೊಂದಿಷ್ಟು ಪ್ರೇರಣೆ, ಅವನ ಸಾಮರ್ಥ್ಯಕ್ಕೆ ಅನುಗುಣವಾದ ಅವಕಾಶ ನೀಡುವ ಕಾರ್ಯಕ್ಕೊಂದಿಷ್ಟು ವೇಗ ಸಿಗಬೇಕು ಅಷ್ಟೆ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಶ್ರೀ ಹೆಚ್.ಎಸ್. ಗೋಪಿನಾಥ್
ಮೊ : 9341231253


**ಸಂಪಾದಕರು**
ಶ್ರೀ ಬಿದರೆ ಪ್ರಕಾಶ್
ಮೊ : 9513447961


## ಸುಭಾಷಿತ



**ಯಾವಾಗಲೂ ಒಳ್ಳೆಯದನ್ನೇ ಮಾಡಿ. ನಿರಂತರವಾಗಿ ಸದ್ವಿಚಾರವನ್ನೇ ಆಲೋಚಿಸಿ. ದುಷ್ಟ ಸಂಸ್ಕಾರಗಳನ್ನು ನಿಗ್ರಹಿಸುವುದಕ್ಕೆ ಇದೊಂದೇ ಮಾರ್ಗ.**

**- ಸ್ವಾಮಿ ವಿವೇಕಾನಂದ**





**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com

#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005




## ಈ ಸಂಚಿಕೆಯಲ್ಲಿ




**ಲೋಕಸಭಾ ಚುನಾವಣೆ - 2024**

### ಬಿಜೆಪಿ ರಣ ಕಹಳೆ - ಲೋಕಸಭಾ ಚುನಾವಣಾ ಸಿದ್ಧತೆ ಆರಂಭ




### ಶ್ರೀ ಬಾಲರಾಮ ಪ್ರಾಣ ಪ್ರತಿಷ್ಠಾಪನೆ


- **ದೀವಟಿಗೆ :** ಜೀವ ಕಾವ್ಯದ ಮೊದಲ ಕೋಗಿಲೆ ಸರೋಜಿನಿ ದೇವಿ ನಾಯ್ಡು........ 05
- ದೇಶದ ಆತ್ಮ, ಆಸ್ಮಿತೆ ರಾಮಮಂದಿರ ........06
- ರಾಜ್ಯ ಕಾರ್ಯಕಾರಿಣಿ ........13
- ಕೇಂದ್ರ ಬಜೆಟ್ 2023-24 ........18
- ಮಹಿಳಾ ಮೋರ್ಚಾ ರಾಜ್ಯ ಕಾರ್ಯಕಾರಿಣಿ ........20
- ರಾಜ್ಯಾಧ್ಯಕ್ಷರ ಪ್ರವಾಸ ........21
- **ಹಿರಿಯ ಕಾರ್ಯಕರ್ತರ ಪರಿಚಯಮಾಲೆ :**
  - ಮರೆಯಾದ ಸೋಮಣ್ಣ ಎಂಬ ವಾಮನಮೂರ್ತಿ........25
  - ಮಾದರಿಯೊಂದನ್ನು ಬಿಟ್ಟು ಹೊರಟುಹೋದ ಚೆಟ್ಟಿಯಾರರು........28
  - ನೇಮಿರಾಜ ಶೆಟ್ಟಿ........32
- ಮಾಸದ ಮಾಧುರ್ಯ 'ದಾಸಾಮೃತ' ........33
- **ಮನ್ ಕಿ ಬಾತ್** - ಜನರನ್ನು ಒಗ್ಗೂಡಿಸಿದ ಬಾಲರಾಮ........ 34



ಹರೀಶ್ ಆತ್ರೇಯ
ಬಿಜೆಪಿ ಕಾರ್ಯಕರ್ತರು

## ಜೀವಕಾವ್ಯದ ಮೊದಲ ಕೋಗಿಲೆ

# ಸರೋಜಿನಿ ದೇವಿ ನಾಯ್ಡು

**(ಫೆಬ್ರವರಿ 13, 1879 – ಮಾರ್ಚ್ 02, 1949)**

**ಭಾ**ರತೀಯ ಸಾಹಿತ್ಯದ ಜೀವಕಾವ್ಯಗಳಲ್ಲಿ, ಸರೋಜಿನಿ ದೇವಿ ನಾಯ್ಡು ಎಂಬ ಹೆಸರು ಎತ್ತರವಾಗಿ ನಿಂತಿದೆ, ಅವರ ಪದ್ಯಗಳು ಆಲಿಸಲೇಬೇಕಾದ ನೆನಪುಗಳೊಂದಿಗೆ ಅನುರಣಿಸುತ್ತವೆ. ಗಮನಾರ್ಹವಾದ ಬುದ್ಧಿಶಕ್ತಿ, ಮಣಿಯದ ಚೈತನ್ಯ ಮತ್ತು ಅಪ್ರತಿಮ ಸೃಜನಶೀಲತೆಯ ಮಹಿಳೆಯಾಗಿ, ಕಾವ್ಯ ಪ್ರಪಂಚಕ್ಕೆ ನಾಯ್ಡು ಅವರ ಕೊಡುಗೆಗೆ ಸಾಟಿಯಿಲ್ಲ. ಫೆಬ್ರವರಿ 13, 1879 ರಂದು ಹೈದರಾಬಾದಿನಲ್ಲಿ ಜನಿಸಿದ ಅವರು, ಸಮಾಜದ ಜನಜೀವನಗಳನ್ನು ತಮ್ಮ ಅಪ್ರತಿಮ ಭಾಷಾಲಾಲಿತ್ಯದಿಂದ ಭಾರತೀಯ ಕಾವ್ಯ ಭಂಡಾರಕ್ಕೆ ಕೊಟ್ಟಿದ್ದಾರೆ, ಭಾರತೀಯ ಸಾಹಿತ್ಯದ ವಿಸ್ತಾರದಲ್ಲಿ, ಸರೋಜಿನಿ ದೇವಿ ನಾಯ್ಡು ಅವರಷ್ಟು ಪ್ರಕಾಶಮಾನವಾಗಿ ಕೆಲವು ಹೆಸರುಗಳು ಹೊಳೆಯುತ್ತವೆ.

ಭಾರತದ ನೈಟಿಂಗೇಲ್ ಎಂದು ಸಾಮಾನ್ಯವಾಗಿ ಉಲ್ಲೇಖಿಸಲ್ಪಡುವ, ನಾಯ್ಡು ಅವರ ಕಾವ್ಯದ ತೇಜಸ್ಸು 20ನೇ ಶತಮಾನದ ಆರಂಭದಲ್ಲಿ ಸಾಹಿತ್ಯಿಕ ಪ್ರಪಂಚವನ್ನು ಬೆಳಗಿಸಿತು, ಪ್ರಪಂಚದಾದ್ಯಂತದ ಓದುಗರ ಹೃದಯ ಮತ್ತು ಮನಸ್ಸಿನ ಮೇಲೆ ಅಳಿಸಲಾಗದ ಗುರುತು ಹಾಕಿತು. ನಾವು ಅವರ ಜೀವನ ಮತ್ತು ಪರಂಪರೆಯನ್ನು ಸ್ಮರಿಸುವಾಗ, ಅವರ ಕಾರ್ಯದ ನಿರಂತರ ಪ್ರಭಾವ ಮತ್ತು ಕವಿಗಳು ಮತ್ತು ಬರಹಗಾರರ ತಲೆಮಾರುಗಳ ಮೇಲೆ ಅವರು ಬೀರುವ ಆಳವಾದ ಪ್ರಭಾವವನ್ನು ಪ್ರತಿಬಿಂಬಿಸುವುದು ಸೂಕ್ತವಾಗಿದೆ.

ನಾಯ್ಡು ಅವರ ಕಾವ್ಯ ದೃಷ್ಟಿಯ ಕೇಂದ್ರಬಿಂದುವೆಂದರೆ ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ಅವರ ಅಚಲ ಬದ್ಧತೆ. ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ವ್ಯಕ್ತಿಯಾಗಿ, ಅವರು ಸ್ವಾತಂತ್ರ್ಯದ ಕಾರಣಕ್ಕಾಗಿ ಮತ್ತು ಮಹಿಳೆಯರು ಮತ್ತು ಅಂಚಿನಲ್ಲಿರುವ ಸಮುದಾಯಗಳ ಹಕ್ಕುಗಳಿಗಾಗಿ ಪ್ರತಿಪಾದಿಸಲು ತಮ್ಮ ಸಾಹಿತ್ಯಿಕ ಕೌಶಲ್ಯವನ್ನು ಬಳಸಿದರು. ತನ್ನ ಕಾವ್ಯದ ಮೂಲಕ, ಅವರು ಚಾಲ್ತಿಯಲ್ಲಿರುವ ರೂಢಿಗಳನ್ನು ಸವಾಲು ಮಾಡಲು ಪ್ರಯತ್ನಿಸಿದರು ಮತ್ತು ಹೆಚ್ಚು ನ್ಯಾಯಯುತ ಮತ್ತು ಸಮಾನ ಸಮಾಜಕ್ಕಾಗಿ ಹೋರಾಟಕ್ಕೆ ಸೇರಲು ಇತರರನ್ನು ಪ್ರೇರೇಪಿಸಿದರು.

ಅವರ ಪದ್ಯಗಳು, ತನ್ನ ಸ್ವಂತ ಅನುಭವಗಳಿಂದ ಚಿತ್ರಿಸಿದ ಚಿತ್ರಣದಿಂದ ತುಂಬಿವೆ. ಅವರ ಸಾಹಿತ್ಯವು ಪ್ರೀತಿ, ದೇಶಭಕ್ತಿ ಮತ್ತು ಸ್ತ್ರೀವಾದದ ವಿಷಯಗಳನ್ನು ಒಟ್ಟಿಗೆ ಹೆಣೆದು, ಧ್ವನಿಯಿಲ್ಲದವರಿಗೆ ಧ್ವನಿಯಾಗಿ ಮತ್ತು ಅನೇಕರಿಗೆ ಭರವಸೆಯ ದಾರಿದೀಪವಾಗಿಸುತ್ತದೆ. ಅವರ ಭಾಷೆಯ ಸಂಪೂರ್ಣ ಸೊಬಗು, ಅವರ ಪದಗಳ ಜೋಡಣೆಯು ಓದುಗರನ್ನು ಈ ಹಿಂದೆ ಅನ್ವೇಷಿಸದ ಕಲ್ಪನೆಯ ಕ್ಷೇತ್ರಗಳಿಗೆ ಕೊಂಡೊಯ್ಯುತ್ತದೆ. 'ದಿ ಪಲಂಕ್ವಿನ್ ಬೇರರ್ಸ್' ಮತ್ತು 'ಇನ್ ದಿ ಬಜಾರ್ಸ್ ಆಫ್ ಹೈದರಾಬಾದ್' ನಂತಹ ಕವಿತೆಗಳಲ್ಲಿ, ನಾಯ್ಡು ಅವರು ಭಾರತದ ದೈನಂದಿನ ಜೀವನದ ಎದ್ದುಕಾಣುವ ಚಿತ್ರಗಳನ್ನು ಕೌಶಲ್ಯದಿಂದ ಚಿತ್ರಿಸಿದ್ದಾರೆ. ಅವರು ಪದ್ಯಗಳನ್ನು ಆಗಿಹೋದ ನೆನಪುಗಳ ಮತ್ತು ಹಾತೊರೆಯುವ ಭಾವದಿಂದ ತುಂಬುತ್ತಾರೆ.

ಸರೋಜಿನಿ ದೇವಿ ನಾಯ್ಡು ಅವರ ಪರಂಪರೆಯನ್ನು ನಾವು ಪ್ರತಿಬಿಂಬಿಸುವಾಗ, ಸಾಹಿತ್ಯಕ್ಕೆ ಅವರ ಗಮನಾರ್ಹ ಕೊಡುಗೆಗಳನ್ನು ಮಾತ್ರವಲ್ಲದೆ ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ಅವರ ಅಚಲ ಬದ್ಧತೆಯನ್ನು ಸಹ ನಾವು ನೆನಪಿಸಿಕೊಳ್ಳುತ್ತೇವೆ. ಅವರ ಮಾತುಗಳು ಸ್ಫೂರ್ತಿ ನೀಡುತ್ತಲೇ ಇರುತ್ತವೆ, ಅವರ ಆತ್ಮವು ಮಾರ್ಗದರ್ಶನ ನೀಡುತ್ತಲೇ ಇರುತ್ತದೆ ಮತ್ತು ಅವರು ಬರೆದ ಕವನದ ಪ್ರತಿ ಸಾಲಿನಲ್ಲೂ ಅವರ ಉಪಸ್ಥಿತಿಯು ಅನುಭವಿಸುತ್ತಲೇ ಇರುತ್ತದೆ.ಸರೋಜಿನಿ ದೇವಿ ನಾಯ್ಡು ಅವರ ಸ್ಮರಣಾರ್ಥ ನಾವು ಗೌರವಿಸುವಾಗ, ಸಾಹಿತ್ಯಕ್ಕೆ ಅವರು ನೀಡಿದ ಅಪ್ರತಿಮ ಕೊಡುಗೆಗಳನ್ನು ನಾವು ಸ್ಮರಿಸೋಣ ಆದರೆ ಅವರು ಕೆಚ್ಚಿನಿಂದ ಹೋರಾಡಿದ ನ್ಯಾಯ, ಸಮಾನತೆ ಮತ್ತು ಸ್ವಾತಂತ್ರ್ಯದ ಮೌಲ್ಯಗಳಿಗೆ ನಮ್ಮನ್ನು ನಾವು ಮರುಹೊಂದಿಸೋಣ. ಅವರ ಮಾತುಗಳಲ್ಲಿ, ನಾವು ಸ್ಫೂರ್ತಿಯನ್ನು ಕಂಡುಕೊಳ್ಳುತ್ತೇವೆ; ಅವರ ಕಾರ್ಯಗಳಲ್ಲಿ, ನಾವು ಧೈರ್ಯವನ್ನು ಕಂಡುಕೊಳ್ಳುತ್ತೇವೆ;

# ದೇಶದ ಆತ್ಮ, ಅಸ್ಮಿತೆ ರಾಮಮಂದಿರ



ಡಿ.ಹೆಚ್. ಶಂಕರಮೂರ್ತಿ
ಮಾಜಿ ವಿಧಾನಪರಿಷತ್ ಸಭಾಪತಿ

**ರಾ**ಮಮಂದಿರ ನಿರ್ಮಾಣವಾಗಿ ಬಾಲ ರಾಮನ ಪ್ರಾಣ ಪ್ರತಿಷ್ಠೆಯಾಗಿದೆ. ಮನಸ್ಸು ಭಾವ ತುಂಬಿ ಬಂದಿದೆ. ಈ ದೇಶದ ಅಸ್ಮಿತೆಯ ಭವ್ಯ ಮಂದಿರ ನಿರ್ಮಾಣವಾಗಿದೆ. ಕೋಟ್ಯಾಂತರ ಭಾರತೀಯರ ಕನಸು ನನಸಾಗಿದೆ. ಈ ಸುಮಧುರ ಗಳಿಗೆಯಲ್ಲಿ ನಾನು ಕರಸೇವೆಗೆ ಹೋದ ಸಂದರ್ಭ ಒಂದು ಸುಂದರ ನೆನಪುಗಳಾಗಿ ಭಾವುಕವಾಗಿದೆ, ಈ ಸಮಯದಲ್ಲಿ ಕರಸೇವೆಯ ಒಂದು ಮೆಲುಕು. ಸಹಜವಾಗಿ ನನ್ನ ಮನಸ್ಸು 32 ವರ್ಷಗಳ ಹಿಂದಕ್ಕೆ ಹೋಗುತ್ತೆ. ಆ ದಿನಗಳಲ್ಲಿ ನಾವು ಓಡಾಡಿದ ರೀತಿ, ಹೋರಾಟಗಳನ್ನು ಮಾಡಿದ ಪರಿ, ನಡೆದ ವಿವಿಧ ಪ್ರಯತ್ನಗಳೆಲ್ಲವೂ ಕಣ್ಣ ಮುಂದೆ ಹಾದು ಹೋಗುತ್ತದೆ. ಕಟ್ಟುವೆವು, ಕಟ್ಟುವೆವು, ಮಂದಿರವಲ್ಲೆ ಕಟ್ಟುವೆವು ಎಂದು ಕೂಗಿದ ಘೋಷಣೆ ಇಂದಿಗೂ ಪ್ರತಿಧ್ವನಿಸುತ್ತದೆ. ಮನೆ ಮನೆಗೆ ರಾಮಜ್ಯೋತಿಯನ್ನು ತೆಗೆದುಕೊಂಡು ಹೋಗಿದ್ದು, ರಾಮಶಿಲೆಯ ಅರ್ಚನೆಗಳೆಲ್ಲವೂ ನೆನಪಾಗಿ ಎದುರಾಗುತ್ತದೆ.

ಈ ಎಲ್ಲಾ ಕಾರ್ಯಗಳ ನಂತರ ಕರಸೇವೆಗೆ ಸೂಚನೆ ಬಂದ ಕೂಡಲೇ ಮಾಜಿ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ, ಶ್ರೀ ಈಶ್ವರಪ್ಪ ರವರೊಂದಿಗೆ ಅಯೋಧ್ಯೆಗೆ ತೆರಳಿ ಕರಸೇವೆ ಮಾಡಿದ ಆ ಅನುಭವ ವರ್ಣನಾತೀತ. 1991ರಲ್ಲಿ ಅಯೋಧ್ಯೆಗೆ ಕರಸೇವೆಗೆ ಹೋದಾಗ ಉತ್ತರಪ್ರದೇಶದಲ್ಲಿದ್ದ ಆಗಿನ ಮುಲಾಯಂ ಸಿಂಗ್ ಸರ್ಕಾರ ಗೋಲಿಬಾರ್ ಮಾಡಿ ನಮ್ಮನ್ನೆಲ್ಲರನ್ನು ಬಂಧನ ಮಾಡಿತ್ತು. ಇದರಿಂದ ನಮ್ಮ ಜೊತೆಯಲ್ಲಿದ್ದ ಬೇರೆ ಬೇರೆ ರಾಜ್ಯದ ಕೆಲವು ಸ್ವಯಂಸೇವಕರು ಮೃತರಾದರು. ನಮ್ಮನ್ನು ಬಂಧಿಸಿ ಬಸ್ಸಿನಲ್ಲಿ ಚಿತ್ರಕೂಟದ ಕಾಡಿಗೆ ಕರೆದುಕೊಂಡು ಹೋದರು. ಎಲ್ಲಾ ಕರಸೇವಕರು ಆ ಇಡೀ ರಾತ್ರಿ ಕಾಡಿನಲ್ಲಿ ಕಳೆದೆವು. ಸರ್ಕಾರ ಊಟವನ್ನು ಕೊಡಲಿಲ್ಲಾ. ಬೆಳಗ್ಗೆ ನಾವೇ ಹತ್ತಿರದ ಹಳ್ಳಿಗೆ ಹೋಗಿ ದೊಡ್ಡ ಪಾತ್ರೆ ಮತ್ತು ಅವರಿಂದ ಅಕ್ಕಿಯನ್ನು ತಂದು ಕಾಡಿನಲ್ಲಿ ಬೇಯಿಸಿ ಊಟ ಮಾಡಿದೆವು. ಅದರಲ್ಲಿನ ರುಚಿ ಇಂದಿಗೂ ನೆನಪಿನಲ್ಲಿ ಉಳಿದಿದೆ. ನಂತರ ಕರಸೇವೆಗೆ ಹೋಗಲು ಬಿಡದೆ ಬಸ್ಸನ್ನು ತಂದು ಹತ್ತಿರದ ಯಾವುದೊ ಊರಿಗೆ ತಂದು ಬಿಟ್ಟರು. ಅಲ್ಲಿಂದ ಹಿಂದಿರುಗಿದೆವು.

ನಂತರ 1992 ಡಿಸೆಂಬರ್‌ನಲ್ಲಿ ಮತ್ತೆ ಕರಸೇವೆ ಮಾಡಲು ಸೂಚನೆ ಬಂದಿತು. ಈ ಸಲ ಒಂದು ಹಿಡಿ ಮಣ್ಣು ತಂದು ಮಸೀದಿ ನಿರ್ಮಿಸಿದ ಜಾಗದಲ್ಲಿ ಹಾಕಬೇಕೆಂಬುದು ಉದ್ದೇಶವಾಗಿತ್ತು. ಆದರೆ ಆಗಲೂ ಸರ್ಕಾರ ಎಲ್ಲೆಡೆ ಕರ್ಫ್ಯೂ ಹಾಕಿ ನಮಗೆ ಒಳಗೆ ಹೊಗಲು ಬಿಡಲಿಲ್ಲಾ. ಆದರೆ ಶ್ರೀ ಕೆ.ಎಸ್. ಈಶ್ವರಪ್ಪನವರು ಹಾಗೂ ಅವರ ಅಣ್ಣ ಶ್ರೀ ಗಂಗಾಧರಪ್ಪನವರು ಒಂದು ಕಾರಿನಲ್ಲಿ ಪೊಲೀಸರ ಭದ್ರಕೋಟೆಯನ್ನು ಭೇಧಿಸಿ ಸಂಜೆ ಹೊತ್ತಿಗೆ ತಲುಪಿದೆವು. ಅಷ್ಟೊತ್ತಿಗಾಗಲೆ ಗುಲಾಮಗಿರಿಯ ಸಂಕೇತವಾದ ಕಟ್ಟಡ ಸಂಪೂರ್ಣ ನೆಲಸಮವಾಗಿತ್ತು. ನಾವು ಸಹ ಒಂದು ಹಿಡಿ ಮಣ್ಣನ್ನು ಹಾಕಿ ಕರಸೇವೆಯಲ್ಲಿ ಪಾಲ್ಗೊಂಡ ಸಮಾಧಾನಪಟ್ಟೆವು. ಮಿಲಿಟರಿ ಬರುವ ಸಾಧ್ಯತೆ ಎಂದು ಘೋಷಿಸಿದ ಕಾರಣ ನಾವು ಹಿಂದಿರುಗಿ ಬಂದೆವು. ಇದು ನನ್ನ ಜೀವನದಲ್ಲಿ ಎರಡನೇ ಸಲ ಕರಸೇವೆ ಮಾಡಿದ ಅನುಭವ.

ಇಂದು ಭವ್ಯ ರಾಮಮಂದಿರ ನೆಲೆ ನಿಂತಿದೆ. ಈ ರಾಮಮಂದಿರ ನಿರ್ಮಾಣ ನಮ್ಮ ಜೀವನದಲ್ಲಿ ಸಾಧ್ಯವಾಗುದಿಲ್ಲವೇನೊ ಎಂಬ ಕನಸು ನನಸಾಗಿದೆ. 500 ವರ್ಷಗಳ ಕಾಲದ ಹೋರಾಟ, ಪ್ರಾಣ ತ್ಯಾಗದ ಫಲ ದೊರಕಿತು. ರಾಮಮಂದಿರ ನಿರ್ಮಾಣವನ್ನು ಕಣ್ಣಾರೆ ಕಂಡದ್ದಾಯಿತು. ಸರ್ಕಾರದ ಹಣಕಾಸಿನ ನೆರವಿಲ್ಲದೆ, ರಾಮಭಕ್ತರು ನೀಡಿರುವ ಹಣದಿಂದಲೇ ಭವ್ಯವಾದ ರಾಮಮಂದಿರ ನಿರ್ಮಾಣವಾಗಿದೆ. ಈ ರಾಮ ಮಂದಿರ ಈ ದೇಶದ ಆತ್ಮ, ಅಸ್ಮಿತೆ.



## ಲೋಕಸಭಾ ಚುನಾವಣೆ – 2024


# ಬಿಜೆಪಿ ರಣ ಕಹಳೆ – ಲೋಕಸಭಾ ಚುನಾವಣಾ ಸಿದ್ಧತೆ ಆರಂಭ

### ಕಾರ್ಯಕರ್ತರಲ್ಲಿ ಹೊಸ ಹುರುಪು

ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಆದ ಸೋಲಿನ ಬಳಿಕ ಬಿಜೆಪಿಯ ಯಾವುದೇ ರಾಷ್ಟ್ರೀಯ ನಾಯಕರು ಹಳೇ ಮೈಸೂರು ಭಾಗಕ್ಕೆ ಬಂದಿರಲಿಲ್ಲ. ಇದು ಒಂದು ರೀತಿಯಲ್ಲಿ ಪಕ್ಷದ ಕಾರ್ಯಕರ್ತರಲ್ಲಿ ಕಳೆಗುಂದುವಂತೆ ಮಾಡಿತ್ತು. ಆದರೆ ಚಾಣಕ್ಯ ಎಂದು ಹೆಸರಾಗಿರುವ ಅಮಿತ್ ಶಾ ಅವರೇ ನೇರವಾಗಿ ಸಿಎಂ ಸಿದ್ದರಾಮಯ್ಯನವರ ತವರು ಜಿಲ್ಲೆಯ ಅಖಾಡಕ್ಕೆ ಎಂಟ್ರಿ ನೀಡಿ, ಲೋಕಸಭೆ ಚುನಾವಣೆಗೆ ರಣ ಕಹಳೆ ಮೊಳಗಿಸಿರುವುದು, ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ತಂದಿದೆ. ಕಾರ್ಯಕರ್ತರು ಮಾತ್ರವಲ್ಲ ಮುಖಂಡರು ಕೂಡ ಈಗ ಸೋಲಿನಿಂದ ಮೈಕೊಡವಿ ಎದ್ದುನಿಂತಿದ್ದಾರೆ. ರಣಘೋಷ ಮೊಳಗಿಸಿದ್ದಾರೆ. ಇದರಿಂದಾಗಿ ಇಡೀ ಬಿಜೆಪಿಯಲ್ಲೀಗ ಹೊಸ ಚೈತನ್ಯದ ಅಲೆ ದೊಡ್ಡ ಮಟ್ಟದಲ್ಲಿಯೇ ಎದ್ದಿದೆ.

**ಕೇಂ**ದ್ರ ಗೃಹ ಸಚಿವ ಶ್ರೀ ಅಮಿತ್ ಶಾ ಅವರು ನಾಡ ಅಧಿದೇವತೆ ತಾಯಿ ಚಾಮುಂಡೇಶ್ವರಿಯ ನೆಲೆವೀಡಾದ ಮೈಸೂರಿನಲ್ಲಿ ಭಾನುವಾರ ಸಂಚಲನ ನಡೆಸಿದರು. ನಾಡ ಶಕ್ತಿದೇವತೆ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ ಬಳಿಕ ನಗರದ ಖಾಸಗಿ ಪಂಚತಾರ ಹೋಟೆಲ್‌ನಲ್ಲಿ ಬಿಜೆಪಿ ಕೋರ್ ಕಮಿಟಿ ಸಭೆ, ಕ್ಲಸ್ಟರ್ ಮಟ್ಟದ ಪ್ರಮುಖರ ಸಭೆಯನ್ನು ನಡೆಸುವ ಮೂಲಕ ಬರುವ ಲೋಕಸಭೆ ಚುನಾವಣೆಗೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ತವರು ಜಿಲ್ಲೆಯಿಂದಲೇ ರಣ ಕಹಳೆ ಮೊಳಗಿಸಿದರು.

ವಿಧಾನಸಭಾ ಚುನಾವಣೆಯಲ್ಲಿ ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಕೇವಲ ಒಂದೇ ಒಂದು ಸ್ಥಾನವನ್ನು ಮಾತ್ರ ಗೆಲ್ಲಲು ಸಾಧ್ಯವಾಗಿದೆ. ಇದಕ್ಕೆ ಕಾರಣವೇನು, ಆಗಿರುವ ಎಲ್ಲಾ ಲೋಪ, ದೋಷಗಳನ್ನು ಸರಿಪಡಿಸಿಕೊಳ್ಳಬೇಕು. ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯವನ್ನು ಜನರಿಗೆ ತಿಳಿಸಬೇಕು, ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳು, ಜಾರಿಗೊಳಿಸಿರುವ ಕಾರ್ಯಕ್ರಮಗಳ ಕುರಿತು ಮತದಾರರಿಗೆ ಮನವರಿಕೆ ಮಾಡಿಕೊಡಬೇಕು.



ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣವಾಗಿದೆ. ಇದನ್ನು ಕೂಡ ಜನರಿಗೆ ತಿಳಿಸಬೇಕು. ಪ್ರಧಾನಿ ಶ್ರೀ ಮೋದಿಯವರ ಜನಪ್ರಿಯತೆಯನ್ನು ಮತಗಳನ್ನಾಗಿ ಪರಿವರ್ತಿಸಬೇಕು. ಬೂತ್ ಮಟ್ಟ, ಶಕ್ತಿ ಕೇಂದ್ರಗಳಲ್ಲಿ ಪಕ್ಷವನ್ನು ಪ್ರಬಲವಾಗಿ ಸಂಘಟಿಸಬೇಕು. ನಿಮ್ಮಲ್ಲಿ ಏನೇ ವ್ಯತ್ಯಾಸಗಳಿದ್ದರೂ ಅದನ್ನು ಬಿಟ್ಟು ಪಕ್ಷದ ಗೆಲುವಿಗೆ ಶ್ರಮಿಸಬೇಕು, ಬೂತ್ ಮಟ್ಟದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮತಗಳು ಪಕ್ಷಕ್ಕೆ ಬರುವಂತೆ ಮಾಡಬೇಕು. ಯಾರೇ ಅಭ್ಯರ್ಥಿಯಾದರೂ, ಪಕ್ಷದ ಗೆಲುವಿಗಾಗಿ ಪ್ರತಿಯೊಬ್ಬರು ಜವಾಬ್ದಾರಿಯುತವಾಗಿ ಸೈನಿಕರಂತೆ ಹೋರಾಟ ನಡೆಸಬೇಕು ಎಂದು ತಿಳಿಸಿದರು. ರಾಜ್ಯದ 28 ಸ್ಥಾನಗಳನ್ನೂ ಗೆಲ್ಲಲು ಆದರಲ್ಲೂ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ಹಿಡಿತದಲ್ಲಿರುವ ಹಳೇ ಮೈಸೂರು ಭಾಗದ ಮೈಸೂರು-ಕೊಡಗು, ಚಾಮರಾಜನಗರ, ಹಾಸನ, ಮಂಡ್ಯ ಲೋಕಸಭಾ ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲಲು ಅನುಸರಿಸಬೇಕಾದ ಕಾರ್ಯತಂತ್ರಗಳ ಕುರಿತು ಪಕ್ಷದ ನಾಯಕರು, ಮುಖಂಡರಿಗೆ ಮಾರ್ಗದರ್ಶನ ನೀಡಿದರು. ಅಲ್ಲದೇ ಈ ನಾಲ್ಕು ಕ್ಷೇತ್ರಗಳಲ್ಲಿನ ಗೆಲುವಿನ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು. ಲೋಕಸಭೆಯ ಚುನಾವಣೆಯ ರೂಟ್ ಮ್ಯಾಪ್‌ನ್ನು ಸಿದ್ಧಪಡಿಸುವಂತೆ ಪಕ್ಷದ ನಾಯಕರಿಗೆ ಸೂಚಿಸಿದರು.

ವಿಧಾನಸಭೆಯ ಚುನಾವಣೆಯಲ್ಲಿ ಪಕ್ಷಕ್ಕೆ ಆದ ಸೋಲಿನಿಂದ ಬೇಸರಗೊಂಡಿದ್ದ ಪಕ್ಷದ ನಾಯಕರು, ಮುಖಂಡರಿಗೆಲ್ಲಾ ಶ್ರೀ ಅಮಿತ್ ಶಾ ಅವರು ಬೂಸ್ಟರ್ ಡೋಸ್ ನೀಡಿ ಹೊಸ ಹುರುಪು, ಚೈತನ್ಯ ತುಂಬಿದರು. ಮಾನಸಿಕವಾಗಿ ಧೈರ್ಯ ತುಂಬಿ, ಟಾಸ್ಕ್‌ಗಳನ್ನು ನೀಡಿದರು. ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಡಿ.ವಿ. ಸದಾನಂದಗೌಡ, ವಿಧಾನಸಭೆ ಪ್ರತಿಪಕ್ಷ ನಾಯಕ ಶ್ರೀ ಆರ್. ಅಶೋಕ, ಮಾಜಿ ಸಚಿವರಾದ ಶ್ರೀ ಶ್ರೀರಾಮುಲು, ಶ್ರೀ ಎಸ್.ಎ. ರಾಮದಾಸ್, ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಎನ್. ಮಹೇಶ್, ಶ್ರೀ ರಾಜೇಂದ್ರ, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ವಿ. ರಾಜೇಶ್, ಒಬಿಸಿ ಮೋರ್ಚಾದ ರಾಜ್ಯಾಧ್ಯಕ್ಷರಾದ ಶ್ರೀ ಆರ್. ರಘು ಕೌಟಿಲ್ಯ, ಕೆ.ಜಿ. ಬೋಪಯ್ಯ, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕರಾದ ಹರ್ಷವರ್ಧನ್, ಶ್ರೀ ಪ್ರೀತಂಗೌಡ, ಶ್ರೀ ಎಸ್. ಬಾಲರಾಜು, ಬಿಜೆಪಿ ಮೈಸೂರು ನಗರಾಧ್ಯಕ್ಷ ಶ್ರೀ ಎಲ್. ನಾಗೇಂದ್ರ, ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಶ್ರೀ ಹೆಚ್.ಆರ್. ಮಹದೇವಸ್ವಾಮಿ, ಶ್ರೀ ಎಸ್. ಮಹದೇವಯ್ಯ, ಶ್ರೀ ರಾಜೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಶಾ ಹಾಗೂ ಶ್ರೀ ಅರುಣ್ ಯೋಗಿರಾಜ್‌ರಿಗೆ ಸನ್ಮಾನ





ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುತ್ತಿರುವ ಜಾತ್ರಾ ಮಹೋತ್ಸವದ ಕೊನೆ ದಿನದಂದು ಸುತ್ತೂರು ಮಠದಿಂದ ಕೇಂದ್ರ ಸಚಿವ **ಶ್ರೀ ಅಮಿತ್ ಶಾ** ಹಾಗೂ ಆಯೋಧ್ಯೆಯ ಶ್ರೀರಾಮಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆಗೊಂಡಿರುವ ಬಾಲರಾಮರ ವಿಗ್ರಹವನ್ನು ಕೆತ್ತಿರುವ ಮೈಸೂರಿನ ಶಿಲ್ಪಿ **ಶ್ರೀ ಅರುಣ್ ಯೋಗಿರಾಜ್** ಅವರನ್ನು ಸನ್ಮಾನಿಸಲಾಯಿತು. ಮಠದಲ್ಲಿರುವ ಗದ್ದುಗೆಗೆ ಶ್ರೀ ಅಮಿತ್ ಶಾ ರವರು ಪೂಜೆ ನೆರವೇರಿಸಿದರು. ವೇದಿಕೆಯಲ್ಲಿ ಶ್ರೀ ಅಮಿತ್ ಶಾ ಅವರಿಗೆ ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿ ಅವರು ಶಾಲು ಹೊದಿಸಿ, ಶ್ರೀಗಂಧದಲ್ಲಿ ನಿರ್ಮಿಸಿದ ಚಾಮುಂಡೇಶ್ವರಿ ವಿಗ್ರಹ ಹಾಗೂ ಶ್ರೀ ಅಮಿತ್ ಶಾ ಅವರ ಭಾವಚಿತ್ರವನ್ನು ನೀಡಿ ಸನ್ಮಾನಿಸಿದರು.



## ಪರಂಪರೆಯ ಪುನರುತ್ಥಾನಗೊಳಿಸಿದ ಪ್ರಧಾನಿ

ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ದೇಶದ ಸಂಸ್ಕೃತಿ, ಪರಂಪರೆಯನ್ನು ಉಳಿಸುವಂತಹ ಕಾರ್ಯವನ್ನು ಮಾಡುತ್ತಿದ್ದಾರೆ ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಶ್ರೀ ಅಮಿತ್ ಶಾ ತಿಳಿಸಿದರು. ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಶ್ರೀಕ್ಷೇತ್ರವಾದ ಸುತ್ತೂರಿನ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರಧಾನಿ ಶ್ರೀ ಮೋದಿಯವರು ಅಯೋಧ್ಯೆಯಲ್ಲಿ ರಾಮಮಂದಿರ, ಕಾಶಿಯಲ್ಲಿ ಕಾಶಿ ವಿಶ್ವನಾಥ ಕಾರಿಡಾರ್, ಉಜ್ಜಯಿನಿಯಲ್ಲಿ ಮಹಾ ಕಾಳೇಶ್ವರ ಕಾರಿಡಾರ್ ಸೇರಿದಂತೆ ದೇಶದ ಸಂಸ್ಕೃತಿ, ಪರಂಪರೆಯನ್ನು ಉಳಿಸುವಂತಹ ಕಾರ್ಯದೊಂದಿಗೆ ಉತ್ತಮವಾದ ಕೊಡುಗೆಯನ್ನು ದೇಶಕ್ಕಾಗಿ ನೀಡುವ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಪುನರುತ್ಥಾನ ಮಾಡುತ್ತಿದ್ದಾರೆ ಎಂದು ಹೇಳಿದರು.

ಶ್ರೀಕ್ಷೇತ್ರವಾದ ಸುತ್ತೂರಿನಲ್ಲಿ ನಡೆಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ಶ್ರೀಕ್ಷೇತ್ರದ ಮಠದ ಮುಂಭಾಗದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ಶಾಮನೂರು ಶಿವಶಂಕರಪ್ಪ ಅತಿಥಿ ಗೃಹವನ್ನು ಉದ್ಘಾಟಿಸಿದ ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಅಯೋಧ್ಯೆಯಲ್ಲಿ ರಾಮಮಂದಿರ, ಕಾಶಿಯಲ್ಲಿ ಕಾಶಿ ವಿಶ್ವನಾಥ ಕಾರಿಡಾರ್, ಉಜ್ಜಯಿನಿಯಲ್ಲಿ ಮಹಾಕಾಳೇಶ್ವರ ಕಾರಿಡಾರ್ ಸೇರಿದಂತೆ ದೇಶದ ಸಂಸ್ಕೃತಿ, ಪರಂಪರೆಯನ್ನು ಉಳಿಸುವಂತಹ ಕಾರ್ಯದೊಂದಿಗೆ ಉತ್ತಮವಾದ ಕೊಡುಗೆಯನ್ನು ದೇಶಕ್ಕಾಗಿ ನೀಡುವ ಮೂಲಕ ಸಾಂಸ್ಕೃತಿಕ ಪರಂಪರೆಯನ್ನು ಪುನರುತ್ಥಾನ ಮಾಡುತ್ತಿದ್ದಾರೆ ಎಂದು ಹೇಳಿದರು. ನಮ್ಮ ದೇಶದ ಸುರಕ್ಷತೆ, ಸಮೃದ್ಧಿಗೆ ಶ್ರಮಿಸುತ್ತಿರುವ ಪ್ರಧಾನಿ ಶ್ರೀ ಮೋದಿಯವರು ಯೋಗ, ಆಯುರ್ವೇದ, ಸಾಂಸ್ಕೃತಿಕ ಕ್ಷೇತ್ರಗಳಿಗೆ ಹೆಚ್ಚಿನ ಒತ್ತು, ಆದ್ಯತೆಯನ್ನು ನೀಡಿ, ಕೆಲಸ ಮಾಡುತ್ತಿದ್ದಾರೆ, ನಶಿಸಿ ಹೋಗುತ್ತಿದ್ದ ನಮ್ಮ ಸಂಸ್ಕೃತಿಯನ್ನು ಉಳಿಸಿ, ಅವನ್ನು ಪುನರ್ ಪ್ರತಿಷ್ಠಾಪನೆ ಮಾಡುವ ಮೂಲಕ ಪುನರುಜ್ಜೀವನಗೊಳಿಸುತ್ತಿದ್ದಾರೆ ಎಂದು ತಿಳಿಸಿದರು.



## ಬಲಿಷ್ಠ ಭಾರತಕ್ಕೆ ಮೋದಿ, ಶಾ ಕಾರಣ – ಸುತ್ತೂರು ಶ್ರೀ

ಒಂದು ಗಾಡಿ ಮುನ್ನಡೆಯಲು ಜೋಡಿ ಎತ್ತುಗಳು ಹೇಗೆ ಮುಖ್ಯವೋ, ಹಾಗೆಯೇ ದೇಶವನ್ನು ಪ್ರಧಾನಿ ಶ್ರೀ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಶ್ರೀ ಅಮಿತ್ ಶಾ ಮುನ್ನಡೆಸುತ್ತಿದ್ದಾರೆ ಎಂದು ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು. ಶ್ರೀ ಅಮಿತ್ ಶಾ ಅವರು ಸರ್ದಾರ್ ವಲ್ಲಭಭಾಯಿ ಪಟೇಲರಂತೆ ಉಕ್ಕಿನ ಮನುಷ್ಯ ಹಾಗೂ ಚಾಣಕ್ಯನಂತೆ ದೇಶದ ಏಕತೆ ಮತ್ತು ಸಮಗ್ರತೆಗಾಗಿ ಹಲವು ಗಟ್ಟಿ ನಿರ್ಧಾರಗಳನ್ನು ಕೈಗೊಂಡವರು, ಪ್ರಧಾನಿ ಶ್ರೀ ನರೇಂದ್ರ ಮೋದಿ ಮತ್ತು ಶ್ರೀ ಅಮಿತ್ ಶಾ ಅವರು ದೇಶವನ್ನು ಮುನ್ನಡೆಸುತ್ತಿರುವ ಜೋಡೆತ್ತುಗಳಂತೆ ಎಂದು ಶ್ಲಾಘಿಸಿದರು.

ಶ್ರೀ ಅಮಿತ್ ಶಾ ಅವರು ಮಹಾಜ್ಞಾನಿಗಳು, ಪಂಡಿತರು. ವೇದ, ಉಪನಿಷತ್ತು, ರಾಮಾಯಣ, ಮಹಾಭಾರತದ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಅವರಿಗೆ ಈ ರೀತಿಯ ಜ್ಞಾನ, ವಿದ್ವತ್ ಸಂಪತ್ತು ಬರುವುದಕ್ಕೆ ಮೈಸೂರಿನ ಕೊಡುಗೆಯೂ ಇದೆ. ರಾಜರ ಆಳ್ವಿಕೆ ಹೋಗಿ ಪ್ರಜಾಪ್ರಭುತ್ವ ಆಡಳಿತ ಜಾರಿಗೆ ಬಂದ ವೇಳೆ, ಮೈಸೂರು ಮಹಾರಾಜರ ಆಶ್ರಯದಲ್ಲಿದ್ದ ಅನೇಕ ಪಂಡಿತರು ಚದುರಿ ಹೋದರು, ಅವರಲ್ಲಿ ಒಬ್ಬರಾದ ಶ್ರೀ ಕೇಶವ ಪಂಡಿತ್ ಅವರು ಗುಜರಾತಿಗೆ ಹೋದಾಗ ಶ್ರೀ ಅಮಿತ್ ಶಾ ಅವರ ತಂದೆ ಅವರಿಗೆ ಆಶ್ರಯವನ್ನು ನೀಡಿದರು. ಶ್ರೀ ಕೇಶವ ಪಂಡಿತ್ ಅವರು ಶ್ರೀ ಅಮಿತ್ ಶಾ ಅವರಿಗೆ ಶಿಕ್ಷಣ ನೀಡಿದ್ದಾರೆ, ಹಾಗಾಗಿಯೇ ಶ್ರೀ ಅಮಿತ್ ಶಾ ಅವರು ರಾಷ್ಟ್ರಮಟ್ಟದಲ್ಲಿ ಬೆಳೆದಿದ್ದಾರೆ ಎಂದು ತಿಳಿಸಿದರು. ಇದು ನಮ್ಮ ಜಾತ್ರೆ ಎಂದು ಜನರು ಸುತ್ತೂರು ಜಾತ್ರೆಗೆ ಬರುತ್ತಾರೆ. ಗ್ರಾಮೀಣ ಜನರಿಗೆ ಧೈರ್ಯ, ವಿಶ್ವಾಸ ಮೂಡಿಸುವ ಕೆಲಸ ಆಗಿದೆ. ಶ್ರೀ ಅಮಿಶ್ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು ಸಂತೋಷವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಬಸವರಾಜ್ ಬೊಮ್ಮಾಯಿ, ವಿಪಕ್ಷ ನಾಯಕ ಶ್ರೀ ಆರ್. ಅಶೋಕ, ಮಾಜಿ ಸಚಿವ ಶ್ರೀ ಸಿ.ಟಿ. ರವಿ, ಸಂಸದರಾದ ಶ್ರೀ ಪ್ರತಾಪ್ ಸಿಂಹ, ಶ್ರೀ ಪ್ರಭಾಕರ್ ಕೋರೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.




# ಶ್ರೀ ಬಾಲರಾಮ ಪ್ರಾಣ ಪ್ರತಿಷ್ಠಾಪನೆ

500 ವರ್ಷಗಳ ಬಳಿಕ ರಾಮನೂರಿನಲ್ಲಿ ಧಾರ್ಮಿಕ ಉತ್ಸವದ ಮೂಲಕ ಹೊಸದಾಗಿ ನಿರ್ಮಿಸಲಾದ ಮಂದಿರದಲ್ಲಿ ರಾಮಲಲ್ಲಾ ವಿಗ್ರಹ ಪ್ರತಿಷ್ಠಾಪಿಸುವುದರೊಂದಿಗೆ ಅಯೋಧ್ಯೆ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿದೆ. ಶ್ರೀ ರಾಮನ ಪಟ್ಟಾಭಿಷೇಕದ ವೇಳೆ ಇದ್ದಂತಹ ಸಂಭ್ರಮದ ವಾತಾವರಣ ಪ್ರಾಣ ಪ್ರತಿಷ್ಠೆ ಸಂದರ್ಭದಲ್ಲಿಯೂ ಕಂಡು ಬಂದಿತು. ಈ ಐತಿಹಾಸಿಕ ದಿನಕ್ಕಾಗಿ ಸಜ್ಜುಗೊಂಡಿದ್ದ ಅಯೋಧ್ಯೆಯಲ್ಲಿ ಎಲ್ಲಿ ನೋಡಿದರೂ ರಾಮನ ಬೃಹತ್ ಕಟೌಟ್, ಕೇಸರಿ ಧ್ವಜಗಳು, ವಿವಿಧ ಬಗೆಯ ಹೂಗಳಿಂದ ಅಲಂಕೃತಗೊಂಡಿದ್ದು, ವಿಶೇಷ ಕಳೆಗಟ್ಟಿತ್ತು.

## ಮಾಣಿಕ್ಯ, ರತ್ನಖಚಿತ ಬಾಲರಾಮ

ರಘುಕುಲ ತಿಲಕ ಶ್ರೀರಾಮನಿಗೆ ವಿವಿಧ ವರ್ಣಗಳ, ಪುಷ್ಪಗಳು, ಆಕರ್ಷಕ ಧಿರಿಸು ಹಾಗೂ ಬಂಗಾರ-ಮುತ್ತು ಮಾಣಿಕ್ಯಪೋಣಿತ, ರತ್ನಖಚಿತ ಒಡವೆಗಳು. ಬನಾರಸಿ ಧೋತಿ, ಕೆಂಪು ವರ್ಣದ ಉತ್ತರೀಯ ಚಿನ್ನದ ನೂಲಿನಿಂದ ಕಸೂತಿ, ಕರಗಳಲ್ಲಿ ಪುಟ್ಟ ರತ್ನ ಖಚಿತ ಬಳೆಗಳು, ಕೊರಳಿಗೆ ರತ್ನಖಚಿತ ಬಂಗಾರದ ತ್ರಿವಳಿ ಹಾರಗಳು. ಮಾಣಿಕ್ಯ ಪೋಣಿತ ಬಂಗಾರದ ಕಂಠಹಾರ.



## ಜಟಾಯು ಪ್ರತಿಮೆ ಅನಾವರಣ

ಅಯೋಧ್ಯೆಯ ರಾಮಮಂದಿರದ ಆವರಣದಲ್ಲಿರುವ ಕುಬೇರ ಶಿಲಾಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಭೇಟಿ ನೀಡಿ ಶಿವನಿಗೆ ಜಲಾಭಿಷೇಕ ಮಾಡಿ, ಪ್ರದಕ್ಷಿಣೆ ಹಾಕಿದರು. ರಾವಣನಿಂದ ಸೀತಾದೇವಿಯನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾಗ ಕೊಲ್ಲಲ್ಪಟ್ಟ ಪೌರಾಣಿಕ ಪಕ್ಷಿ ಜಟಾಯುವಿನ ಪ್ರತಿಮೆಯನ್ನು ಪ್ರಧಾನಿ ಶ್ರೀ ಮೋದಿ ರವರು ಅನಾವರಣಗೊಳಿಸಿದರು.




## ಐಎಎಫ್ ಹೆಲಿಕಾಪ್ಟರ್‌ನಿಂದ ಪುಷ್ಪ ಮಳೆ

ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ರಾಮಲಲ್ಲಾನ ವಿಗ್ರಹ ಅನಾವರಣಗೊಳಿಸುತ್ತಿದ್ದಂತೆ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ಗಳು ದೇಗುಲದ ಆವರಣದಲ್ಲಿ ಪುಷ್ಪ ಮಳೆಗಳನ್ನು ಸುರಿಸಿದ ಕ್ಷಣಕ್ಕೆ ಭಕ್ತರು ಸಾಕ್ಷಿ.ಯಾದರು. ಭಕ್ತರಿಂದ ಶ್ರೀರಾಮ್ ಘೋಷಣೆ ಮೊಳಗಿತ್ತು.



## ಕಾರ್ಮಿಕರ ಮೇಲೆ ಪುಷ್ಪವೃಷ್ಟಿ

ದೇಗುಲ ನಗರಿ ಅಯೋಧ್ಯೆ, ರಾಮಮಂದಿರ ನಿರ್ಮಾಣದಲ್ಲಿ ಕಾರ್ಯನಿರ್ವಹಿಸಿದ ಶ್ರಮಿಕರ ಮೇಲೆ ಪ್ರಧಾನಿ ಶ್ರೀ ನರೇಂದ್ರ ಮೋದಿಯವರಿಂದ ಹೂವಿನ ದಳಗಳ ಮಳೆ.



## 10 ಲಕ್ಷ ರಾಮಜ್ಯೋತಿಗಳು

ರಾಮಮಂದಿರ ಲೋಕಾರ್ಪಣೆ ಹಿನ್ನೆಲೆಯಲ್ಲಿ ಅಯೋಧ್ಯೆಯ ಸರಯೂ ನದಿಯ ದಡದ ಮೇಲೆ 10 ಲಕ್ಷ ದೀಪಗಳು ಬೆಳಗಿ, ಸಂಭ್ರಮಕ್ಕೆ ಸಾಕ್ಷಿಯಾದವು. ಪ್ರಧಾನಿ ನಿವಾಸ ಸೇರಿದಂತೆ ದೇಶಾದ್ಯಂತ ರಾಮಜ್ಯೋತಿಗಳು ಬೆಳಗಿದವು.



# ಟೆಂಟ್‌ನಿಂದ ಮಂದಿರಕ್ಕೆ ಶ್ರೀರಾಮ

### ಶತಮಾನಗಳ ಕಾಯುವಿಕೆ ಕೊನೆ;
### ಇಷ್ಟು ದಿನ ಟೆಂಟ್‌ನಲ್ಲಿಟ್ಟದ್ದಕ್ಕೆ ರಾಮನ ಕ್ಷಮೆ ಕೋರುತ್ತೇನೆ

**- ಪ್ರಧಾನಿ ಶ್ರೀ ನರೇಂದ್ರ ಮೋದಿ**

ಪ್ರಭು ಶ್ರೀರಾಮಚಂದ್ರ ಇನ್ನು ಮುಂದೆ ಟೆಂಟ್‌ನಲ್ಲಿರುವುದಿಲ್ಲ. ಆಯೋಧ್ಯೆ ಭವ್ಯ ಮಂದಿರದಲ್ಲಿ ಆತ ವಿರಾಜಮಾನರಾಗಿದ್ದಾನೆ. ಇಷ್ಟು ದಿನ ಮಂದಿರ ನಿರ್ಮಾಣ ವಿಳಂಬವಾದುದಕ್ಕೆ ರಾಮನ ಕ್ಷಮೆ ಕೇಳುತ್ತೇನೆ' ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಹೇಳಿದರು. ಅಯೋಧ್ಯೆ ಶ್ರೀರಾಮ ಮಂದಿರದ ಲೋಕಾರ್ಪಣೆ ಸಮಾರಂಭದಲ್ಲಿ ಪಾಲ್ಗೊಂಡು ರಾಮಲಲ್ಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಬಳಿಕ ಹೊರಾಂಗಣದಲ್ಲಿ ನಡೆದ ಕಾರ್ಯ ಕ್ರಮದಲ್ಲಿ ನೆರೆದಿದ್ದ ಗಣ್ಯರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, 'ಶತಮಾನಗಳ ಕಾಯುವಿಕೆ, ತಾಳ್ಮೆ, ತ್ಯಾಗದ ನಂತರ ಕೊನೆಗೂ ಇಂದು ನಮ್ಮ ರಾಮ ಆಗಮಿಸಿದ್ದಾನೆ. ಪ್ರತಿಯೊಬ್ಬ ಭಾರತೀಯನ ಅಂತರಂಗದಲ್ಲಿ ವಿರಾಜಮಾನನಾಗಿದ್ದಾನೆ. ಇನ್ನು ಮುಂದೆ ಆತ ಟೆಂಟ್‌ನಲ್ಲಿರುವುದಿಲ್ಲ. ರಾಮ ಪ್ರತಿಯೊಬ್ಬ ಭಾರತೀಯನ ಅಂತರಂಗದಲ್ಲಿ ನೆಲೆಸಿದ್ದಾನೆ. ಈ ಶುಭ ಸಂದರ್ಭದಲ್ಲಿ ನಾನು ದೇಶದ ಪ್ರಜೆಗಳನ್ನು ಅಭಿನಂದಿಸುತ್ತೇನೆ, ಈ ಸಮರ್ಪಣೆಯ ಕ್ಷಣವು ಭಗವಾನ್ ರಾಮನ ಆಶೀರ್ವಾದ ಎಂದು ಹೊಗಳಿದರು.

ನಮ್ಮ ತಪಸ್ಸಿನಲ್ಲಿ ಕೆಲವು ನ್ಯೂನತೆಗಳು ಇದ್ದಿರಬಹುದು. ಹಾಗಾಗಿಯೇ ನಾವು ಮಂದಿರ ನಿರ್ಮಾಣದ ಈ ಕೆಲಸವನ್ನು ಇಷ್ಟು ದೀರ್ಘಕಾಲ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಆ ನ್ಯೂನತೆ ಈಗ ನಿವಾರಣೆಯಾಗಿದೆ. ಭಗವಾನ್ ರಾಮ ನಮ್ಮನ್ನು ಕ್ಷಮಿಸುತ್ತಾನೆ ಎಂಬ ವಿಶ್ವಾಸ ನನಗಿದೆ. ದೇವಸ್ಥಾನದ ಗರ್ಭಗುಡಿಯಲ್ಲಿ ದೈವಿಕ ಪ್ರಜ್ಞೆಯನ್ನು ಕಾಣುವ ಮನಸುಗಳನ್ನೊಳಗೊಂಡು ನಿಮ್ಮ ಮುಂದೆ ನಾನು ಬಂದಿದ್ದೇನೆ. ಹೇಳಲು ತುಂಬಾ ಇದೆ ಆದರೆ, ನನ್ನ ಗಂಟಲು ಕಟ್ಟಿಕೊಂಡಿದೆ ಎಂದು ಪ್ರಧಾನಿ ಭಾವುಕರಾದರು.

**ಹೊಸ ಯುಗದ ಉದಯ :** ಜನವರಿ 22, ಕೇವಲ ಕ್ಯಾಲೆಂಡರ್‌ನ ದಿನಾಂಕವಲ್ಲ, ಹೊಸ ಯುಗದ ಉದಯ, ಈ ಐತಿಹಾಸಿಕ ಘಟನೆಗೆ ಸಾಕ್ಷಿಯಾಗಲು ನಾವು ಜೀವಂತವಾಗಿರುವುದೇ ಒಂದು ಸೌಭಾಗ್ಯ. ಭವಿಷ್ಯವು ನಮ್ಮ ಭೂತಕಾಲಕ್ಕಿಂತ ಹೆಚ್ಚು ಮುಖ್ಯ, ರಾಮನು ಇನ್ನು ಮುಂದೆ ಸಮಸ್ಯೆಯಲ್ಲ, ರಾಮನೇ ಪರಿಹಾರ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದ್ದಾರೆ. ರಾಮನ ಮಂದಿರವನ್ನು ನಿರ್ಮಿಸಲಾಗಿದೆ. ಮುಂದೆ ಏನು? ಪ್ರತಿಯೊಬ್ಬ ಪ್ರಜೆಗಳ ಪ್ರಜ್ಞೆಯೂ ದೇವರಿಂದ ದೇಶಕ್ಕೆ, ರಾಮನಿಂದ ರಾಷ್ಟ್ರಕ್ಕೆ ವಿಸ್ತರಿಸಬೇಕು ಎಂದು ಹೇಳಿದರು.

**ಬೆಂಕಿಯಲ್ಲ, ಜಾಗೃತಿಯ ಬೆಳಕು :** ರಾಮಮಂದಿರ ಉದ್ಘಾಟನೆ ಈ ಐತಿಹಾಸಿಕ ಸಂದರ್ಭದಲ್ಲಿ ಭಾರತದಾದ್ಯಂತ ರಾಮನಾಮ ಆಚರಣೆಗಳು ನಡೆಯುತ್ತಿವೆ. ನಾವು ಬೆಂಕಿಯನ್ನು ಹಬ್ಬಿಸುತ್ತಿಲ್ಲ, ಬದಲಿಗೆ ಜಾಗೃ ತಿಯ ಕಿಡಿಯನ್ನು ಉದ್ದೀಪಿಸಿ, ಭಾರತವನ್ನು ಪುನಃ ಶಕ್ತಿಯುತಗೊಳಿಸುತ್ತಿದ್ದೇವೆ ಎಂದು ಪ್ರಧಾನಿ ಶ್ರೀ ಮೋದಿ ಘೋಷಿಸಿದರು. ರಾಮನ ಅಸ್ತಿತ್ವವನ್ನು ಪ್ರಶ್ನಿಸುತ್ತಿರುವವರನ್ನು ತೀವ್ರ ತರಾಟೆಗೆ ತೆಗೆದುಕೊಂಡ ಅವರು, ಭಾರತದ ಸಂವಿಧಾನದಲ್ಲಿ, ಅದರ ಮೊದಲ ಪುಟದಲ್ಲೇ ಶ್ರೀರಾಮನಿದ್ದಾನೆ. ಕಾನೂನಿನ ಘನತೆಯನ್ನು ಕಾಪಾಡಿದ್ದಕ್ಕಾಗಿ ನಾನು ಸುಪ್ರೀಂ ಕೋರ್ಟ್‌ಗೆ ಧನ್ಯವಾದ ಹೇಳುತ್ತೇನೆ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದರು.

ರಾಮ ಮಂದಿರ ನಿರ್ಮಾಣಕ್ಕೆ ಕೆಲವರು ಬೆಂಕಿ ಹಚ್ಚುತ್ತೇವೆ ಎಂದು ಬೆದರಿಕೆ ಒಡ್ಡಿದ್ದಾರೆ. ಇಂತಹವರಿಗೆ ಭಾರತದ ಸಾಮಾಜಿಕ ಪ್ರಜ್ಞೆಯ ಪರಿಶುದ್ಧತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ರಾಮಲಲ್ಲಾನ ಈ ದೇವಾಲಯದ ನಿರ್ಮಾಣವು ಭಾರತೀಯ ಸಮಾಜದ ಶಾಂತಿ, ತಾಳ್ಮೆ ಮತ್ತು ಪರಸ್ಪರ ಸೌಹಾರ್ದದ ಸಂಕೇತವಾಗಿದೆ. ಶ್ರೀರಾಮನು ಬೆಂಕಿಯಲ್ಲ, ಅವನು ಶಕ್ತಿ. ರಾಮನು ವಿವಾದವಲ್ಲ, ಅವನು ಪರಿಹಾರ. ರಾಮನು ಕೇವಲ ನಮ್ಮವನಲ್ಲ, ಅವನು ಎಲ್ಲರಿಗೂ ಸೇರಿದವನು. ನಾವು ಇಂದು ಕೇವಲ ರಾಮಲಲ್ಲಾನ ವಿಗ್ರಹದ ಪ್ರಾಣ ಪ್ರತಿಷ್ಠೆಗೆ ಮಾತ್ರವಲ್ಲ, ಭಾರತದ ಮುರಿಯಲಾಗದ ಏಕತೆಯ ಪ್ರಾಣ ಪ್ರತಿಷ್ಠೆಗೂ ಸಾಕ್ಷಿಯಾಗಿದ್ದೇವೆ ಎಂದು ಪ್ರಧಾನಿ ಶ್ರೀ ಮೋದಿ ತಿಳಿಸಿದರು.

**ರಾಷ್ಟ್ರೀಯ ಪ್ರಜ್ಞೆಯ ಕೇಂದ್ರ : ರಾಮ ಭಾರತದ ನಂಬಿಕೆ, ರಾಮ ಭಾರತದ ಅಡಿಪಾಯ. ರಾಮ ಭಾರತದ ಕಲ್ಪನೆ, ರಾಮ ಭಾರತದ ಕಾನೂನು, ರಾಮ ಭಾರತದ ಪ್ರತಿಷ್ಠೆ, ರಾಮ ಭಾರತದ ವೈಭವ, ರಾಮ ನಾಯಕ ಮತ್ತು ರಾಮ ನೀತಿ. ರಾಮ ಶಾಶ್ವತ, ರಾಮನನ್ನು ಗೌರವಿಸಿದಾಗ, ಅದರ ಪರಿಣಾಮವು ವರ್ಷ, ಶತಮಾನಗಳವರೆಗೆ ಮಾತ್ರವಲ್ಲ, ಸಾವಿರಾರು ವರ್ಷಗಳವರೆಗೆ ಇರುತ್ತದೆ. ರಾಮ ಮಂದಿರ ನಿರ್ಮಾಣವು ಭಾರತೀಯ ಸಮಾಜದ ಪ್ರಬುದ್ಧತೆಯ ಪ್ರತಿಬಿಂಬವಾಗಿದೆ. ಇದು ಕೇವಲ ವಿಜಯದ ಮಾತ್ರವಲ್ಲ, ನಮ್ರತೆಯ ಸಂದರ್ಭವೂ ಆಗಿದೆ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದರು.**

## ಅಯೋಧ್ಯೆಯಲ್ಲಿ ಇನ್ನು ಮುಂದೆ ದೀಪೋತ್ಸವ – ದೇಶವಿಡೀ ರಾಮಮಯ

ನಮಗೆಲ್ಲರಿಗೂ ಇಂದು ಭಾವನಾತ್ಮಕ ಕ್ಷಣವಾಗಿದ್ದು, 500 ವರ್ಷಗಳ ನಿರೀಕ್ಷೆ ಬಳಿಕ ನೆರವೇರಿದೆ. ಇಡಿ ದೇಶವೇ ಶ್ರೀರಾಮನ ಭಕ್ತಿಯಲ್ಲಿ ಮಿಂದು, ರಾಮ ಮಯವಾಗಿದೆ. ನಾವೆಲ್ಲರೂ ತ್ರೇತಾಯುಗದಲ್ಲಿರುವಂತೆ ಭಾಸವಾಗುತ್ತಿದೆ. ಶ್ರೀರಾಮನ ಕೃಪೆಯಿಂದ ಇನ್ನು ಮುಂದೆ ಅಯೋಧ್ಯೆಯ ಬೀದಿಗಳಲ್ಲಿ ಗುಂಡಿನ ಸದ್ದು ಕೇಳುವುದಿಲ್ಲ. ಮಾತ್ರವಲ್ಲದೆ, ಕರ್ಫ್ಯೂ ಕೂಡ ವಿಧಿಸಲಾಗುವುದಿಲ್ಲ. ಬದಲಿಗೆ ಇಲ್ಲಿನ ಬೀದಿಗಳು ದೀಪೋತ್ಸವ,



ರಾಮೋತ್ಸವ ಮತ್ತು ಶ್ರೀರಾಮ ಸಂಕೀರ್ತನೆಗೆ ಸಾಕ್ಷಿಯಾಗಲಿವೆ. ಅವಧಪುರಿಯಲ್ಲಿ ರಾಮಲಲ್ಲಾ ಉಪಸ್ಥಿತಿಯೊಂದಿಗೆ ರಾಮರಾಜ್ಯದ ಘೋಷಣೆಯಾಗಿದೆ. ರಾಮ ರಾಜ್ಯವು ತಾರತಮ್ಯವಿಲ್ಲದ ಸಾಮರಸ್ಯದ ಸಮಾಜ ಸಂಕೇತಿಸುತ್ತದೆ. ಇದು ನಮ್ಮ ಪ್ರಧಾನಿಯವರ ನೀತಿಗಳು, ಆಲೋಚನೆಗಳು ಮತ್ತು ಯೋಜನೆಗಳ ಆಧಾರವಾಗಿದೆ.

**ರಾಮನಿಗಾಗಿ ಮಾಡಿದ ತ್ಯಾಗ ಇಂದು ಸಫಲ:** ಒಂದು ರಾಷ್ಟ್ರದ ಬಹುಸಂಖ್ಯಾತ ಸಮುದಾಯ ತಮ್ಮದೇ ದೇಶದಲ್ಲಿ, ತಮ್ಮದೇ ದೇವರ ಜನ್ಮಸ್ಥಳದಲ್ಲಿ ಮಂದಿರ ನಿರ್ಮಿಸಲು ಸುಮಾರು 500 ವರ್ಷ ಕಾದಿರುವ ವಿಶ್ವದ ಮೊದಲ ನಿದರ್ಶನವಾಗಿದೆ. ಸಂತರು, ತಪಸ್ವಿಗಳು, ನಿಹಾಂಗ್‌ಗಳು, ಬುದ್ಧಿಜೀವಿಗಳು, ರಾಜಕಾರಣಿಗಳು ಮತ್ತು ಬುಡಕಟ್ಟು ಜನಾಂಗದವರು ಸೇರಿದಂತೆ ಸಮಾಜದ ಪ್ರತಿಯೊಂದು ವರ್ಗವು ಜಾತಿ, ಸಿದ್ಧಾಂತ, ತತ್ವಶಾಸ್ತ್ರ ಮತ್ತು ಪೂಜಾ ವಿಧಾನಗಳನ್ನು ಮೀರಿ ಬೆಳೆದು ರಾಮನಿಗಾಗಿ ತಮ್ಮ ಜೀವನವನ್ನೇ ತ್ಯಾಗಮಾಡಿತ್ತು. ಮಂದಿರ ನಿರ್ಮಿಸಲು ನಿರ್ಧರಿಸಿದ ಸ್ಥಳದಲ್ಲಿ ನಿಖರವಾಗಿ ನಿರ್ಮಿಸಲಾಗಿದ್ದು, ಇದರಿಂದ ಹಲವರ ಆತ್ಮ ಸಂತೋಷಗೊಂಡಿದೆ.

**ಮಂದಿರವಲ್ಲೇ ಕಟ್ಟಿದ್ದೇವೆ:** ಶ್ರೀರಾಮನ ಜನ್ಮಭೂಮಿಯಲ್ಲಿಯೇ ಮಂದಿರ ನಿರ್ಮಿಸುವ ಮೂಲಕ ಈ ಹಿಂದೆ ಮಾಡಲಾಗಿದ್ದ ಮಂದಿರವಲ್ಲೇ ಕಟ್ಟುವೆವು ಎಂಬ ನಿರ್ಧಾರ ಈಗ ನೆರವೇರಿದೆ. ಆ ಮೂಲಕ ಕೊಟ್ಟ ಮಾತನ್ನು ಈಡೇರಿಸಲಾಗಿದೆ.

ಜನಮಾನಸದಲ್ಲಿ ನೆಲೆಸಿರುವ ಶ್ರೀರಾಮನ ವಿಗ್ರಹಕ್ಕೆ ರೂಪ ನೀಡಿದ ಶಿಲ್ಪಿ ಧನ್ಯರು. ಮೈಸೂರು ಮೂಲದ ಶ್ರೀ ಅರುಣ್ ಯೋಗಿರಾಜ್ ಅವರ ಕಾರ್ಯವನ್ನು ಶ್ಲಾಘನೀಯ.




# ರಾಜ್ಯ ಕಾರ್ಯಕಾರಿಣಿ

## 800 ಕ್ಕೂ ಹೆಚ್ಚು ಅಪೇಕ್ಷಿತರ ಪಾಲ್ಗೊಳ್ಳುವಿಕೆಯಲ್ಲಿ ಯಶಸ್ವಿಯಾಗಿ ನಡೆದ ಕಾರ್ಯಕಾರಿಣಿಯ ಸಂಕ್ಷಿಪ್ತ ವರದಿ.



**ಬಿದರೆ ಪ್ರಕಾಶ್**
ಸಂಪಾದಕರು, ಕಮಲಪಥ ಮಾಸಿಕ

ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಆಯ್ಕೆಯ ನಂತರ ಮೊದಲ ರಾಜ್ಯಕಾರ್ಯಕಾರಿಣಿ ಸಭೆ 27.01.2024 ರಂದು ಅರಮನೆ ಮೈದಾನದಲ್ಲಿ ನಡೆಯಿತು. ರಾಜ್ಯನೂತನ ಅಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿಣಿಯಲ್ಲಿ ಮುಂಬರುವ ಲೋಕಸಭಾ ಚುನಾವಣೆಯನ್ನು ಗೆಲ್ಲಲು ಸಮಗ್ರ ಚಿಂತನೆ ನಡೆಸಲಾಯಿತು. ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆಗಳ ಅವಲೋಕನದ ಜೊತೆಗೆ, ಮುಂದಿನ ಕಾರ್ಯತಂತ್ರ ಹೇಗಿರಬೇಕೆಂಬುದರ ಚರ್ಚೆ ನಡೆಯಿತು. ಅಲ್ಲದೆ, ಎರಡು ನಿರ್ಣಯಗಳನ್ನು ಅಂಗೀಕರಿಸಲಾಯಿತು.



# ಲೋಕಸಭೆ ಗೆಲ್ಲಲು ತಂತ್ರ...



### ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಮೂಲ ಮಂತ್ರದಡಿ ಅಭಿವೃದ್ಧಿ ಕಾರ್ಯ

ದೇಶದಲ್ಲಿ ಮೋದಿ ಗ್ಯಾರಂಟಿ ಎಂದರೆ ಅದು ನೈಜ ಗ್ಯಾರಂಟಿ ಎಂದು ಜನರು ಅರ್ಥ ಮಾಡಿಕೊಂಡಿದ್ದಾರೆ. ವಿಕಸಿತ ಭಾರತ ಯಾತ್ರೆಯಿಂದ ಇದು ಸಾಧ್ಯವಾಗಿದೆ ಎಂದು ಕೇಂದ್ರ ಸಚಿವ ಶ್ರೀ ಭೂಪೇಂದ್ರ ಯಾದವ್ ಅವರು ವಿಶ್ಲೇಷಿಸಿದರು.

ರಾಜ್ಯ ಬಿಜೆಪಿ ವಿಶೇಷ ಕಾರ್ಯಕಾರಿಣಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸುಳ್ಳು ಗ್ಯಾರಂಟಿಗಳ ಮೂಲಕ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ ಎಂಬ ವಿಷಯವನ್ನು ಲೋಕಸಭಾ ಚುನಾವಣಾ ಪ್ರಚಾರಕ್ಕೆ ತೆರಳಿದಾಗ ತಿಳಿಸುವಂತೆ ಅವರು ಮನವಿ ಮಾಡಿದರು. ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಡದ ಜನತೆ ಕಾಂಗ್ರೆಸ್ ಪಕ್ಷದ ಸುಳ್ಳು ಗ್ಯಾರಂಟಿಯನ್ನು ತಿರಸ್ಕರಿಸಿದ್ದಾರೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ 400 ಸೀಟುಗಳೊಂದಿಗೆ ಪ್ರಧಾನಿ ಶ್ರೀ ಮೋದಿಯವರು ಮತ್ತೊಮ್ಮೆ ಪ್ರಧಾನಿ ಆಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದಲಿತ ಮಹಿಳೆಯನ್ನು ರಾಷ್ಟ್ರಪತಿ ಮಾಡಲು ನಾವು ಮುಂದಾದರೆ, ಕಾಂಗ್ರೆಸ್ಸಿಗರು ಅದರ ವಿರುದ್ಧ ಮತ ಚಲಾಯಿಸಿದರು. ಒಬಿಸಿ ಸಮಾಜಕ್ಕೆ ಸಂವಿಧಾನಿಕ ಹಕ್ಕು ಕೊಡಲು ಮುಂದಾದರೆ ಅದನ್ನೂ ಕಾಂಗ್ರೆಸ್ ವಿರೋಧಿಸಿದೆ ಎಂದು ಆಕ್ಷೇಪಿಸಿದರು. ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ, ರಾಜಕೀಯ ನ್ಯಾಯ ಮತ್ತು ಸಮಾನತೆಯ ಆಧಾರದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವನ್ನು ಹಲವು ದಶಕಗಳ ಕಾಲ ದೇಶದ ಆಳ್ವಿಕೆ ನಡೆಸಿದ ಕಾಂಗ್ರೆಸ್ ಪಕ್ಷವು ಸರಿಯಾಗಿ ಅನುಷ್ಠಾನಗೊಳಿಸಲಿಲ್ಲ ಎಂದು ಟೀಕಿಸಿದರು.



### ಲೋಕಸಭಾ ಸಮರ ದೊಡ್ಡ ಸತ್ವಪರೀಕ್ಷೆ

ಲೋಕಸಭಾ ಸಮರವು ನಮ್ಮೆಲ್ಲರಿಗೆ ಬಹುದೊಡ್ಡ ತಿರುವಿನ ಸತ್ವ ಪರೀಕ್ಷೆಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಮತ್ತು ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯರಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ತಿಳಿಸಿದರು.

ವಿಶೇಷ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಅವರು, 2019ರಲ್ಲಿ 26 ಸ್ಥಾನಗಳನ್ನು ಗೆಲ್ಲಲಾಗಿತ್ತು. ಇದು ಜನರ ಸಂಕಲ್ಪ ಶಕ್ತಿಯಾಗಿತ್ತು. ಈ ಬಾರಿ 28ಕ್ಕೆ 28

ಕ್ಷೇತ್ರಗಳನ್ನು ಗೆಲ್ಲುವ ಮೂಲಕ ಪ್ರಧಾನಿ ಶ್ರೀ ನರೇಂದ್ರ ಮೋದಿಯವರಿಗೆ ನಮ್ಮದೇ ಆದ ಕೊಡುಗೆ ನೀಡಬೇಕಿದೆ ಎಂದು ಮನವಿ ಮಾಡಿದರು.

ಜನರಿಗೆ ದಿಕ್ಕು ತಪ್ಪಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಕಲಹದಲ್ಲಿ ತೊಡಗಿದೆ. ಇವರ ಕಚ್ಚಾಟದಿಂದ ಆಡಳಿತ ಕುಸಿದು ಬಿದ್ದಿದೆ, ಭ್ರಷ್ಟಾಚಾರ ತಾಂಡವವಾಡುತ್ತಿದೆ, ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂದು ಹೇಳಿದರು. ಈ ಸರ್ಕಾರಕ್ಕೆ ಬರಗಾಲದಲ್ಲಿ ರೈತರ ಕಣ್ಣೀರು ಒರೆಸಲು ಆಗಿಲ್ಲ, ಹೆಣ್ಣು ಮಕ್ಕಳ ಮಾನ ರಕ್ಷಿಸಲು ಸಾಧ್ಯವಾಗಿಲ್ಲ, ಜನರಿಗೆ ಈ ವಾಸ್ತವ ಮನವರಿಕೆ ಮಾಡಿಕೊಡುವ ಸವಾಲು ನಮ್ಮ ಮುಂದಿದೆ ಎಂದು ತಿಳಿಸಿದರು.

### ಸಾಧನೆಗಳನ್ನು ಜನರ ಮುಂದಿಟ್ಟು, ಪಕ್ಷದ ಗೆಲುವಿಗಾಗಿ ಹಗಲು, ರಾತ್ರಿ ಶ್ರಮಿಸಬೇಕು




ನಮ್ಮ ಮುಂದಿರುವ ಗುರಿ ಲೋಕಸಭಾ ಚುನಾವಣೆ. ಆ ಲೋಕಸಭಾ ಚುನಾವಣೆ ಆಗುವವರೆಗೂ ನಾವು ವಿಶ್ರಾಂತಿ ಪಡೆಯದೆ, ನಮ್ಮ ಎದುರಾಳಿಗಳನ್ನು ಹಗುರವಾಗಿ ತೆಗೆದುಕೊಳ್ಳದೆ, ನಮ್ಮ ಸಾಧನೆಗಳನ್ನು ಜನರ ಮುಂದಿಟ್ಟು, ಹಗಲು ರಾತ್ರಿ ಪಕ್ಷದ ಗೆಲುವಿಗಾಗಿ ಶ್ರಮ ಹಾಕಬೇಕಾಗಿದೆ ಎಂದು ರಾಜ್ಯಾಧ್ಯಕ್ಷರು ಮತ್ತು ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರ ಅವರು ತಿಳಿಸಿದರು.

ವಿಶೇಷ ಕಾರ್ಯಕಾರಿಣಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೇಶದ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠೆ ಆಗಿರುವ ಶುಭ ಘಳಿಗೆಯಲ್ಲಿ ನಾವಿದ್ದೇವೆ. ಕೇಂದ್ರದಲ್ಲಿ ಕಳೆದ ಒಂಬತ್ತೂವರೆ ವರ್ಷಗಳಲ್ಲಿ ಸ್ಪಷ್ಟ ವಿಚಾರಗಳನ್ನು ಮುಂದಿಟ್ಟುಕೊಂಡು, ಭ್ರಷ್ಟಾಚಾರಕ್ಕೆ ಅವಕಾಶ ಕೊಡದೆ ಉತ್ತಮ ಆಡಳಿತವನ್ನು ಪ್ರಧಾನಿ ಶ್ರೀ ಮೋದಿಯವರು ಕೊಟ್ಟಿದ್ದಾರೆ. ಜೊತೆಜೊತೆಗೇ ಈ ದೇಶವನ್ನು ಜಗತ್ತಿನ ಅಗ್ರಗಣ್ಯ ರಾಷ್ಟ್ರಗಳ ಸಾಲಿನಲ್ಲಿ ತೆಗೆದುಕೊಂಡು ಹೋಗುವ ಕೆಲಸವನ್ನು ಮಾಡಿದ್ದಾರೆ ಎಂದು ಹೇಳಿದರು.

ಜಮ್ಮು ಕಾಶ್ಮೀರವು ಹಲವಾರು ವರ್ಷಗಳಿಂದ ಉಗ್ರಗಾಮಿಗಳ ಚಟುವಟಿಕೆಯಿಂದ ತತ್ತರಿಸಿ ಹೋಗಿತ್ತು. ಅಲ್ಲಿದ್ದ ಆರ್ಟಿಕಲ್ 370

## ಎರಡು ಪ್ರಮುಖ ನಿರ್ಣಯಗಳ ಅಂಗೀಕಾರ

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ 2 ನಿರ್ಣಯಗಳನ್ನು ಅಂಗೀಕರಿಸಲಾಯಿತು.

1

**550 ವರ್ಷಗಳ ಭಾರತೀಯರ, ಹಿಂದೂ ಸಮಾಜದ ಬಹುನಿರೀಕ್ಷಿತ ಬೇಡಿಕೆ ಈಡೇರಿಸಿ ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣ ಮಾಡಿ, ಪ್ರಾಣ ಪ್ರತಿಷ್ಠಾಪನೆ ಯಶಸ್ವಿಯಾಗಿ ಪೂರ್ಣಗೊಳಿಸಿದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರನ್ನು ಅಭಿನಂದಿಸಿ, ಸರ್ವಾನುಮತದಿಂದ ನಿರ್ಣಯ** ಅಂಗೀಕರಿಸಲಾಯಿತು. ಈ ನಿರ್ಣಯವನ್ನು ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ ಮಂಡಿಸಿದರು. ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ಮಾಳವಿಕಾ ರವರು ಅಂಗೀಕರಿಸಿದರು.

2

**ಕಾಂಗ್ರೆಸ್ ಸರಕಾರದ ರೈತ ವಿರೋಧಿ, ದಲಿತ ವಿರೋಧಿ ನೀತಿ ಖಂಡಿಸಿ, ದಲಿತ ಮತ್ತು ಶೋಷಿತ ವರ್ಗಕ್ಕೆ ಮೀಸಲಿಟ್ಟ 11 ಸಾವಿರ ಕೋಟಿಗೂ ಹೆಚ್ಚು ಹಣವನ್ನು ಗ್ಯಾರಂಟಿಗಾಗಿ ಉಪಯೋಗ ಮಾಡಿ ದಲಿತ ಮತ್ತು ಶೋಷಿತರಿಗೆ ವಂಚಿಸಿದ್ದನ್ನು ಖಂಡಿಸಿ ನಿರ್ಣಯ** ಅಂಗೀಕರಿಸಲಾಯಿತು. ಈ ನಿರ್ಣಯವನ್ನು ಮಾಜಿ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳ ರವರು ಮಂಡಿಸಿದರು, ಅನುಮೋದಿಸಿದರು, ರೈತ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ ರವರು ಅಂಗೀಕರಿಸಿದರು.

ರದ್ದುಪಡಿಸಿದರೆ ಅಲ್ಲೋಲಕಲ್ಲೋಲ ಆಗಲಿದೆ ಎಂದು ಬಿಂಬಿಸುವ ಕೆಲಸವನ್ನು ಕಾಂಗ್ರೆಸ್ ಮಾಡಿತ್ತು, ಆದರೆ ಪ್ರಧಾನಿ ಶ್ರೀ ಮೋದಿಯವರ ದಿಟ್ಟ ನಾಯಕತ್ವ, ಗೃಹ ಸಚಿವ ಶ್ರೀ ಅಮಿತ್ ಶಾ ಅವರ ದಿಟ್ಟ ನಿರ್ಧಾರದಿಂದ ಆರ್ಟಿಕಲ್ 370 ರದ್ದು ಮಾಡುವ ಮೂಲಕ ಅಲ್ಲಿದ್ದ ಉಗ್ರಗಾಮಿ ಚಟುವಟಿಕೆಗಳಿಗೆ ಆರ್ಥಿಕ ಶಕ್ತಿ ಕೊಡುವುದನ್ನೂ ಬುಡ ಸಮೇತ ಕಿತ್ತು ಹಾಕುವ ಕೆಲಸ ಆಗಿದೆ ಎಂದು ಅವರು ತಿಳಿಸಿದರು.

ರಾಜ್ಯದಲ್ಲಿದ್ದ ದುಷ್ಟ ಕಾಂಗ್ರೆಸ್ ಸರ್ಕಾರದಿಂದ ಕಾನೂನು-ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಮತ್ತೊಂದು ಕಡೆ ಬರದ ವಿಚಾರದಲ್ಲಿ ರೈತರ ಸಂಕಷ್ಟಕ್ಕೆ ಸ್ಪಂದನೆ ಮಾಡಿಲ್ಲ ಎಂದು ಅವರು ಹೇಳಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ರಾಜೀವ್

ಕಾರ್ಯಕ್ರಮ ನಿರೂಪಿಸಿದರು. ರಾಜ್ಯ ಕಾರ್ಯದರ್ಶಿ ಶ್ರೀಮತಿ ಅಂಬಿಕಾ ಹುಲಿನಾಯ್ಕರ್ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ನಂದೀಶ್ ರೆಡ್ಡಿ ವಂದಿಸಿದರು. ಕೇಂದ್ರ ಸಚಿವರಾದ ಶ್ರೀ ರಾಜೀವ್ ಚಂದ್ರಶೇಖರ್, ಶ್ರೀ ಭಗವಂತ ಖೂಬಾ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಶ್ರೀ ಆರ್.ಅಶೋಕ್, ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಜಗದೀಶ್ ಶೆಟ್ಟರ್, ರಾಜ್ಯದ ಮಾಜಿ ಉಪಮುಖ್ಯಮಂತ್ರಿಗಳಾದ ಶ್ರೀ ಡಾ.ಸಿ.ಎನ್.ಅಶ್ವತ್ಥನಾರಾಯಣ್, ಶ್ರೀ ಗೋವಿಂದ ಕಾರಜೋಳ, ಶ್ರೀ ಕೆ.ಎಸ್. ಈಶ್ವರಪ್ಪ, ಬಿಜೆಪಿ ನಿಕಟಪೂರ್ವ ರಾಜ್ಯಾಧ್ಯಕ್ಷ ಮತ್ತು ಸಂಸದ ಶ್ರೀ ನಳಿನ್‌ಕುಮಾರ್ ಕಟೀಲ್, ವಿಧಾನಪರಿಷತ್ ಪಕ್ಷ ವಿರೋಧ ಪಕ್ಷದ ನಾಯಕ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಸೇರಿದಂತೆ ಆಹ್ವಾನಿತ ಪ್ರಮುಖರು ಉಪಸ್ಥಿತರಿದ್ದರು. ಸಂಸದರು, ಶಾಸಕರು, ರಾಜ್ಯ ಪದಾಧಿಕಾರಿಗಳು, ಮಾಜಿ ಶಾಸಕರು, ಪರಾಜಿತ ಅಭ್ಯರ್ಥಿಗಳು ಸೇರಿದಂತೆ ಅಪೇಕ್ಷಿತರು ಭಾಗಿಯಾಗಿದ್ದರು.

## 5 ಪ್ರಮುಖ ಆರ್ಥಿಕ ಶಕ್ತಿಯಲ್ಲಿ ಒಂದು ಭಾರತ



ಜಗತ್ತಿನ ಆರ್ಥಿಕತೆಯಲ್ಲಿ ಕೆಳಗಿನಿಂದ, 5ನೇ ಸ್ಥಾನದಲ್ಲಿದ್ದ ಭಾರತ, ಇಂದು ಜಗತ್ತಿನ 5 ಪ್ರಮುಖ ಆರ್ಥಿಕ ಶಕ್ತಿಶಾಲಿ ದೇಶದಲ್ಲಿ ಒಂದಾಗಿದೆ. ಇದು ಮೋದಿ ಸರ್ಕಾರದ ಕಾರ್ಯವೈಖರಿಯಿಂದ ಎಂದು ಕೇಂದ್ರ ಸಚಿವ ಶ್ರೀ ಪ್ರಲ್ಹಾದ ಜೋಶಿ ಅವರು ತಿಳಿಸಿದರು.

ವಿಶೇಷ ಕಾರ್ಯಕಾರಿಣಿಯ ಗೋಷ್ಠಿಯಲ್ಲಿ ಮಾತನಾಡಿದ ಅವರು, ಮೋದಿಯವರ 3ನೇ ಅಧಿಕಾರದ ಅವಧಿಯಲ್ಲಿ ಜಗತ್ತಿನ 3 ಆರ್ಥಿಕ ರಾಷ್ಟ್ರಗಳಲ್ಲಿ ಭಾರತ ಮೊದಲಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿ, ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದೆ. ಕಾಂಗ್ರೆಸ್‌ನ ಎಲ್ಲಾ ಗ್ಯಾರಂಟಿಗಳು ಸೇರಿ 1 ಲಕ್ಷ ಕೋಟಿ ಆಗಿಲ್ಲ. ಮೋದಿ ಅವರು ಕೊಟ್ಟಿರುವ ಆಯುಷ್ಮಾನ್ ಭಾರತ್ ಯೋಜನೆಯೊಂದೇ 1 ಲಕ್ಷ ಕೋಟಿಯದ್ದಾಗಿದೆ ಎಂದು ವಿವರಿಸಿದರು.

ಬಡವರೂ ಬ್ಯಾಂಕ್ ಖಾತೆ ಹೊಂದಬೇಕು ಎಂಬ ಸದಾಶಯದಿಂದ ಜನಧನ್ ಅಕೌಂಟ್ ಮಾಡಿಸಿಕೊಡಲಾಯಿತು. ಭಾರತ ಆರ್ಥಿಕವಾಗಿ ಬೆಳೆಯುತ್ತಿದೆ. ರಫ್ತು ಕ್ಷೇತ್ರದಲ್ಲಿ ನಮ್ಮ ದೇಶ ಮುಂಚೂಣಿಯಲ್ಲಿದೆ, ಆರ್ಟಿಕಲ್ 370 ತೆಗೆಯುತ್ತೇವೆ ಎಂದು ಹೇಳಿದ್ದೆವು.ಅದನ್ನು ತೆರವು ಮಾಡಿದೆವು. ಕಾಂಗ್ರೆಸ್ ಕೆಲಸವಿಲ್ಲದೇ ಮೋದಿ ಸರ್ಕಾರದ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಾ ಬಂದಿದೆ. ಕೇಂದ್ರ ಸರ್ಕಾರ ರಾಜ್ಯಗಳಿಗೆ ಅನುದಾನ ಕೊಡುತ್ತಿಲ್ಲ ಎಂದು ಆರೋಪ ಮಾಡುತ್ತಿವೆ. 2004ರಿಂದ 2014ರ ವರೆಗೆ ಯುಪಿಎ ಸರ್ಕಾರ ಕರ್ನಾಟಕಕ್ಕೆ 60 ಸಾವಿರ ಕೋಟಿ ಅನುದಾನ ನೀಡಿದೆ. ಕಳೆದ 10 ವರ್ಷಗಳಲ್ಲಿ ಮೋದಿ ಸರ್ಕಾರ ಕರ್ನಾಟಕಕ್ಕೆ ಬರೋಬ್ಬರಿ 2.36 ಲಕ್ಷ ಕೋಟಿ ಅನುದಾನ ನೀಡಿದೆ. ಶೇ. 240ರಷ್ಟು ಹೆಚ್ಚು ನೀಡಲಾಗಿದೆ ಎಂದು ತಿಳಿಸಿದರು.

## ಅಂಧಕಾಲದಿಂದ ಅಮೃತ ಕಾಲದಲ್ಲಿ ಭಾರತ



ಭಾರತ 2014 ಕ್ಕೂ ಮೊದಲು ಅಂಧಕಾಲದಲ್ಲಿತ್ತು ಅಂದರೆ, ಭ್ರಷ್ಟಾಚಾರ, ವಂಚನೆ ಮತ್ತು ದುರಾಡಳಿತದ ಮೂಲಕ ಎಲ್ಲಾ ಕ್ಷೇತ್ರಗಳಲ್ಲಿ ದೇಶದ ಪ್ರಗತಿಗೆ ಯುಪಿಎ ಸರ್ಕಾರ ಮೊಳೆ ಹೊಡೆದಿತ್ತು. ಆದರೆ 2014 ರಲ್ಲಿ ಬಂದ ಮೋದಿ ಸರ್ಕಾರದಿಂದ ಭಾರತ ಅಮೃತ ಕಾಲವನ್ನು ಕಾಣುತ್ತಿದೆ ಎಂದು ನಿಕಟಪೂರ್ವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀ ಸಿ ಟಿ ರವಿ ಅವರು ಆಶಯ ವ್ಯಕ್ತಪಡಿಸಿದರು.

ರಾಜ್ಯ ಕಾರ್ಯಕಾರಿಣಿಯ ಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ಸರ್ಕಾರದ ಸವಾಲುಗಳನ್ನು ಸರಿಪಡಿಸಿ, ವಿಕಸಿತ ಭಾರತಕ್ಕೆ ಮಾರ್ಗ ಕಲ್ಪಿಸಲು ಉತ್ತಮ ಆಡಳಿತದಿಂದ ನಡೆಸಲ್ಪಡುತ್ತಿರುವ ಅಭಿವೃದ್ಧಿ ಯುಗವನ್ನು ಪಿಎಂ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಕಳೆದ 10 ವರ್ಷಗಳಿಂದ ಪ್ರಯತ್ನಿಸಿ ಯಶಸ್ವಿಯಾಗಿದೆ ಎಂದರು. ದಿಲ್ಲಿಯಿಂದ ಹಳ್ಳಿವರೆಗೂ ಪ್ರತಿಯೊಬ್ಬರನ್ನು ಮೋದಿ ಸರ್ಕಾರ ತಲುಪಿದೆ. ವಿದೇಶಾಂಗ ನೀತಿಯಿಂದ, ಗ್ರಾಮಪಂಚಾಯಿತಿವರೆಗೂ ಸಮಗ್ರ ಅಭಿವೃದ್ಧಿಯ ಕಲ್ಪನೆಯೊಂದಿಗೆ ಮೋದಿ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಕಲೆ, ಸಂಸ್ಕೃತಿಯನ್ನು ಉಳಿಸುವಲ್ಲೂ ಮೋದಿಯವರು ಶ್ರಮಿಸಿದ್ದಾರೆ ಎಂದು ಆಶಯ ವ್ಯಕ್ತಪಡಿಸಿದರು. ಭಾರತ ಸ್ವಾತಂತ್ರ್ಯ ಪಡೆದು 2047ರ ವೇಳೆಗೆ 100 ವರ್ಷಗಳಾಗುತ್ತದೆ. ಆ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಅಭಿವೃದ್ಧಿ ಪಡಿಸುವುದು ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಪಣವಾಗಿದೆ. ಆ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.



ಪ್ರಧಾನ ಕಾರ್ಯದರ್ಶಿ ಶ್ರೀ ಸುನಿಲ್ ಕುಮಾರ್ ರವರು ಫೆ. 3ರಿಂದ 5ರವರೆಗೆ ಎಲ್ಲ ಜಿಲ್ಲೆಗಳಲ್ಲಿ ಕಾರ್ಯಕಾರಿಣಿ ಸಭೆ ನಡೆಸುವ ಬಗ್ಗೆ, ಕೇಂದ್ರ ಸರ್ಕಾರದ ಫಲಾನುಭವಿಗಳಾದ ಮಹಿಳೆಯರು, ಸ್ವಸಹಾಯ ಸಂಘಗಳನ್ನು ಭೇಟಿ ಮಾಡಿ ಅವರ ತಾಲ್ಲೂಕು, ಜಿಲ್ಲಾ ಮಟ್ಟದ ಸಮಾವೇಶ ನಡೆಸುವ ಬಗ್ಗೆ, ಫೆ. 25ರೊಳಗೆ ನಾರಿ ಶಕ್ತಿ ವಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಹಾಗೂ ಪ್ರತಿ ಬೂತ್ ಮಟ್ಟದಲ್ಲಿ ಒಂದು ಅಥವಾ ಎರಡು ಕಡೆ '3ನೇ ಬಾರಿಗೆ ಮತ್ತೊಮ್ಮೆ ಬಿಜೆಪಿ ಸರಕಾರ, ಮತ್ತೊಮ್ಮೆ ಮೋದಿ' ಎಂಬ ಗೋಡೆಬರಹ ಬರೆಯುವ ಕಾರ್ಯಕ್ರಮಗಳನ್ನು ಆಯೋಜಿಸುವ ಬಗ್ಗೆ ಮಾಹಿತಿ ಹಾಗೂ ಸೂಚನೆಗಳನ್ನು ನೀಡಿದರು. .



## ಭೌಗೋಳಿಕವಾಗಿ, ಸೈದ್ಧಾಂತಿಕವಾಗಿ ಎಲ್ಲರನ್ನೂ ತಲುಪುವ ಚುನಾವಣೆಯಾಗಬೇಕು

ಒಂದು ವಿಶೇಷವಾದ ಕಾರ್ಯ ಪದ್ಧತಿಯ ತಳಹದಿಯಲ್ಲಿ ಬಂದ ನಮ್ಮ ಪಕ್ಷ ಮತ್ತು ಹಿರಿಯರು, ಇದರ ಮೂಲಕ ಪಕ್ಷವನ್ನೂ ಕಟ್ಟಬಹುದು ಮತ್ತು ಚುನಾವಣೆಯನ್ನೂ ಜಯಿಸಬಹುದು ಎಂಬುದನ್ನು ತೋರಿಸಿಕೊಟ್ಟರು. ಹಣ ಬಲ, ತೋಳ್ಬಲದ ರಾಜಕಾರಣಕ್ಕೆ ಭಿನ್ನವಾಗಿ ಸೈದ್ಧಾಂತಿಕ ರಾಜಕಾರಣವನ್ನು ಮಾಡುವ ಮೂಲಕ ದೇಶ ಕಟ್ಟಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ ಎಂದು ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀ ರಾಜೇಶ್.ಜಿ ಅವರು ಹೇಳಿದರು.

ರಾಜ್ಯ ವಿಶೇಷ ಕಾರ್ಯಕಾರಿಣಿಯ ಸಮಾರೋಪದಲ್ಲಿ ಮಾತನಾಡಿದ ಅವರು, 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಮ್ಮ ಸರಕಾರ ಸದೃಡ ಆರ್ಥಿಕತೆ ಅಂತ್ಯೋದಯ ಹಾಗು ಸುರಕ್ಷಿತ ಭಾರತ ಈ ಮೂರು ಪ್ರಮುಖ ನೀತಿಗಳನ್ನು ಮುಂದಿಟ್ಟು ಕೆಲಸ ಮಾಡಿತು. 2014ಕ್ಕೆ ಮುಂಚೆ ಜನರು ಭಯದಿಂದ ಬದುಕುವ ವಾತಾವರಣ ಇತ್ತು. ನಂತರ ಬಂದ ಸರಕಾರ ಭಾರತವನ್ನು ಭಯ ಮುಕ್ತ ಮಾಡಿತು. 2019ರ ರಲ್ಲಿ ಬಂದ ನಮ್ಮ ಸರಕಾರ ಭಾರತೀಯ ಮೌಲ್ಯಗಳನ್ನು ಆಧರಿಸಿ ಕೆಲಸ ಮಾಡುವತ್ತ ಕಾರ್ಯೋನ್ಮುಖವಾಯಿ ಎಂದು ಅವರು ತಿಳಿಸಿದರು.

2024 ರ ಚುನಾವಣೆ ನಮಗೆ ಈ ಎಲ್ಲಾ ನಿಟ್ಟಿನಲ್ಲಿ ಮಹತ್ವಪೂರ್ಣವಾಗಿದೆ. ಜನರಿಗೆ ಸರಕಾರದ ನೀತಿ, ಯೋಜನೆಗಳು ತಲುಪಿದರೆ ಮಾತ್ರ ಸಾಲದು. ಅವರು ಯೋಚಿಸುವ ರೀತಿ ಕೂಡ ಬದಲಾಗಬೇಕು. ದೇಶ ಕಟ್ಟುವ ಕೆಲಸದಲ್ಲಿ ಪ್ರತಿಯೊಬ್ಬ ನಾಗರೀಕನ ಕೊಡುಗೆಯೂ ಮಹತ್ವ. ಆ ಕಾರಣಕ್ಕಾಗಿ ನಮ್ಮ ಕಾರ್ಯಕರ್ತನ ಯೋಚನೆ ಹೇಗಿರಬೇಕು ಎನ್ನುವುದು ಕೂಡ ಅಷ್ಟೇ ಮುಖ್ಯವಾಗಿರುತ್ತದೆ. 2024ರ ಚುನಾವಣೆ ಬಿಜೆಪಿಯ ಮಟ್ಟಿಗೆ ಯಾವುದೇ ಸವಾಲಿಲ್ಲದ ಚುನಾವಣೆ. ಆದರೆ ಇದೇ ಎಲ್ಲದಕ್ಕಿಂತ ಹೆಚ್ಚು ಅಪಾಯಕಾರಿ. ದೇಶದಾದ್ಯಂತ ಪ್ರಧಾನಿ ಶ್ರೀ ಮೋದಿ ಸರ್ಕಾರದ ಪರ ಉತ್ತಮ ಆಡಳಿತದ ಅಲೆ ಇದೆ. ಆದರೆ ಈ ಕಾರಣಕ್ಕೆ ಕಾರ್ಯಕರ್ತರು ಮೈ ಮರೆಯುವ ಸಾಧ್ಯತೆ ಹೆಚ್ಚು. ಶ್ರೀ ನರೇಂದ್ರ ಮೋದಿಯವರೇ ಮಗದೊಮ್ಮೆ ಪ್ರಧಾನಿ ಆಗುತ್ತಾರೆ ಎನ್ನುವ ಪೂರಕ ವಾತಾವರಣವನ್ನು ಮತಗಳಾಗಿ ಪರಿವರ್ತನೆ ಆಗುವಂತೆ ನೋಡಿ ಕೊಳ್ಳುವುದು ನಿಜವಾಗಿಯೂ ಸವಾಲಿನ ಕೆಲಸವಾಗಿದೆ ಎಂದು ಅವರು ಎಚ್ಚರಿಸಿದರು.

ರಾಜ್ಯಾಧ್ಯಕ್ಷರ ಘೋಷಣೆ ಆದಕೂಡಲೆ ಅವರು ಮೊದಲು ಹೋಗಿದ್ದು ಬೂತ್ ಅಧ್ಯಕ್ಷರ ಮನೆಗೆ. ಪ್ರತೀ ಜಿಲ್ಲಾ ಪ್ರವಾಸದಲ್ಲೂ ಬೂತ್ ಅಧ್ಯಕ್ಷರ ಮನೆಗೆ ಹೋಗುತ್ತಾರೆ. ಇದು ಕೇವಲ ಅಧ್ಯಕ್ಷರಿಗೆ ಮಾತ್ರ ಸೀಮಿತವಾಗಿರಬಾರದು. ಇದನ್ನು ನಾವೂ ಅಳವಡಿಸಿಕೊಳ್ಳಬೇಕು ಎಂದು ಅವರು ಹೇಳಿದರು.

2024ರ ಚುನಾವಣೆ ಕೇವಲ ಗೆಲುವಿನ ಚುನಾವಣೆ ಅಲ್ಲ. ಬದಲಾಗಿ ಭೌಗೋಳಿಕವಾಗಿ, ಸೈದ್ಧಾಂತಿಕವಾಗಿ ನಾವು ಎಲ್ಲರನ್ನೂ ತಲುಪುವ ಚುನಾವಣೆಯಾಗಬೇಕು ನಮ್ಮ ವಿಚಾರವನ್ನು ಮರು ಪರಿಶೀಲನೆ ಮಾಡುವ, ಸಮಾಜದ ಕಟ್ಟ ಕಡೆಯ ವ್ಯಕ್ತಿಯನ್ನು ತಲುಪುವ ಚುನಾವಣೆಯಾಗಬೇಕು. ಈ ಚುನಾವಣೆಯಲ್ಲಿ ಪ್ರತಿಯೊಂದು ಕೆಲಸಗಳಿಗೂ ಒಬ್ಬೊಬ್ಬ ಕಾರ್ಯಕರ್ತನ ನಿಯೋಜನೆ ಆಗಬೇಕು ಎಂದು ಅವರು ಸಲಹೆ ನೀಡಿದರು.

**ಚರ್ಚೆಗೊಂದು ಸಾಲು...**

**... ಚುನಾವಣೆಗೆ ಮುಂಚಿನ ಕ್ರಿಯಾಶೀಲತೆ ಹೆಚ್ಚಾದಷ್ಟೂ ಚುನಾವಣೆಯಲ್ಲಿ ಪಡಬೇಕಾದ ಶ್ರಮ ಕಡಿಮೆ.**




# ಕೇಂದ್ರ ಬಜೆಟ್ 2024




**ಪಿಎಲ್ಎಸ್ ಯೋಜನೆ**
2023-24 - 4,645
2024-25 - 6,200



**ಆಯುಷ್ಮಾನ್ ಭಾರತ್**
2023-24 - 7,200
2024-25 - 7,500



**ನರೇಗಾ ಯೋಜನೆ**
2023-24 - 60,000
2024-25 - 86,000



**ಸೆಮಿಕಂಡಕ್ಟರ್**
2023-24 - 3,000
2024-25 - 6,903

ಮಧ್ಯಂತರ ಬಜೆಟ್ ವಿನೂತನ ಮತ್ತು ಸಮಗ್ರವಾಗಿದೆ. ನಿರಂತರತೆಯ ಭರವಸೆ ಮೂಡಿಸಿದೆ. ವಿಕಸಿತ ಭಾರತದ ನಾಲ್ಕು ಆಧಾರ ಸ್ತಂಭಗಳಾದ ಯುವ ಜನರು, ಬಡವರು, ಮಹಿಳೆಯರು ಮತ್ತು ರೈತರನ್ನು ಈ ಬಜೆಟ್ ಸಬಲೀಕರಣಗೊಳಿಸಲಿದೆ. 2047ರ ಹೊತ್ತಿಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿಸುವ ಖಾತ್ರಿ ನೀಡಿದೆ. ಯುವ ಭಾರತದ ಆಕಾಂಕ್ಷೆಗಳು ಈ ಬಜೆಟ್ ಪ್ರತಿಫಲಿಸುತ್ತಿವೆ. ನಿರ್ಮಲಾ ಸೀತಾರಾಮನ್ , ತಂಡಕ್ಕೆ ಅಭಿನಂದನೆಗಳು.

**-ನರೇಂದ್ರಮೋದಿ,** ಪ್ರಧಾನ ಮಂತ್ರಿ



- ಬಡವರು, ಮಹಿಳೆಯರು, ಯುವಕರು, ಅನ್ನದಾತರ ಜಾತಿಗೆ ಕೇಂದ್ರ ಸರಕಾರದ ಆದ್ಯತೆ
- 300 ಯುನಿಟ್ ಸೌರ ವಿದ್ಯುತ್ ಸೌಲಭ್ಯ । ರಕ್ಷಣಾ ವಲಯಕ್ಕೆ 6.2ಲಕ್ಷ ಕೋಟಿ ರು. ಅನುದಾನ
- ಲಕ್ಷದ್ವೀಪ ಸೇರಿ ದೇಶಿ ಪ್ರವಾಸೋದ್ಯಮಕ್ಕೆ ಒತ್ತು;
- ಗರ್ಭಕಂಠ ಕ್ಯಾನ್ಸರ್ ತಡೆಗೆ 9-14 ವರ್ಷದ ಬಾಲಕಿಯರಿಗೆ ಉಚಿತ ಲಸಿಕೆ ನೀಡಿಕೆ
- ಜೈಜವಾನ್, ಜೈಕಿಸಾನ್, ಜೈವಿಜ್ಞಾನ್, ಜೈ ಅನುಸಂಧಾನ್ ಸರಕಾರದ ಮಂತ್ರ
- ಕೃಷಿ, ಆಹಾರಕ್ಕೆ ಕಡಿಮೆ; ಔಷಧ, ಸಹಕಾರಕ್ಕೆ ಅನುದಾನ ಹೆಚ್ಚಳ
- ಇವಿ-ಪರಿಸರ ವ್ಯವಸ್ಥೆ, ಸಂಶೋಧನೆ, ತಂತ್ರಜ್ಞಾನ ಕ್ಷೇತ್ರಕ್ಕೆ ಹೆಚ್ಚಿನ ಒತ್ತು
- ಎಫ್‌ಡಿಐಗಾಗಿ ಮೊದಲು ಭಾರತ ಅಭಿವೃದ್ಧಿಪಡಿಸೋಣ ಪರಿಕಲ್ಪನೆ ಜಾರಿ

## ರೈಲ್ವೆಯಲ್ಲಿ ರಾಜ್ಯಕ್ಕೆ 7,524 ಕೋ.ರೂ. ಅನುದಾನ



ಹೊಸ ಮಾರ್ಗಗಳಿಗಾಗಿ **₹2286 ಕೋಟಿ** | ಜೋಡಿ ಮಾರ್ಗಕ್ಕಾಗಿ **₹1531 ಕೋಟಿ**

ಮಧ್ಯಂತರ ಬಜೆಟ್‌ನಲ್ಲಿ ರೈಲ್ವೆ ಇಲಾಖೆಗೆ 2.52 ಲಕ್ಷ ಕೋ.ರೂ. ಅನುದಾನ ನೀಡಿದ್ದು, ಕರ್ನಾಟಕಕ್ಕೆ 7,524 ಕೋ.ರೂ. ನೀಡಲಾಗಿದೆ. ಇದರಲ್ಲಿ 2,286 ಕೋ.ರೂ. ಹೊಸ ರೈಲ್ವೆ ಮಾರ್ಗಗಳಿಗೆ, 1,531 ಕೋ.ರೂ. ಜೋಡಿ ಮಾರ್ಗಗಳ ಅಭಿವೃದ್ಧಿಗಾಗಿ, 987 ಕೋ.ರೂ. ಪ್ರಯಾಣಿಕರ ಸೌಕರ್ಯಕ್ಕಾಗಿ, 341 ಕೋ.ರೂ. ಸೇತುವೆಗಳು, ಕೆಳ ಸೇತುವೆಗಳಿಗಾಗಿ, 126 ಕೋ.ರೂ. ದಟ್ಟಣೆ ನಿವಾರಣೆಗಾಗಿ ಹಾಗೂ 126 ಕೋ.ರೂ. ಸಮೀಕ್ಷೆಗಾಗಿ 22 ಕೋ.ರೂ. ಮೀಸಲಿಡಲಾಗಿದೆ.

## ಯಾವುದಕ್ಕೆ, ಎಷ್ಟು ಅನುದಾನ?

| | |
|---|---|
| ಕೃಷಿ ವಲಯ: | ₹1.27 ಲಕ್ಷ ಕೋಟಿ |
| ಕಿಸಾನ್ ಸಮ್ಮಾನ್: | ₹60 ಸಾವಿರ ಕೋಟಿ |
| ಗ್ರಾಹಕರ ವ್ಯವಹಾರ: | ₹2.13 ಲಕ್ಷ ಕೋಟಿ |
| ಆಹಾರ,ಸಾರ್ವಜನಿಕ ವಿತರಣೆ: | ₹2.13 ಲಕ್ಷ ಕೋಟಿ |
| ರಾಸಾಯನಿಕ, ಗೊಬ್ಬರ: | ₹1.64 ಲಕ್ಷ ಕೋಟಿ |
| ರಾಸಾಯನಿಕ, ಪೆಟ್ರೋಕೆಮಿಕಲ್ಸ್: | ₹139 ಕೋಟಿ |
| ಔಷಧ ಇಲಾಖೆ: | ₹4,089 ಕೋಟಿ |
| ಸಹಕಾರ : | ₹1,183 ಕೋಟಿ |
| ಮೀನುಗಾರಿಕೆ, ಹೈನು-ಪ್ರಾಣಿ ಸಾಕಣೆ: | ₹7,105 ಕೋಟಿ |
| ಆಹಾರ ಸಂಸ್ಕರಣೆ ಕೈಗಾರಿಕೆ: | ₹3,290 ಕೋಟಿ |




## ಮಹಿಳೆಯರಿಗೆ

- ‘ಇಂಧ್ರ ಧನುಷ್’ ಯೋಜನೆ ಮೂಲಕ ಯು-ವಿನ್ ಯೋಜನೆಯಡಿ 9-14 ವರ್ಷ ವಯಸ್ಸಿನ ಎಲ್ಲ ಬಾಲಕಿಯ ರಿಗೆ ಗರ್ಭಕೋಶ ಕ್ಯಾನ್ಸರ್ ವಿರುದ್ಧ ಉಚಿತ ಲಸಿಕೆ.
- 83 ಲಕ್ಷ ಸ್ವಸಹಾಯ ಸಂಘಗಳಲ್ಲಿನ 9 ಕೋಟಿ ಮಹಿಳಾ ಸದಸ್ಯರಿಗಾಗಿ ಜಾರಿಗೊಳಿಸಿರುವ ‘ಲಕ್‌ಪತಿ ದೀದಿ’ಗೆ ಬಲ. ವರ್ಷಕ್ಕೆ ಕನಿಷ್ಠ 1 ಲಕ್ಷ ರು.ದುಡಿದುಕೊಳ್ಳುವಂತೆ ಯೋಜನೆಯಡಿ 2 ಕೋಟಿ ಮಂದಿಗೆ ತರಬೇತಿ ನೀಡಲಾಗಿದ್ದು, ಇದನ್ನು 3 ಕೋಟಿಗೆ ಏರಿಸುವ ಗುರಿ
- ಎಲ್ಲ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಆಯುಷ್ಮಾನ್ ಭಾರತ್ ಪ್ರಯೋಜನಗಳ ವಿಸ್ತರಣೆ.
- ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ ಮಹಿಳಾ ಉದ್ಯಮಿಗಳಿಗೆ ₹34 ಕೋಟಿ ಸಾಲ ಸೌಲಭ್ಯ.



## ಯುವಕರಿಗೆ

- ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ 43 ಕೋಟಿ ಯುವ ಜನರಿಗೆ 22.05 ಲಕ್ಷ ಕೋಟಿ ರು. ಸಾಲ.
- ಉದ್ಯಮ ಸ್ಥಾಪಿಸುವ ಯುವಕರಿಗೆ ಸಾಲಸೌಲಭ್ಯ
- ಸ್ಕಿಲ್ ಇಂಡಿಯಾ ಮಿಷನ್ ಅಡಿ 1.4 ಕೋಟಿ ಯುವಕರಿಗೆ ತರಬೇತಿ ನೀಡಲಾಗಿದ್ದು, ಈ ಸಂಖ್ಯೆ ಇನ್ನಷ್ಟು ಹೆಚ್ಚಳಕ್ಕೆ ಯೋಜನೆ
- ಸ್ಟಾರ್ಟ್ ಅಪ್‌ಗಳಿಗೆ ತೆರಿಗೆ ಪ್ರಯೋಜನಗಳ ವಿಸ್ತರಣೆ. ಸಾರ್ವಭೌಮ ಸಂಪತ್ತು ನಿಧಿಗಳಿಂದ ಮಾಡಿದ ಹೂಡಿಕೆಯನ್ನು ಮಾ.31, 2025 ರವರೆಗೆ ಒಂದು ವರ್ಷ ವಿಸ್ತರಣೆ
- ಸಂಶೋಧನೆ ಮತ್ತು ನಾವೀನ್ಯ ತಂತ್ರಜ್ಞಾನ ಕ್ಷೇತ್ರಕ್ಕೆ 50 ವರ್ಷಗಳ ಅವಧಿಗೆ ಬಡ್ಡಿರಹಿತ ಸಾಲ ನೀಡಲು ₹1 ಲಕ್ಷ ಕೋಟಿ ಸಂಚಿತ ನಿಧಿ



## ರೈತರಿಗೆ

- ಕಿಸಾನ್ ಸಂಪದ ಯೋಜನೆಯಿಂದ 38 ಲಕ್ಷ ರೈತರಿಗೆ ಲಾಭವಾಗಿದ್ದು, ರಾಷ್ಟ್ರೀಯ ಗೋಕುಲ್ ಮಿಷನ್ ಅಡಿಯಲ್ಲಿ ಹಾಲು ಉತ್ಪಾದನಾ ಡೇರಿಗಳ ಸಂಖ್ಯೆ ಹೆಚ್ಚಳ.
- ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಮೂಲಕ ಬಡ, ಮಧ್ಯಮ ವರ್ಗದವರ ಅಭಿವೃದ್ಧಿಗೆ ಹೆಚ್ಚು ಒತ್ತು. ಮೀನುಗಾರರಿಗೆ 55 ಲಕ್ಷ ಉದ್ಯೋಗ ಸೃಷ್ಟಿ.



## ಪ್ರವಾಸ-ಪ್ರಯಾಣ-ಸೌಕರ್ಯ

- ಪ್ರಯಾಣಿಕರ ಸುರಕ್ಷೆಗಾಗಿ ಮೂರು ಕಾರಿಡಾರ್‌ಗಳು; ಎನರ್ಜಿ, ಮಿನರಲ್, ಸಿಮೆಂಟ್ ಕಾರಿಡಾರ್, ರೈಲ್ವೆ ಕಾರಿಡಾರ್ ಹಾಗೂ ಪೋರ್ಟ್ ಕನೆಕ್ಟಿವಿಟಿ ಕಾರಿಡಾರ್.
- ವಿಮಾನಯಾನ ಕ್ಷೇತ್ರದ ಅಭಿವೃದ್ಧಿ; ಇನ್ನಷ್ಟು ಉಡಾನ್ ಮಾರ್ಗಗಳ ಮಂಜೂರು.
- ಮೆಟ್ರೋ, ನಮೋ ಭಾರತ್ ರೈಲಿಗೆ ದೇಶಾದ್ಯಂತ ಒತ್ತು.
- 40 ಸಾವಿರ ರೈಲ್ವೆ ಬೋಗಿಗಳನ್ನು ವಂದೇ ಭಾರತ್ ಟಚ್. ದೇಶಾದ್ಯಂತ ಎರಡು ಮತ್ತು ಮೂರನೇ ಸ್ತರದ ನಗರಗಳಿಗೂ ಮೆಟ್ರೋ ಸೌಲಭ್ಯ ವಿಸ್ತರಣೆ.
- ರಾಜ್ಯಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು; 75 ಸಾವಿರ ಕೋಟಿ ರು.ಬಡ್ಡಿ ರಹಿತ ಸಾಲ. ಮಾಲ್ದೀವ್‌ಗೆ ಪ್ರತಿಯಾಗಿ ನಮ್ಮ ಲಕ್ಷದ್ವೀಪ ಅಭಿವೃದ್ಧಿಗೆ ವಿಶೇಷ ಆದ್ಯತೆ.
- ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಮೀಸಲಾಗಿರುವ ನಿಧಿಯನ್ನು 11.1 ಲಕ್ಷ ಕೋಟಿ ರು.ಗೆ ಏರಿಕೆ, ಹಿಂದಿನ ಬಜೆಟ್‌ಗೆ ಹೋಲಿಸಿದರೆ ಶೇ.11ರಷ್ಟು ಏರಿಕೆ.



## ಬಡವರಿಗೆ ಏನು?

- ಬಡವರ ಮನೆ ಖರೀದಿಗೆ ನೆರವು.5 ವರ್ಷಗಳಲ್ಲಿ ಎರಡು ಕೋಟಿ ಮನೆ ನಿರ್ಮಾಣ ಗುರಿ.
- ಕೋಟಿ ಮನೆಗಳಿಗೆ ಸೌರವಿದ್ಯುತ್ ಸೌಲಭ್ಯ, ಪ್ರತಿ ತಿಂಗಳು 300 ಯೂನಿಟ್ ವಿದ್ಯುತ್ ಪೂರೈಕೆ

## ತೆರಿಗೆ

**ಬಜೆಟ್ ಗಾತ್ರ: ₹ 47.66 ಲಕ್ಷ ಕೋಟಿ**

**ಆದಾಯ: ₹ 30.80 ಲಕ್ಷ ಕೋಟಿ**

- ನೇರ ಹಾಗೂ ಪರೋಕ್ಷ ತೆರಿಗೆ ಪದ್ಧತಿಯಲ್ಲಿ ಯಾವುದೇ ಬದಲಾವಣೆ ಇಲ್ಲ.
- 7 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ವಿನಾಯಿತಿ ಮುಂದುವರಿಕೆ. ಹೊಸ ತೆರಿಗೆ/ ವಿನಾಯಿತಿ ಇಲ್ಲ
- ನೇರ ತೆರಿಗೆ ಸಂಗ್ರಹ ಪ್ರಮಾಣ 10 ವರ್ಷಗಳಲ್ಲಿ ಶೇ.3ರಷ್ಟು ಹೆಚ್ಚಳ.
- 2024-25ರ ಆರ್ಥಿಕ ವರ್ಷಕ್ಕೆ ತೆರಿಗೆ ಸಂಗ್ರಹ 26.02 ಲಕ್ಷ ಕೋಟಿ ರು.ಅಂದಾಜು

### ಪಿಎಲ್‌ಐಎಸ್ ಯೋಜನೆ

2023-24 4,645

2024-25 6,200

### ಆಯುಷ್ಮಾನ್ ಭಾರತ್

2023-24 7,200

2024-25 7,500

### ನರೇಗಾ ಯೋಜನೆ

2023-24 60,000

2024-25 86,000

### ಸೆಮಿಕಂಡಕ್ಟರ್

2023-24 3,000

2024-25 6,903

### ಶಿಕ್ಷಣ

ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಗೆ 73,000 ಕೋ.ರೂ.

ಸರಕಾರಿ ಶಾಲೆಗಳಿಗೆ 2,800 ಕೋ.ರೂ. ಮಾದರಿ ಶಾಲೆಗಳಿಗೆ 6,050 ಕೋ.ರೂ.

ಸಮಗ್ರ ಶಿಕ್ಷಾ ಅಭಿಯಾನ, ಕೇಂದ್ರೀಯ ವಿದ್ಯಾಲಯ ಮತ್ತು ನವೋದಯ ವಿದ್ಯಾಲಯಗಳಿಗೆ ಹಂಚಿಕೆಯಾಗಲಿದೆ.

### ಮಧ್ಯಮ ವರ್ಗದವರಿಗೆ ವಸತಿ

ಬಾಡಿಗೆ ಮನೆಗಳು, ಕೊಳೆಗೇರಿ ಮತ್ತು ಅನಧಿಕೃತ ಕಾಲೋನಿಗಳಲ್ಲಿ ವಾಸಿಸುವ ಅರ್ಹ ವಿಭಾಗಗಳಿಗೆ ಸ್ವಂತ ಮನೆಗಳನ್ನು ಖರೀದಿಸಲು ಸಹಾಯ ಯೋಜನೆ

**ದೇಶದ 1 ಕೋಟಿ ಮನೆಗಳ ಮೇಲೆ ಸೋಲಾರ್ ಪ್ಯಾನಲ್ ಅಳವಡಿಸುವ ಯೋಜನೆ**






# ಬಿಜೆಪಿ ರಾಜ್ಯ ಮಹಿಳಾ ಮೋರ್ಚಾದ ಕಾರ್ಯಕಾರಿಣಿ ಸಭೆ

ಬಿಜೆಪಿ ರಾಜ್ಯ ಮಹಿಳಾ ಮೋರ್ಚಾದ ಕಾರ್ಯಕಾರಿಣಿ ಸಭೆಯು ದಿನಾಂಕ 24.1.2024 ರಂದು ಬೆಂಗಳೂರಿನ ಕೇಂದ್ರ ಕಚೇರಿ ಜಗನ್ನಾಥ ಭವನದಲ್ಲಿ ನೂತನ ಅಧ್ಯಕ್ಷರಾದ ಸಿ.ಮಂಜುಳಾ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಕಾರ್ಯಕಾರಣಿ ಸಭೆಯನ್ನು ವಿರೋಧ ಪಕ್ಷದ ನಾಯಕರಾದ ಶ್ರೀ ಆರ್ ಅಶೋಕ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಹಿಳಾ ಮೋರ್ಚಾದ ತಂಡಕ್ಕೆ ದೊಡ್ಡ ಜವಾಬ್ದಾರಿ ಇದೆ. ಪ್ರಧಾನಿ ಶ್ರೀ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಪ್ರತಿಯೊಬ್ಬರಿಗೆ ಅನುಕೂಲವಾಗುವ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದು, ರಸ್ತೆ ನಿರ್ಮಾಣದಲ್ಲಿ ದೇಶದಾದ್ಯಂತ ದೊಡ್ಡ ಕ್ರಾಂತಿಯನ್ನೇ ತಂದಿದೆ ಎಂದು ಹೇಳಿದರು. ಈ ನಿಟ್ಟಿನಲ್ಲಿ ಮಹಿಳಾ ಮೋರ್ಚಾದ ತಂಡ ಕೇಂದ್ರ ಸರ್ಕಾರದ ಯೋಜನೆಗಳನ್ನು ಪ್ರತಿ ಮನೆಗೆ ತಲುಪಿಸುವ ರೀತಿಯಲ್ಲಿ ಕೆಲಸ ಮಾಡಿ ಪ್ರಧಾನಿ ಶ್ರೀ ಮೋದಿ ಅವರನ್ನು ಮತ್ತೊಮ್ಮೆ ದೇಶದ ಪ್ರಧಾನಿ ಮಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕು ಎಂದು ಕರೆ ನೀಡಿದರು.

ನಿಕಟಪೂರ್ವ ರಾಜ್ಯ ಮಹಿಳಾಮೋರ್ಚಾದ ಅಧ್ಯಕ್ಷರಾದ ಶ್ರೀಮತಿ ಗೀತಾ ವಿವೇಕಾನಂದ ಅವರು ಜವಾಬ್ದಾರಿಯನ್ನು ನೂತನವಾಗಿ ರಾಜ್ಯ ಮಹಿಳಾ ಮೋರ್ಚಾದ ಅಧ್ಯಕ್ಷರಾಗಿ ಆಯ್ಕೆಯಾದ ಕು. ಸಿ. ಮಂಜುಳಾ ಅವರಿಗೆ ಹಸ್ತಾಂತರ ಮಾಡಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಮಹಿಳಾಮೋರ್ಚಾದ ಪ್ರಭಾರಿಗಳಾದ ಶ್ರೀ ನಂದೀಶ್ ರೆಡ್ಡಿಯವರು ರಾಜ್ಯದಿಂದ ಬೂತ್ ಮಟ್ಟದ ತನಕ ಮಹಿಳಾ ಮೋರ್ಚಾದ ತಂಡವನ್ನು ಸದೃಢಗೊಳಿಸಬೇಕೆಂದು ಹೇಳಿದರು. ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್ ಅವರು ತಮ್ಮ ಸಂಘಟನಾತ್ಮಕ ನುಡಿಗಳಲ್ಲಿ ಮಹಿಳಾ ಮೋರ್ಚಾದ ಪ್ರತಿಯೊಬ್ಬ ಪದಾಧಿಕಾರಿಗಳು ಕಾರ್ಯಕರ್ತರು ಸಾಮಾಜಿಕ ಜಾಲತಾಣದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಮಹಿಳಾ ಫಲಾನುಭವಿಗಳ ಜೊತೆ ಸಂವಾದ ನಡೆಸಿದ ತಮ್ಮ ವಿಡಿಯೋಗಳನ್ನು ಕಡ್ಡಾಯವಾಗಿ ಅಪ್ಲೋಡ್ ಮಾಡಬೇಕೆಂದು ಹೇಳಿದರು. ಹಾಗೆಯೇ ಪ್ರಧಾನಮಂತ್ರಿಯವರು ಉಲ್ಲೇಖ ಮಾಡಿದ ನಾಲ್ಕು ವರ್ಗಗಳು ಅಂದರೆ ಮಹಿಳೆಯರನ್ನು,ಯುವಕರನ್ನು, ಬಡವರನ್ನು, ರೈತರನ್ನು ತಲುಪುವ ರೀತಿಯಲ್ಲಿ ಮಹಿಳಾ ಮೋರ್ಚಾದ ತಂಡ ಕೆಲಸ ಮಾಡಬೇಕು. ಬಿಜೆಪಿ ಹೊರತುಪಡಿಸಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರನ್ನು ಹಾಗೆಯೇ ಲೋಕಸಭಾ ಚುನಾವಣೆ ದೃಷ್ಟಿಯಿಂದ 18ರಿಂದ 25 ವರ್ಷದ ಯುವತಿಯರಿಗೆ ಒಂದು ಕಾರ್ಯಕ್ರಮ ಮಾಡಿ ಅವರು ನಮ್ಮ ಪಕ್ಷಕ್ಕೆ ಬರುವ ಹಾಗೆ ಮಾಡಬೇಕು ಎಂದು ಹೇಳಿದರು.

ಹಲವು ವರುಷಗಳ ಹಿಂದೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ಹೆಣ್ಣು ಮಕ್ಕಳಿಗೆ ನೀಡಿದ ಭಾಗ್ಯಲಕ್ಷ್ಮಿ ಬಾಂಡ್ ಈಗ ಪಕ್ವವಾಗುವ ಸಮಯ ಬಂದಿದೆ. ಈ ಫಲಾನುಭವಿಗಳನ್ನು ಭೇಟಿ ಮಾಡಿ ಅವರಿಗೆ ವಿಷಯವನ್ನು ಮನವರಿಕೆ ಮಾಡಬೇಕೆಂದು ಹೇಳಿದರು.



ರಜನಿ ಪೈ
ರಾಜ್ಯ ಕಾರ್ಯಾಲಯ ಕಾರ್ಯದರ್ಶಿ
ಮಹಿಳಾ ಮೋರ್ಚಾ

ಮಹಿಳಾ ಮೋರ್ಚಾ ನೂತನ ರಾಜ್ಯಾಧ್ಯಕ್ಷರಾದ ಕು. ಸಿ.ಮಂಜುಳಾ ಅವರು ರಾಷ್ಟ್ರೀಯ ಮಹಿಳಾ ಮೋರ್ಚಾ ವಹಿಸಿದ 10 ಪ್ರಮುಖ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಈ ಎಲ್ಲಾ ಕಾರ್ಯಕ್ರಮಗಳು ರಾಜ್ಯದ 312 ಮಂಡಲಗಳಲ್ಲಿಯೂ ಯಶಸ್ವಿಯಾಗುವ ರೀತಿಯಲ್ಲಿ ಮಹಿಳಾ ಮೋರ್ಚಾದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಶ್ರಮ ವಹಿಸಬೇಕೆಂದು ಹೇಳಿದರು. ರಾಜ್ಯ ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಜಿ. ಶಿಲ್ಪಾ ಸುವರ್ಣ ಅವರು ಸ್ವಾಗತವನ್ನು, ಇನ್ನೋರ್ವ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಡಾ. ಶೋಭಾ ಎಸ್. ನಿಸ್ಸೀಮ ಗೌಡ ಅವರು ನಿರೂಪಣೆಯನ್ನು, ರಾಜ್ಯ ಮಹಿಳಾ ಮೋರ್ಚಾದ ಉಪಾಧ್ಯಕ್ಷರಾದ ಶ್ರೀಮತಿ ಸುನಿತಾ ಜಗದೀಶ್ ಅವರು ಧನ್ಯವಾದ ನುಡಿಗಳನ್ನು ಹೇಳಿದರು.

ಈ ಕಾರ್ಯಕಾರಣಿ ಸಭೆಯಲ್ಲಿ ಮಹಿಳಾ ಮೋರ್ಚಾದ ರಾಜ್ಯ ಪದಾಧಿಕಾರಿಗಳು, ಕಾರ್ಯಕಾರಿಣಿ ಸದಸ್ಯರು, ಜಿಲ್ಲಾಧ್ಯಕ್ಷರು ಮತ್ತು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.




# ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ಪ್ರವಾಸ



**ರಾಯಚೂರು :** ದೇವದುರ್ಗದಲ್ಲಿ ಶ್ರೀ ಕಾಗಿನೆಲೆ ಕನಕ ಗುರುಪೀಠ ಆಯೋಜಿಸಿದ್ದ ಹಾಲುಮತ ಸಂಸ್ಕೃತಿ ವೈಭವ-2024 ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಅವರು ಭಾಗವಹಿಸಿ ಯುವಜನ ಸಮಾವೇಶವನ್ನು ಉದ್ಘಾಟಿಸಿದರು. ಕಾಗಿನೆಲೆ ಗುರುಪೀಠದ ಪರಮಪೂಜ್ಯ ಶ್ರೀ ನಿರಂಜನಾನಂದಪುರಿ ಶ್ರೀಗಳು, ಪೂಜ್ಯ ಶ್ರೀ ಸಿದ್ದರಾಮಾನಂದ ಶ್ರೀಗಳು, ಪೂಜ್ಯ ಗುರು ಮಹಾಂತ ಶ್ರೀಗಳು, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ , ಸಂಸದರುಗಳಾದ ಶ್ರೀ ರಾಜಾ ಅಮರೇಶ್ವರ ನಾಯಕ, ಶ್ರೀ ಉಮೇಶ್ ಜಾಧವ್, ಶಾಸಕರುಗಳಾದ ಶ್ರೀ ಮಾನಪ್ಪ ಡಿ ವಜ್ಜಲ್, ಶ್ರೀ ದೊಡ್ಡನಗೌಡ ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ರಘುನಾಥ ಮಲ್ಕಾಪುರೆ ಮಾಜಿ ಶಾಸಕರುಗಳಾದ ಶ್ರೀ ಶಿವನಗೌಡ ನಾಯಕ್, ಶ್ರೀ ಬಂಡೆಪ್ಪ ಕಾಶಪ್ಪನವರ್, ಬಿಜೆಪಿ ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಶರಣು ತಳ್ಳಿಕೇರೆ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ರಾಯಚೂರಿನ ಬಿಜೆಪಿ ಜಿಲ್ಲಾ ಕಾರ್ಯಾಲಯಕ್ಕೆ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಭೇಟಿ ನೀಡಿ ಪ್ರಧಾನಿ ಶ್ರೀ ಮೋದಿ ರವರ 'ಮನ್ ಕೀ ಬಾತ್' ಕಾರ್ಯಕ್ರಮವನ್ನು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ವೀಕ್ಷಿಸಿದರು. ಈ ಸಂದರ್ಭದಲ್ಲಿ ಬಿಜೆಪಿ



ರಾಜ್ಯ ಉಪಾಧ್ಯಕ್ಷರಾದ ಶ್ರೀ ಎನ್.ಎಸ್. ರಾಜು ಗೌಡ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಿ. ರಾಜೀವ್, ಸಂಸದರಾದ ಶ್ರೀ ರಾಜಾ ಅಮರೇಶ್ವರ ನಾಯಕ್, ಶಾಸಕರಾದ ಶ್ರೀ ಶಿವರಾಜ್ ಪಾಟೀಲ್, ಮಾಜಿ ಶಾಸಕರಾದ ಶ್ರೀ ಪ್ರತಾಪ್ ಗೌಡ ಪಾಟೀಲ್ ಸೇರಿದಂತೆ ಪಕ್ಷದ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು. ರಾಯಚೂರು ನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 03, ಬೂತ್ ನಂ 210 ರ ಅಧ್ಯಕ್ಷರಾದ ಶ್ರೀ ನರಸಿಂಹಲು ನಾಯಕ್ ಅವರ ನಿವಾಸಕ್ಕೆ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಭೇಟಿ ನೀಡಿದರು. ರಾಯಚೂರಿನಲ್ಲಿ ಆಯೋಜಿಸಿದ್ದ ಬಿಜೆಪಿ ಕಾರ್ಯಕರ್ತರ ಸಮಾವೇಶ ಉದ್ಘಾಟಿಸಿ ಮಾತನಾಡಿದರು

**ಶಿವಮೊಗ್ಗ :** ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ 'ಮನೆ ಮನೆಗೆ ಗ್ಯಾಸ್ ಪೈಪ್ ಲೈನ್' ಯೋಜನೆ ಮೂಲಕ ನೈಸರ್ಗಿಕ ಗ್ಯಾಸ್ ಸಂಪರ್ಕ ಒದಗಿಸುವ (Piped Natural Gas - PNG) ಡಿ ಕಂಪ್ರೆಷನ್ ಘಟಕವನ್ನು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಅವರು ಉದ್ಘಾಟಿಸಿ ಮೊದಲ ಮನೆಯ ನೈಸರ್ಗಿಕ ಅನಿಲ ಸಂಪರ್ಕಕ್ಕೆ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮಾಜಿ ಪುರಸಭೆ ಅಧ್ಯಕ್ಷರಾದ ಶ್ರೀಮತಿ ರೇಖಬಾಯಿ, ಪುರಸಭೆ ಸದಸ್ಯರಾದ ಶ್ರೀ ಪಾಲಾಕ್ಷಪ್ಪ, ಶ್ರೀ ಮಡ್ಡಿ ಯೋಗೇಶ್, ಶ್ರೀ ರೇಣುಕಸ್ವಾಮಿ, ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಶಿಕಾರಿಪುರ ವಿಧಾನಸಭಾ ಕ್ಷೇತ್ರದ ಗೊದ್ದನಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆಯೋಜಿಸಿದ್ದ 'ವಿಕಸಿತ ಭಾರತ ಸಂಕಲ್ಪ ಯಾತ್ರೆ,'ಯನ್ನು ಉದ್ಘಾಟಿಸಿದರು. ಗೊದ್ದನಕೊಪ್ಪ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ರೇಖಾ ಬಾಯಿ, ಮುಖಂಡರಾದ ಶ್ರೀ ಗುರುಮೂರ್ತಿ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

**ಹಾವೇರಿ :** ಲೋಕಸಭಾ ಚುನಾವಣೆ-2024ರ ಪೂರ್ವ ಸಿದ್ಧತೆಯ ಭಾಗವಾಗಿ ಹಾವೇರಿಯಲ್ಲಿ ಗೋಡೆ ಬರಹಕ್ಕೆ ಶ್ರೀ ಬಿ.ವೈ. ವಿಜಯೇಂದ್ರ ರವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಅರುಣ್ ಕುಮಾರ್ ಪೂಜಾರ್ ಅವರು ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಹಾವೇರಿಯಲ್ಲಿ ಕಾರ್ಯಕರ್ತರ ಬೃಹತ್ ಸಮಾವೇಶ ಹಾಗೂ ನೂತನ ಜಿಲ್ಲಾಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಭಾಗವಹಿಸಿದ್ದರು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಬೊಮ್ಮಾಯಿ, ವಿಧಾನಸಭೆಯ ವಿರೋಧ ಪಕ್ಷದ ಉಪ ನಾಯಕರಾದ ಶ್ರೀ ಅರವಿಂದ ಬೆಲ್ಲದ್, ಮಾಜಿ ಸಚಿವರಾದ ಶ್ರೀ ಬಿ.ಸಿ. ಪಾಟೀಲ್, ರಾಜ್ಯ ಉಪಾಧ್ಯಕ್ಷರಾದ ಡಾ. ಬಸವರಾಜ ಕೇಲಗಾರ, ಮಾಜಿ ಶಾಸಕರು ಹಾಗೂ ನೂತನ ಜಿಲ್ಲಾಧ್ಯಕ್ಷರಾದ ಶ್ರೀ ಅರುಣ್ ಕುಮಾರ್ ಪೂಜಾರ್, ನಿಕಟಪೂರ್ವ ಜಿಲ್ಲಾಧ್ಯಕ್ಷರಾದ ಶ್ರೀ ಸಿದ್ದರಾಜು ಕಲಕೋಟಿ, ಮಾಜಿ ಶಾಸಕರಾದ ಶ್ರೀ ವಿರೂಪಾಕ್ಷಪ್ಪ ಬಳ್ಳಾರಿ, ಶ್ರೀ ಶಿವರಾಜ್ ಸಜ್ಜನ್, ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಬೆಂಗಳೂರು :** ಲೋಕಸಭಾ ಚುನಾವಣೆ-2024ರ ಪೂರ್ವ ಸಿದ್ಧತೆಯ ಭಾಗವಾಗಿ ಬೆಂಗಳೂರಿನ ಶೇಷಾದ್ರಿಪುರಂನ ಮಾರುತಿ ಆಸ್ಪತ್ರೆಯ ಬಳಿ ಗೋಡೆ ಬರಹಕ್ಕೆ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಂದೀಶ್ ರೆಡ್ಡಿ, ಶ್ರೀ ಪ್ರೀತಮ್ ಗೌಡ, ಸಂಸದರಾದ ಶ್ರೀ ಪಿ.ಸಿ. ಮೋಹನ್, ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಸಿ.ಕೆ. ರಾಮಮೂರ್ತಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷರಾದ ಶ್ರೀ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷರಾದ ಶ್ರೀ ಸಪ್ತಗಿರಿ ಗೌಡ, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಶಕ್ತ ಬೂತ್ ಬಲಿಷ್ಠ ಬಿಜೆಪಿ ಅಭಿಯಾನದ ಅಂಗವಾಗಿ ಬೆಂಗಳೂರಿನ ಗಾಂಧಿನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 94, ಬೂತ್ ನಂ 45 ರ ಅಧ್ಯಕ್ಷರಾದ ಶ್ರೀ ಮಂಜುನಾಥ್ ಅವರ ನಿವಾಸಕ್ಕೆ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಭೇಟಿ ನೀಡಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ನೂತನ ಜಿಲ್ಲಾಧ್ಯಕ್ಷರು ಹಾಗೂ ಪದಾಧಿಕಾರಿಗಳೊಂದಿಗೆ ವರ್ಚುವಲ್ ಮೂಲಕ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಮಾತನಾಡಿ ಮುಂಬರುವ ದಿನಗಳಲ್ಲಿ ಕೈಗೊಳ್ಳಬೇಕಿರುವ ಪಕ್ಷದ ಸಂಘಟನಾತ್ಮಕ ಕಾರ್ಯ ಚಟುವಟಿಕೆಗಳು ಹಾಗೂ ಜನವರಿ 22 ರ ರಾಮಜ್ಯೋತಿ ಅಭಿಯಾನವನ್ನು ಯಶಸ್ವಿಗೊಳಿಸುವ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಂ.ಬಿ. ನಂದೀಶ್ ರೆಡ್ಡಿ, ಶ್ರೀ ಪಿ. ರಾಜೀವ ಹಾಗೂ ಶ್ರೀ ಪ್ರೀತಮ್‌ಗೌಡ ಅವರು ಉಪಸ್ಥಿತರಿದ್ದರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ 'ಪರಿಶಿಷ್ಟ ಪಂಗಡಗಳ ಮುನ್ನಡೆ' ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ವಿಜಯೇಂದ್ರರವರು ಸ್ವಾತಂತ್ರ್ಯಾ ನಂತರ ಈ ದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಆರ್ಥಿಕವಾಗಿ, ಔದ್ಯೋಗಿಕವಾಗಿ, ರಾಜಕೀಯವಾಗಿ ಶಕ್ತಿ ತುಂಬಿರುವುದು ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾತ್ರ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ, ಮಾಜಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, , ಮಾಜಿ ಉಪಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳ, ಮಾಜಿ ಸಚಿವರಾದ ಶ್ರೀ ಸಿ.ಟಿ. ರವಿ, ಶ್ರೀ ಶ್ರೀರಾಮುಲು, ರಾಜ್ಯ ಉಪಾಧ್ಯಕ್ಷರಾದ ಶ್ರೀ ರಾಜುಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸುನೀಲ್ ಕುಮಾರ್ ಕಾರ್ಕಳ, ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಬಂಗಾರು ಹನುಮಂತು, ಮಾಜಿ ಶಾಸಕರಾದ ಶ್ರೀ ಎಸ್.ವಿ. ರಾಮಚಂದ್ರಪ್ಪ, ಶ್ರೀ ಶಿವನಗೌಡ ನಾಯಕ್, ವಿಧಾನಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್, ಪಕ್ಷದ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಪವಿತ್ರ ರಾಮ ಜನ್ಮಭೂಮಿ ಅಯೋಧ್ಯೆಯ ಪ್ರಭು ಶ್ರೀ ರಾಮ ಮಂದಿರದಲ್ಲಿ 22 ಜನವರಿ 2024 ರಂದು ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪಕ್ಷದ ಕಾರ್ಯಕರ್ತರೊಂದಿಗೆ ಉತ್ತರಾಭಿಮುಖವಾಗಿ ರಾಮಜ್ಯೋತಿ ಬೆಳಗುವ ಮೂಲಕ ರಾಮ ಸ್ಮರಣೆ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜೆ. ಪ್ರೀತಮ್ ಗೌಡ, ಶ್ರೀ ಎನ್.ಎಸ್. ನಂದೀಶ್ ರೆಡ್ಡಿ, ರಾಜ್ಯ ಕಾರ್ಯದರ್ಶಿ, ಶ್ರೀ ಪಿ. ರಾಜೀವ್, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳೀಕೆರೆ, ರಾಮ ಮಂದಿರ ದರ್ಶನ ಅಭಿನಯಾನದ ಸಹ ಸಂಚಾಲಕರಾದ ಶ್ರೀ ಜಗದೀಶ್ ಹಿರೇಮನಿ, ಬೆಂಗಳೂರು ಉತ್ತರ ಮಾಜಿ ಜಿಲ್ಲಾಧ್ಯಕ್ಷರಾದ ಶ್ರೀ ನಾರಾಯಣ್, ರಾಜ್ಯ ಕಾರ್ಯಾಲಯ ಕಾರ್ಯದರ್ಶಿ ಶ್ರೀ ಲೋಕೇಶ್ ಅಂಬೇಕಲ್ಲು, ರಾಜ್ಯ ಕಾರ್ಯಾಲಯ ಸಹ ಕಾರ್ಯದರ್ಶಿ ಶ್ರೀ ವಿಶ್ವನಾಥ್ ಅಣಜಿ, ಪದಾಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

**ಯಾದಗಿರಿ :** ಯಾದಗಿರಿ ಜಿಲ್ಲಾ ಕಾರ್ಯಕರ್ತರ ಬೃಹತ್ ಸಮಾವೇಶ ಹಾಗೂ ನೂತನ ಜಿಲ್ಲಾಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಶ್ರೀ ಬಿ.ವೈ. ವಿಜಯೇಂದ್ರ ರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ರಾಜುಗೌಡ, ಸಂಸದರಾದ ಶ್ರೀ ಅಮರೇಶ ನಾಯಕ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಿ.ಜಿ. ಪಾಟೀಲ್, ಶಾಸಕರು ಹಾಗೂ ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ಮತ್ತೀಮಡು, ಮಾಜಿ ಶಾಸಕರಾದ ಶ್ರೀ ಮಾಲೀಕಯ್ಯ ಗುತ್ತೇದಾರ್, ಶ್ರೀ ವೆಂಕಟರೆಡ್ಡಿ ಮುದ್ದನಾಳ್, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಶರಣು ತಳ್ಳೀಕೆರೆ, ಕು. ಲಲಿತಾ ಅನಾಪುರ, ನೂತನ ಜಿಲ್ಲಾಧ್ಯಕ್ಷರಾದ ಶ್ರೀ ಅಮೀನ್ ರೆಡ್ಡಿ, ನಿಕಟಪೂರ್ವ ಜಿಲ್ಲಾಧ್ಯಕ್ಷರಾದ ಡಾ. ಶರಣಭೋಪಾಲ್ ರೆಡ್ಡಿ, ಡಾ. ಚಂದ್ರಶೇಖರ್ ಸುಬೇದಾರ್, ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ಶಹಾಪುರ ನಗರದ ವಾರ್ಡ್ ನಂ 05, ಬೂತ್ ನಂಬರ್ 166 ರ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಎಸ್. ಯಾಳಗಿ ಅವರ ನಿವಾಸಕ್ಕೆ ಭೇಟಿ ನೀಡಿ ಬೂತ್ ಸಶಕ್ತೀಕರಣ ಕುರಿತು ಚರ್ಚಿಸಿದರು.

**ಬೀದರ್ :** ಬೀದರ್ ಗ್ರಾಮೀಣ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 25, ಬೂತ್ ನಂ 175 ರ ಅಧ್ಯಕ್ಷರಾದ ಶ್ರೀ ಲಲ್ಲಪ್ಪ ಅವರ ನಿವಾಸಕ್ಕೆ ರಾಜ್ಯಾಧ್ಯಕ್ಷರು ಕೇಂದ್ರದ ರಾಜ್ಯ ಖಾತೆ ಸಚಿವರಾದ ಶ್ರೀ ಭಗವಂತ ಖೂಬ, ಶಾಸಕರು ಹಾಗೂ ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಶೈಲೇಂದ್ರ ಬೆಲ್ದಾಳೆ, ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ರಘುನಾಥ ಮಲ್ಕಾಪುರೆ, ಶ್ರೀ ಸುನಿಲ್ ವಲ್ಯಾಪುರೆ, ಜಿಲ್ಲಾಧ್ಯಕ್ಷರಾದ ಶ್ರೀ ಸೋಮನಾಥ ಪಾಟೀಲ್, ಮಾಜಿ ಶಾಸಕರಾದ ಶ್ರೀ ಪ್ರಕಾಶ್ ಖಂಡ್ರೆ, ಪಕ್ಷದ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಕಲಬುರಗಿ :** ಕಲಬುರಗಿಯಲ್ಲಿ ಆಯೋಜಿಸಿದ್ದ ಪಕ್ಷದ ಕಾರ್ಯಕರ್ತರ ಬೃಹತ್ ಸಮಾವೇಶ ಹಾಗೂ ನೂತನ ಜಿಲ್ಲಾಧ್ಯಕ್ಷರ ಪದಗ್ರಹಣ ಸಮಾರಂಭ ಉದ್ಘಾಟಿಸಿದ ಶ್ರೀ ಬಿ.ವೈ. ವಿಜಯೇಂದ್ರ ರವರು ಮೋದಿ ಅವರನ್ನು ಮಗದೊಮ್ಮೆ ಪ್ರಧಾನಿ ಮಾಡುವವರೆಗೂ ವಿರಮಿಸಲಾರೆವು ಎಂದು ಸಂಕಲ್ಪ ಮಾಡಿದರು. ಸಂಸದರಾದ ಶ್ರೀ ಡಾ. ಉಮೇಶ್ ಜಾಧವ್, ರಾಜ್ಯ ಉಪಾಧ್ಯಕ್ಷರಾದ ಶ್ರೀ ರಾಜುಗೌಡ ನಾಯಕ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಿ. ರಾಜೀವ್, ರಾಜ್ಯ ಕಾರ್ಯದರ್ಶಿಗಳು ಹಾಗೂ ಶಾಸಕರಾದ ಶ್ರೀ ಬಸವರಾಜ ಮತ್ತೀಮಡು, ಶ್ರೀ ಶೈಲೇಂದ್ರ ಬೆಲ್ದಾಳೆ, ವಿಧಾನ ಪರಿಷತ್ ಉಪನಾಯಕರಾದ ಶ್ರೀ ಸುನಿಲ್ ವಲ್ಯಾಪುರೆ, ಶಾಸಕರಾದ ಡಾ. ಅವಿನಾಶ್ ಜಾಧವ್, ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಶಶಿಲ್ ನಮೋಶಿ, ಶ್ರೀ ಬಿ.ಜಿ.ಪಾಟೀಲ್, ಮಾಜಿ ಶಾಸಕರುಗಳಾದ ಶ್ರೀ ಮಾಲೀಕಯ್ಯ ಗುತ್ತೇದಾರ್, ಶ್ರೀ ರಾಜ್ ಕುಮಾರ್ ಪಾಟೀಲ್ ತೆಲ್ಕೂರ್, ಶ್ರೀ ದತ್ತಾತ್ರೇಯ ಪಾಟೀಲ್ ರೇವೂರ, ಕಲಬುರಗಿ ನಗರ ಜಿಲ್ಲಾಧ್ಯಕ್ಷರಾದ ಶ್ರೀ ಚಂದ್ರಕಾಂತ ಪಾಟೀಲ್, ಗ್ರಾಮಾಂತರ ಜಿಲ್ಲಾಧ್ಯಕ್ಷರಾದ ಶ್ರೀ ಶಿವರಾಜ ಪಾಟೀಲ್ ರದ್ದೇವಾಡಿ, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳಿಕೆರೆ, ಮಾಜಿ ಶ್ರೀ ಅಮರನಾಥ ಪಾಟೀಲ್, ಯಾದಗಿರಿ ಜಿಲ್ಲಾಧ್ಯಕ್ಷರಾದ ಶ್ರೀ ಅಮೀನ್ ರೆಡ್ಡಿ, ಕಲಬುರಗಿ ಮಹಾನಗರ ಪಾಲಿಕೆ ಮಹಾಪೌರರಾದ ಶ್ರೀ ವಿಶಾಲ್ ಧರ್ಗಿ, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಮಂಗಳೂರು :** ಮಂಗಳೂರಿನಲ್ಲಿ ಆಯೋಜಿಸಿದ್ದ ದಕ್ಷಿಣ ಕನ್ನಡ ಬಿಜೆಪಿ ನೂತನ ಜಿಲ್ಲಾಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿ ವಿಶ್ವಗುರು ಸ್ಥಾನದಲ್ಲಿ ಸಾಗುತ್ತಿರುವ ಭಾರತ ರಾಮರಾಜ್ಯವಾಗಬೇಕಾದರೆ ಲೋಕಸಮರದಲ್ಲಿ ಮಗದೊಮ್ಮೆ ಪಕ್ಷ ದಾಖಲೆಯ ಮತ ಗಳಿಸುವ ನಿಟ್ಟಿನಲ್ಲಿ ಕಾರ್ಯಕರ್ತರು ಹಗಲಿರುಳೆನ್ನದೇ ಶ್ರಮಿಸಬೇಕೆಂಬ ಕರೆ ನೀಡಿದರು. ಈ ಸಂದರ್ಭದಲ್ಲಿ ಮಾಜಿ ರಾಜ್ಯಾಧ್ಯಕ್ಷರು ಹಾಗೂ ಸಂಸದರಾದ ಶ್ರೀ ನಳಿನ್ ಕುಮಾರ್ ಕಟೀಲ್, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್, ವಿರೋಧ ಪಕ್ಷ ನಾಯಕರಾದ ಶ್ರೀ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾಜಿ ಉಪ ಮುಖ್ಯಮಂತ್ರಿಗಳಾದ ಡಾ. ಅಶ್ವತ್ಥನಾರಾಯಣ, ಶಾಸಕರುಗಳಾದ ಶ್ರೀ ವೇದವ್ಯಾಸ್ ಕಾಮತ್, ಶ್ರೀ ಉಮಾನಾಥ ಕೋಟ್ಯಾನ್, ಡಾ. ವೈ. ಭರತ್ ಶೆಟ್ಟಿ, ಶ್ರೀಮತಿ ಭಗೀರತಿ ಮುರುಳ್ಯ, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಬ್ರಿಜೇಶ್ ಚೌಟಾ, ಶ್ರೀ ಶರಣು ತಳ್ಳೀಕೆರೆ, ಪಕ್ಷದ ಪದಾಧಿಕಾರಿಗಳು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಚಿಕ್ಕಮಗಳೂರು :** ಚಿಕ್ಕಮಗಳೂರು ಜಿಲ್ಲಾ ಬಿಜೆಪಿ ವತಿಯಿಂದ ಆಯೋಜಿಸಿದ್ದ ಬೃಹತ್ ಬೈಕ್ ರ್‍ಯಾಲಿ ಹಾಗೂ ರೋಡ್ ಶೋನಲ್ಲಿ ಶ್ರೀ ಬಿ.ವೈ. ವಿಜೇಂದ್ರ ರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವಿರೋಧ ಪಕ್ಷ ನಾಯಕರಾದ ಶ್ರೀ ಆರ್. ಅಶೋಕ, ನಿಕಟಪೂರ್ವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿ,, ನಿಕಟ ಪೂರ್ವ ಜಿಲ್ಲಾಧ್ಯಕ್ಷರು ಹಾಗೂ ನೂತನ ರೈತ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹೆಚ್.ಸಿ. ಕಲ್ಮರುಡಪ್ಪ, ನೂತನ ಜಿಲ್ಲಾಧ್ಯಕ್ಷರಾದ ಶ್ರೀ ದೇವರಾಜ ಶೆಟ್ಟಿ, ವಿಭಾಗ ಪ್ರಭಾರಿಗಳಾದ ಶ್ರೀ ಗಿರೀಶ್ ಪಟೇಲ್, ವಿಧಾನಪರಿಷತ್ ಸದಸ್ಯರಾದ ಎಂ.ಕೆ. ಪ್ರಾಣೇಶ್, ಮಾಜಿ ಸಚಿವರುಗಳಾದ ಶ್ರೀ ಪ್ರಮೋದ್ ಮಧ್ವರಾಜ್, ಶಾಸಕರು ಹಾಗೂ ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹರೀಶ್ ಪೂಂಜಾ, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳೀಕೆರೆ, ಮಾಜಿ ಶಾಸಕರುಗಳಾದ ಶ್ರೀ ಡಿ.ಎಸ್. ಸುರೇಶ್, ಶ್ರೀ ಬೆಳ್ಳಿ ಪ್ರಕಾಶ್, ಕಾಫಿ ಬೋರ್ಡ್ ಅಧ್ಯಕ್ಷರಾದ ಶ್ರೀ ದಿನೇಶ್ ದೇವವೃಂದ ಅವರು ಸೇರಿದಂತೆ ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಹುಬ್ಬಳ್ಳಿ-ಧಾರವಾಡ :** ಹುಬ್ಬಳ್ಳಿ - ಧಾರವಾಡ ಅವಳಿ ನಗರದ ಕಾರ್ಯಕರ್ತರು ಬೃಹತ್ ರೋಡ್ ಶೋ ಮೂಲಕ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರನ್ನು ಸ್ವಾಗತಿಸಿದರು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್, ಶಾಸಕರುಗಳಾದ ಶ್ರೀ ಮಹೇಶ್ ಟೆಂಗಿನಕಾಯಿ, ಮಾಜಿ ಸಚಿವರಾದ ಶ್ರೀ ಮುನೇನಕೊಪ್ಪ, ಶ್ರೀ ಅರವಿಂದ ಬೆಲ್ಲದ್, ಜಿಲ್ಲಾಧ್ಯಕ್ಷರುಗಳಾದ ಶ್ರೀ ತಿಪ್ಪಣ್ಣ ಮಜ್ಜಗಿ, ಶ್ರೀ ನಿಂಗಪ್ಪ ಸುತ್ತಗಟ್ಟಿ, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.





# ಮರೆಯಾದ ಸೋಮಣ್ಣ ಎಂಬ ವಾಮನ ಮೂರ್ತಿ



**ಕೋಟ ಶ್ರೀನಿವಾಸ ಪೂಜಾರಿ**
ವಿರೋಧ ಪಕ್ಷದ ನಾಯಕರು,
ವಿಧಾನ ಪರಿಷತ್

ನಾನು ಆಗಷ್ಟೇ ರಾಜಕೀಯಕ್ಕೆ ಕಾಲಿಟ್ಟ ದಿನಗಳು. ಕೋಟ ಎಂಬ ನಮ್ಮೂರ ಬಿಜೆಪಿ ಮುಖಂಡ ಸುರೇಂದ್ರ ಹೆಗ್ಡೆಯವರಿಗೆ ಸೋಮಣ್ಣ ಸಾಕ್ಷಾತ್ ಪರದೈವವಿದ್ದಂತೆ. ನಾನು ತಾಲೂಕು ಪಂಚಾಯತ್ ಸದಸ್ಯನಾದ ನಂತರ ಡಾ. ಆಚಾರ್ಯರನ್ನು ಭೇಟಿಯಾದಾಗ ಸೋಮಣ್ಣ ನನಗೆ ಪರಿಚಿತರಾದರು. ಎಲ್ಲಾ ಗೊಂದಲವನ್ನು ತಲೆಯ ಮೇಲೆ ಹೊತ್ತು ತಿರುಗುವ ನನ್ನನ್ನು ಡಾಕ್ಟರ್ ಆಚಾರ್ಯರು ಒಮ್ಮೊಮ್ಮೆ ಅನುಕಂಪದಿಂದ, ಕೆಲವೊಮ್ಮೆ ಮನಸ್ಸಲ್ಲೇ ಕಡುಕೋಪದಿಂದ ಗಮನಿಸುತ್ತಿದ್ದರು. ಆ ಸಂದರ್ಭದಲ್ಲೂ ಸೋಮಣ್ಣನೇ ನನಗೆ ದಿಕ್ಕು ಮತ್ತು ದೆಸೆ. ನಾನೊಮ್ಮೆ ಕೋಡಿಬೇಂಗ್ರೆ ಜನರಿಗೆ ಕುಡಿಯಲು ನೀರಿಲ್ಲ ಎಂದು ಗ್ರಾಮಸ್ಥರನ್ನು ಕರೆದುಕೊಂಡು ಉಡುಪಿ ತಾಲೂಕು ಪಂಚಾಯತ್ ಕಛೇರಿ ಎದುರು ಧರಣಿ ಕೂತೆ. ದುರಾದೃಷ್ಟಕ್ಕೆ ಹಠಕ್ಕೆ ಬಿದ್ದ ತಾಲೂಕು ಪಂಚಾಯತ್ ಅಧಿಕಾರಿಗಳು ಪ್ರತಿಭಟನಾ ನಿರತ ನಮ್ಮನ್ನು ಮಾತಾಡಿಸಲು ಬರಲೇ ಇಲ್ಲ. ಬಾರ್ಕೂರು ಶಾಂತರಾಮ ಶೆಟ್ರು, ದಿ. ಜೀವನ್ ಶೆಟ್ರನ್ನು ಬಿಟ್ಟರೆ ನನ್ನೊಂದಿಗೆ ಇತರ ಗಣ್ಯರು ಕಾಣಲಿಲ್ಲ.

ಮುಂದೇನು ಎಂದು ಚಡಪಡಿಕೆಯಲ್ಲಿರುವಾಗ ಡಾಕ್ಟರ್‌ರವರ ಸವಾರಿ ಬಂತು. ಶಾಸಕ ಆಚಾರ್ಯರನ್ನು ಕಾಣುತ್ತಲೇ ಮಾಧ್ಯಮಗಳು, ಅಧಿಕಾರಿಗಳು ಓಡೋಡಿ ಬಂದರು. ಕೊಡಪಾನ ಹಿಡಿದು ಅನಾಥರಂತೆ ಕುಳಿತ ನಮಗೆ ಆನೆ ಬಲ ಬಂದಂತಾಯಿತು. ಸರ್ಕಾರ ನೀರಿನ ಸಮಸ್ಯೆ ಪರಿಹಾರ ಮಾಡಿ ನಮ್ಮ ಹೋರಾಟ ಯಶಸ್ವಿಯಾಯಿತು. ವಿಷಯ ಅದಲ್ಲ, ಸುದ್ದಿ ಇಲ್ಲದೇ ಡಾ. ಆಚಾರ್ಯರು ಸಂದಿಗ್ಧ ಸಮಯದಲ್ಲಿ ಹೇಗೆ ಬಂದರು ಎಂದು ನಮಗಾರಿಗೂ ಅರಿವಾಗಲೇ ಇಲ್ಲ. ಕೊನೆಗೂ ಅರ್ಥವಾದದ್ದೇನೆಂದರೆ ಸೋಮಣ್ಣ ಡಾಕ್ಟರಿಗೆ ಮುನ್ನಾ ದಿನ ಫೋನ್ ಮಾಡಿ ಶ್ರೀನಿವಾಸ ಪೂಜಾರಿ ಪ್ರತಿಭಟನೆಗೆ ಕುಳಿತುಕೊಳ್ಳುತ್ತಾನೆ, ಏನಾದರಾಗಲೀ ಸ್ವಲ್ಪ ಹೋಗಿ ಬನ್ನಿ ಎಂದಿದ್ದರು. ಪಾರ್ಟಿಯ ಸಾಮಾನ್ಯ ಕಾರ್ಯಕರ್ತನ ಬಗ್ಗೆ ಸಣ್ಣಪುಟ್ಟ ವಿಚಾರಕ್ಕೂ ಸೋಮಣ್ಣ ಸಾಂತ್ವಾನ ಮಾಡುತ್ತಿದ್ದರು ಎನ್ನುವುದಕ್ಕೆ ಇದೊಂದು ಪುಟ್ಟ ಉದಾಹರಣೆ.

1995 ರಲ್ಲಿ ಅಂದು ಉಡುಪಿ ಜಿಲ್ಲೆಯ ಉಸ್ತುವಾರಿ ಮಂತ್ರಿ ಜಯಪ್ರಕಾಶ್ ಹೆಗ್ಡೆಯೆದುರು ನನ್ನನ್ನು ಅಭ್ಯರ್ಥಿ ಮಾಡುವುದೆಂದು ಕೊಡ್ಗಿ, ಜಯರಾಮ ಶೆಟ್ರು, ಆಚಾರ್ಯರೆಲ್ಲಾ ನಿರ್ಧರಿಸಿ ಅಖಾಡಕ್ಕಿಳಿಸಿದ್ದರು. ಕುಂದಾಪುರ ಶರೋನ್ ಹೋಟೇಲ್ ಸಭಾಂಗಣದಲ್ಲಿ ಕಾರ್ಯಕರ್ತರ ಸಭೆ. ಸಂಭಾವ್ಯ ಅಭ್ಯರ್ಥಿಯಾದ ನಾನು ನನ್ನ ಎಂ.ಐ.ಟಿ ಸ್ಕೂಟರ್ ತೆಗೆದುಕೊಂಡು ಹೋಗಿದ್ದೆ. ಸಭೆ ಮುಗಿಯುತ್ತಲೇ ಕೊಠಡಿಯೊಂದರಲ್ಲಿ ಸೋಮಣ್ಣ ಮತ್ತು ಗುಜ್ಜಾಡಿ ನನಗೆ ಕರೆದು ಬ್ರಹ್ಮಾವರಕ್ಕೆ ನೀನು ಅಭ್ಯರ್ಥಿ ಎಂದು ತೀರ್ಮಾನವಾಗಿದೆ, ಸೋಲು-ಗೆಲುವು ಹೇಗೆ ಎಂದು ಈಗ ಅರ್ಥವಾಗುವುದಿಲ್ಲ, ಒಂದು ನೆನಪಿರಲಿ ಯಾವುದೇ ಸಂದರ್ಭದಲ್ಲಿ ನೀನು ಏಕಾಂಗಿ ಎಂಬ ಅಭದ್ರತೆ ಬೇಡ. ನಾವೆಲ್ಲಾ ನಿನ್ನ ಜೊತೆಗಿದ್ದೇವೆ ಎಂದು ಹೇಳಿದ್ದರು. ಅದರಂತೆ ಹೆಜ್ಜೆ ಹೆಜ್ಜೆಗೂ ನಡೆದುಕೊಂಡಿದ್ದರು. ಸೋಮಣ್ಣನಲ್ಲಿರುವ ವಿಶೇಷವೆಂದರೆ ಪ್ರತಿಯೊಬ್ಬ ಕಾರ್ಯಕರ್ತನಲ್ಲಿರುವ ಶಕ್ತಿಯನ್ನು ಅಳೆದು ತೂಗಿ ಯಾರಿಗೂ ಅರಿವಿಲ್ಲದಂತೆ ಹೆಜ್ಜೆ ಹೆಜ್ಜೆಗೆ ವಿಷಯಗಳನ್ನು ಹಿಂಬಾಲಿಸುತ್ತಿದ್ದುದು.

**ತಪ್ಪು ಮಾಡಿ ಸಿಕ್ಕಿಬಿದ್ದೆ :** ಬಿಜೆಪಿ ಸರ್ಕಾರ ಬಂದ ದಿನಗಳಲ್ಲಿ ಕಾರವಾರ ವಿಧಾನಸಭಾ ಕ್ಷೇತ್ರದ ಅಸ್ನೋಟಿಕ್‌ರವರ ಉಪಚುನಾವಣೆ ನಡೆಯಿತು. ಕಾಂಗ್ರೆಸ್ ಪಕ್ಷದಲ್ಲಿ ಜನಾರ್ಧನ ಪೂಜಾರಿ ಬಂಗಾರಪ್ಪನಂತವರ ಸಹಿತ ಘಟಾನುಘಟಿಗಳು ಚುನಾವಣಾ ಪ್ರಚಾರದಲ್ಲಿ ತೊಡಗಿದ್ದನ್ನು ಕಂಡ ಡಾ.ವಿ.ಎಸ್. ಆಚಾರ್ಯರವರು ಉಡುಪಿ ಜಿಲ್ಲೆಯ ಪ್ರಮುಖರೆಲ್ಲಾ ಬಂದು ಕಾರವಾರದ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಳ್ಳುವಂತೆ ಕಟ್ಟಪ್ಪಣೆ ಮಾಡುತ್ತಾರೆ. ಸರಿ, ಹಿರಿಯ ಕಿರಿಯ ತಲೆಗಳೆಲ್ಲಾ ಕಾರವಾರಕ್ಕೆ ಧಾವಿಸುತ್ತವೆ. ಸೋಮಣ್ಣ ನನಗೂ ಫೋನ್ ಮಾಡಿ ಹೇಳಿದ್ದೇನೆಂದರೆ ನಾಳೆ ಬೆಳಿಗ್ಗೆ ಬೇಗನೆ ಕಾರವಾರ ತಲುಪಿ ಡಾಕ್ಟರಿಗೆ ಸಿಕ್ಕಿ ಅವರೇನು ಕೆಲಸ ಹೇಳುತ್ತಾರೋ ಮಾಡಿ ಎಂದಿದ್ದರು. ನಾನದರೋ ಚುನಾವಣಾ ಸಭೆ ನಡೆಯುವುದು ಸಂಜೆ, ಮಧ್ಯಾಹ್ನ ಹೊರಟರೆ ಸಾಕು ಎಂದು ಯೋಚಿಸಿ, ಆಯಿತು ಎಂದು ಒಪ್ಪಿಕೊಂಡಿದ್ದೆ. ಬೆಳಿಗ್ಗೆ 11 ಗಂಟೆಗೆ ಸೋಮಣ್ಣ ಫೋನ್ ಮಾಡಿ ಎಲ್ಲಿದ್ದೀರಿ ಎಂದು ಕೇಳಿದ್ದರು. ಕೂಡಲೇ ಜಾಗೃತಗೊಂಡ ನಾನು ಸೋಮಣ್ಣ ಕಾರವಾರದ ಸಮೀಪ ಇದ್ದೇನೆ. ಸ್ವಲ್ಪ ಹೊತ್ತಿನಲ್ಲಿ ಡಾಕ್ಟರನ್ನು ಭೇಟಿಯಾಗುತ್ತೇನೆಂದು ಹೇಳಿಯೇ ಬಿಟ್ಟೆ.

ಹೇಳಬಾರದಿತ್ತು ಆದರೆ ಸೋಮಣ್ಣನಿಗೆ ಒಂದು ಸುಳ್ಳು ಹೇಳಿದ್ದಾಯಿತು. ಸ್ವಲ್ಪ ಹೊತ್ತು ಬಿಟ್ಟು ಬಿಜೆಪಿ ಮುಖಂಡರಾದ ರವಿ ಅಮೀನ್ ಫೋನ್ ಮಾಡಿ ಎಲ್ಲಿದ್ದೀರಿ ಶ್ರೀನಿವಾಸ ಪೂಜಾರಿಯವರೆ ಎಂಬ ಪ್ರಶ್ನೆಗೆ ನಾನು ಕೋಟದಲ್ಲಿರುವ ಅಮೃತೇಶ್ವರಿ ದೇವಸ್ಥಾನದ ಬಳಿ ಲತಾ ಹೋಟೇಲ್‌ನಲ್ಲಿ ಕಾಫಿ ಕುಡಿಯುತ್ತಿದ್ದೇನೆ. ಏನಾದರೂ ವಿಷಯವುಂಟಾ ಎಂದು ಮಾಮೂಲಿ ಧಾಟಿಯಲ್ಲಿ ಕೇಳಿದ್ದೆ. ಏನಿಲ್ಲಾ ಸುಮ್ಮನೆ ಮಾಡಿದೆ ಎಂದು ಫೋನ್ ಇಟ್ಟರು ರವಿ ಅಮೀನ್.

ಗ್ರಹಚಾರ ಇನ್ನೆರಡೇ ನಿಮಿಷದಲ್ಲಿ ಸೋಮಣ್ಣನ ಫೋನ್ ಬಂತು. ಏನು ಸೋಮಣ್ಣ ಎಂದು ಕೇಳುವ ಮೊದಲೇ, ಸೋಮಣ್ಣ ಹೇಳಿದ್ದು, ಪೂಜಾರ್ರೇ, ಕೋಟದ ಲತಾ ಹೋಟೇಲ್ ಕಾರವಾರದಲ್ಲಿ ಮಾಡಿದ್ದೀರಾ? ಏನಾಯಿತೆಂದು ತಿಳಿಯುವ ಮೊದಲೇ ನನಗರ್ಥವಾದದ್ದು ಕಾರವಾರದಲ್ಲಿದ್ದೇನೆಂದ ನನ್ನ ಮಾತು ಸತ್ಯವಾ ಎಂದು ತಿಳಿದುಕೊಳ್ಳಲು ಸೋಮಣ್ಣ ರವಿ ಅಮೀನ್‌ರಿಂದ ಫೋನ್ ಮಾಡಿಸಿದ್ದಾರೆ. ನನ್ನ ಸ್ಥಿತಿಯಂತೂ ಮಾಲು ಸಮೇತ ಸಿಕ್ಕಿ ಬಿದ್ದ ಕಳ್ಳನ ಕತೆಯಾದರೆ ತಪ್ಪಾಯಿತು ಎಂದು ಕಾರವಾರಕ್ಕೆ ಧಾವಿಸಿದೆ. ಹೀಗೆ ಸೋಮಣ್ಣ ನಿದ್ರಾಹಾರ ಹೊರತುಪಡಿಸಿ ಪ್ರತೀ ಕ್ಷಣವೂ ಪಾರ್ಟಿಯ ಬಗ್ಗೆ ಯೋಚನೆ ಮಾಡುತ್ತಿದ್ದರು. ವ್ಯಕ್ತಿಯೊಬ್ಬ ತಾನು ನಂಬಿದ ಸಿದ್ಧಾಂತಕ್ಕೆ ಬದ್ಧನಾಗಿ ಬದುಕಿದರೆ ಎಂತಹ ತೃಪ್ತಿದಾಯಕ ಜೀವನ ಎಂಬುದಕ್ಕೆ ಸೋಮಣ್ಣ ಉದಾಹರಣೆ. ಸೋಮಣ್ಣ ಅವರು ಸಂಘಟನೆಗೆ ತ್ಯಾಗ ಮಾಡಿದ್ದೇ ಹೆಚ್ಚು. ಜನಸಂಘದ ಕಾಲದಲ್ಲಿ ಪಕ್ಷಕ್ಕೆ ಶಕ್ತಿ ಇಲ್ಲದ ದಿನಗಳಲ್ಲಿ ಸೋಮಣ್ಣ ಹೇಗೆ ದುಡಿಯುತ್ತಿದ್ದರೋ, ಇಂದು ದೇಶದಲ್ಲೇ ಬೃಹತ್ತಾಗಿ ಬೆಳೆದು ವಿಶ್ವಮಟ್ಟದ ಪ್ರಧಾನಿ ನೀಡಿದ ಪಕ್ಷದ ಪ್ರಮುಖ ಕಾರ್ಯಕರ್ತನಾಗಿ ಸೋಮಣ್ಣ ಈಗಲೂ ಅಹರ್ನಿಶಿ ದುಡಿಯುತ್ತಾರೆ. ಸೋಮಣ್ಣನನ್ನು ನಾವೆಲ್ಲಾ ಒಪ್ಪಬಹುದು, ಒಪ್ಪದಿರಲೂ ಬಹುದು, ಇಂದು ಸೋಮಣ್ಣನ ಮಾತಿಗೆ ರಾಷ್ಟ್ರ, ರಾಜ್ಯದಲ್ಲಿ ಅದೇ ಗೌರವವಿದೆ.

**ಸೋಮಣ್ಣ ಎಂಬ ವಾಮನ ಶಕ್ತಿ ನೋಡಿ :** ಶ್ರೀ ಬಿ.ಎಸ್. ಯಡಿಯೂರಪ್ಪನವರರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ದಿನಗಳಲ್ಲಿ ಮೇಲ್ಮನೆಯ ಶಾಸಕ ಹಾಗೂ ಜಿಲ್ಲಾ ಬಿಜೆಪಿಯ ಅಧ್ಯಕ್ಷನಾಗಿದ್ದರೂ ನನಗೆ ಸಂಕಟ ಎದುರಾಯಿತು. ನನ್ನೂರ ಕೋಟತಟ್ಟು ಗ್ರಾಮ ಪಂಚಾಯತ್‌ನಲ್ಲಿ ಕಾರಂತ ಹುಟ್ಟೂರ ಪ್ರಶಸ್ತಿ ನೀಡಲು ಮುಖ್ಯಮಂತ್ರಿಗಳನ್ನು ಕರೆದಿದ್ದು. ಬರುವುದಾಗಿ ಅವರು ಒಪ್ಪಿಕೊಂಡಿದ್ದರೂ, ಈ ಮಧ್ಯೆ ಸಿಎಂ ಕಛೇರಿಯಲ್ಲಿ ಹೊಸ ಚರ್ಚೆಯೊಂದು ಉದ್ಭವಿಸಿತ್ತು.ನಾವು ಪ್ರಶಸ್ತಿ ಕೊಡುವ ಸಾಹಿತಿಗಳು ಯಡಿಯೂರಪ್ಪನವರ ಬಗ್ಗೆ ಕೆಟ್ಟದ್ದಾಗಿ ಬರೆದಿದ್ದರಂತೆ. ಪ್ರಶಸ್ತಿಯನ್ನು ರಾಜ್ಯದ ಮುಖ್ಯಮಂತ್ರಿಯವರಾಗಿ ಯಡಿಯೂರಪ್ಪನವರು ಹಸ್ತಾಂತರಿಸಬೇಕಾಗಿರುವುದು. ಸಮಾರಂಭದ ಮುನ್ನಾ ದಿನ ಎ.ಜಿ. ಕೊಡ್ಗಿಯವರು ಮುಖ್ಯಮಂತ್ರಗಳ ಕಛೇರಿಯಲ್ಲಿ ಸಂಬಂಧಿತ ಸಾಹಿತಿಗಳ ಬಗ್ಗೆ ಅಪಾರ ಚರ್ಚೆಯಾಗಿದೆ. ಆದ್ದರಿಂದ ಸಿಎಂ ನಿಮ್ಮ ಸಭೆಗೆ ಬರುವುದು ಸಾಧ್ಯವೇ ಇಲ್ಲ, ನಿಮಗೆ ಹುಡುಗಾಟಿಕೆ ಎಂದು ಬೈದಿದ್ದರು. ಸಾಲದ್ದಕ್ಕೆ ಅಂದಿನ ಪಾರ್ಟಿಯ ರಾಜ್ಯಾಧ್ಯಕ್ಷ ಸದಾನಂದ ಗೌಡರು ಯಡಿಯೂರಪ್ಪನವರು ಬರುವುದು ಕಷ್ಟ ಕಷ್ಟ ಎಂದು ಫೋನ್ ಕಟ್ ಮಾಡಿ ನಗಾಡಿದ್ದರು.ನನಗೆ ತಲೆ ತಿರುಗಿ ಹೋಯಿತು.ಇಡೀ ವ್ಯವಸ್ಥೆಯೇ ಅಸ್ತವ್ಯಸ್ಥವಾಯಿತು. ಯಾರಲ್ಲಿ ಕೇಳಿದರೂ ನೋ ಎಂಬುವರೇ ಹೊರತು ನೋಡೋಣ ಎಂಬುವರಿಲ್ಲ. ಸ್ವತಃ ಉಸ್ತುವಾರಿ ಮಂತ್ರಿ ಡಾ. ಆಚಾರ್ಯರೇ ಆತಂಕದಲ್ಲಿದ್ದರು. ಪುನಃ ಸೋಮಣ್ಣರಲ್ಲಿ ನಡುರಾತ್ರಿ ಧಾವಿಸಿ ವಿಷಯ ತಿಳಿಸಿದೆ. ಯಡಿಯೂರಪ್ಪ ಬಾರದಿದ್ದಲ್ಲಿ ಗಂಡಾಂತರ ಎಂದೆ. ಸೋಮಣ್ಣ, ಈಗ ಹೋಗಿ ನೆಮ್ಮದಿಯಿಂದ ಮಲಗಿ ನಾಳೆ ನೋಡೋಣ ಎಂದರು. ಬೆಳಿಗ್ಗೆ 11 ಗಂಟೆಗೆ ಸೋಮಣ್ಣ ಕರೆ ಕಳುಹಿಸುತ್ತಾರೆ. ಸ್ವಲ್ಪ ಬಿಗುಮಾನದಲ್ಲೇ ಕುಳಿತ ಸೋಮಣ್ಣ ಮೌನ ಮುರಿಯುವವರೆಗೂ ಶತಪರಾಧ ಮಾಡಿದವನಂತೆ ತಲೆ ತಗ್ಗಿಸಿ ಕುಳಿತಿದ್ದೆ. ಮಾತು ಪ್ರಾರಂಭಿಸಿದ ಸೋಮಣ್ಣ ಹೇಳಿದರು, ಆದದ್ದು ಆಗಿ ಯೋಯಿತು, ನಾಳೆಯಾದರೂ ನಿಮ್ಮ ಸಾಹಿತಿಗಳಿಗೆ ಗೌರವದಿಂದ ನಡೆದುಕೊಳ್ಳುವಂತೆ ನೋಡಿಕೊಳ್ಳಿ. ಸರಿಯಾದ ಸಮಯಕ್ಕೆ ಮುಖ್ಯಮಂತ್ರಿಗಳು ಬರುತ್ತಾರೆ ಎಂದಿದ್ದರು. ನಿಗದಿತ ಸಮಯಕ್ಕೆ ಬಂದ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ತನಗೆ ಕಡು ವಿರೋಧ ಮಾಡಿದ ಸಾಹಿತಿಗಳು ನೀಡಿದ ಗೌರವ ಸಭೆಯ ಸಂಭ್ರಮದ ವಾತಾವರಣ ನೋಡಿ ಪ್ರಥಮ ಬಾರಿ ಬಾಯಿ ತುಂಬಾ ನಕ್ಕು ಸನ್ಮಾನಿತ ಸಾಹಿತಿಗೆ ಪ್ರಶಸ್ತಿ ನೀಡಿದ್ದಲ್ಲದೇ, ರಾಜ್ಯೋತ್ಸವ ಪ್ರಶಸ್ತಿಯನ್ನು ಘೋಷಿಸಿ ಹೋದರು. ಅಂತೂ, ನನಗೆ ಹೋದ ಜೀವ ಬಂದಂತಾಗಿತ್ತು.ಸ್ವತಃ ಶಾಸಕನಾದ ನಾನು ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಕೊಡ್ಗಿಯವರು, ಸದಾನಂದ ಗೌಡರ ಸಹಿತಿ ಯಾರಿಂದಲೂ ಕಷ್ಟವೆಂದ ಕೆಲಸ ಸೋಮಣ್ಣ ಎಂಬ ವಾಮನಮೂರ್ತಿಯ ಸಂಘ ಶಕ್ತಿಯಿಂದ ಸಾಧ್ಯವಾಗುತ್ತದೆ ಎಂದರೆ ಇದೇ ಸೋಮಣ್ಣನ ಸಾಮರ್ಥ್ಯ ಮತ್ತು ತಾಕತ್ತು.

ಹೀಗೆ ಸೋಮಶೇಖರ ಭಟ್ಟರ ಬದುಕಿನ ಚೈತ್ಯಯಾತ್ರೆ ನಡೆಯುತ್ತೆ. ನನಗರ್ಥವಾಗದಿರುವುದು ಡಾ.ಆಚಾರ್ಯ ಮತ್ತು ಸೋಮಣ್ಣನ ಗೆಳೆತನ ಎಂಬ ಸಂಬಂಧ. ಅವರಿಬ್ಬರೂ ಬರೀ ಗೆಳೆಯರಾಗಿರಲಿಲ್ಲ. ಒಂದು ರಾಜಕೀಯ ಪಕ್ಷದ ಸಮಾನ ಶಕ್ತಿಯ ಹಿರಿಯ ಕಾರ್ಯಕರ್ತರಾಗಿ ಮಾತ್ರ ಉಳಿದಿಲ್ಲ. ಬದಲಾಗಿ ನಮಗಾರಿಗೂ ಅಂದರೆ, ಬಾಹ್ಯ ಪ್ರಪಂಚಕ್ಕೆ ಅರ್ಥವಾಗದ ಭಾವನಾತ್ಮಕ ಸಂಬಂಧದ ಬೆಸುಗೆ ಅವರಿಬ್ಬರ ಬದುಕಿನಲ್ಲಿ ಆವರಿಸಿತ್ತು. ಹಿಂದೊಮ್ಮೆ ಅಡ್ವಾನಿ ಮತ್ತು ಅಟಲ್‌ಜೀ ಮಧ್ಯೆ ಬಿರುಕು ಬೀಳಬಹುದೆಂದು ಅನೇಕ ರಾಜಕೀಯ ಪಂಡಿತರು ಲೆಕ್ಕಹಾಕಿದ್ದರಂತೆ. ಆದರೆ ಅಡ್ವಾನಿ, ಜವಾಬ್ದಾರಿ ನಿರ್ವಹಿಸಿ ನಾನಿದ್ದೇನೆ ಎನ್ನುವ ಅಟಲ್ ನೀವೇ ಮುನ್ನುಗ್ಗಿ ನಾನು ಸಹವರ್ತಿಯಾಗುವೆ ಎನ್ನುವ ಅಡ್ವಾಣಿ.ಒಬ್ಬರ ಏಳಿಗೆ ಕಾಣುವ ಮತ್ತೊಬ್ಬರ ಪ್ರೀತಿಯೇ ಬದುಕಿನುದ್ದಕ್ಕೂ ಅವರನ್ನು ಒಂದಾಗಿ ಬೆಸೆಯಿತು.ಆದರೆ ಸೋಮಣ್ಣ ಮತ್ತು ಡಾಕ್ಟರ್ ಅವರ ಪ್ರೀತಿ ಅದಕ್ಕೂ ಮೀರಿದ್ದು. ಡಾಕ್ಟರ್‌ರೆ ನೀವೇ ಮುನ್ನಡೆಯಿರಿ. ದಾರಿಯಲ್ಲಿ ಬರುವ ಎಡರುತೊಡರು

ಕಲ್ಲುಮುಳ್ಳುಗಳನ್ನು ನಾನು ಎದುರಿಸುವೆ ಎನ್ನುವ ಸೋಮಣ್ಣನ ತ್ಯಾಗವೇ ಆಚಾರ್ಯರ ಕೀರ್ತಿ ದಿಗಂತದೆತ್ತರಕ್ಕೆ ಬೆಳೆಯಲು ಕಾರಣವಾಯಿತು. ಗೆಳೆಯನ ಬೆಳವಣಿಗೆಯಲ್ಲಿ ಸೋಮಣ್ಣನ ತ್ಯಾಗದ ಶಕ್ತಿ ತುಂಬಿತು ಎಂದು ನನಗನಿಸುತ್ತಿದೆ. ಒಟ್ಟಾರೆ ಡಾ.ಆಚಾರ್ಯ ಮತ್ತು ಸೋಮಣ್ಣ ಒಂದೇ ಜೀವ ಎರಡು ದೇಹಗಳಂತಿದ್ದರು. ಯಾರೇನೇ ಅನ್ನಲಿ ಆಚಾರ್ಯರ ನಿಧನ ಸೋಮಣ್ಣನ ಓಟಕ್ಕೆ ಸಾಕಷ್ಟು ಕಾಲ ಬ್ರೇಕ್ ಹಾಕಿತ್ತು.ಅವರ ಲವಲವಿಕೆ, ಆರೋಗ್ಯಗಳೆಲ್ಲವೂ ಕುಂಠಿತಗೊಂಡಿದ್ದವು. ಒಂದರ್ಥದಲ್ಲಿ ಆಚಾರ್ಯರಿಲ್ಲದ ಸೋಮಣ್ಣ ತನ್ನತನ ಕಳೆದುಕೊಂಡಿದ್ದಾರೇನೋ ಎಂಬ ದುಗುಡ ನಮ್ಮನ್ನೆಲ್ಲಾ ಆವರಿಸಿತ್ತು. ಆದರೆ, ಮತ್ತೆ ಸಂಘದ ಧ್ಯೇಯ ಜಾಗೃತವಾಯಿತು. ಸೋಮಶೇಖರ ಭಟ್ಟರು ಮತ್ತೊಮ್ಮೆ ಬದುಕಿನ ಸಾರ್ಥಕಗಳನ್ನು ಸಂಘಟನೆಗಾಗಿ ಮುಂದುವರಿಸಿದರು.ನನ್ನ ಮಟ್ಟಿಗಂತೂ ಅವರೊಬ್ಬ ಶಿಲ್ಪಿ. 1992 ರಿಂದ ಸರಿಸುಮಾರು 32 ವರ್ಷಗಳ ಕಾಲದ ನನ್ನ ಸಾರ್ವಜನಿಕ ಜೀವನದಲ್ಲಿ ಸೋಮಣ್ಣನೊಡನೆ ಮಾತಾಡದ ದಿನಗಳು ಅಪರೂಪ. ನನ್ನ ನಿನ್ನೆಯ ತಪ್ಪುಗಳಿಗಾಗಿ ಹಣೆ ಹಣೆ ಬಡಿದುಕೊಳ್ಳುತ್ತಾ, ನಾಳೆಯ ಜವಾಬ್ದಾರಿಗಳನ್ನು ಮತ್ತೆ ಮತ್ತೆ ನೆನಪಿಸುತ್ತಾ, ಬದುಕಿನ ಹೆಜ್ಜೆಗಳನ್ನಿಡಲು ದಾರಿ ರೂಪಿಸಿದವರು ಸೋಮಣ್ಣ.

**ಮನೆಗೆ ಬರುತ್ತೇನೆ ಎಂದಿದ್ದರು ಸೋಮಣ್ಣ :** ಒಂದು ದಿನ ನನ್ನೂರ ಖಾಸಗಿ ಹೋಟೇಲ್‌ನಲ್ಲಿ ಕಾಫಿ ಕುಡಿಯುತ್ತಿದ್ದೆ. ಸೋಮಣ್ಣ ಫೋನ್ ಕರೆ ಮಾಡಿ, ನಾನು ಮತ್ತು ಗುಜ್ಜಾಡಿ ನಿಮ್ಮೂರಲ್ಲಿದ್ದೇವೆ. ನಿಮ್ಮ ಮನೆಗೆ ಬರಬೇಕೆಂದುಕೊಂಡಿದ್ದೇವೆ ಎಂದರು. ನನಗೊಂದು ಸಾರಿ ಗಾಬರಿಯಾಗಿತ್ತು. ನನ್ನ ಮನೆಯಾದರೋ ಗುಂಡುರಾಯರ ಕಾಲದ ಆಶ್ರಯ ಯೋಜನೆಯ ಸಾಲದ ಮೂಲಕ ಕಟ್ಟಿದ್ದು. ಮನೆಯೂ ಮತ್ತು ದನದ ಕೊಟ್ಟಿಗೆಯೂ ಒಂದೇ ಛಾವಣಿಯಲ್ಲಿದೆ. ಬಿಟ್ಟನಾಯಿ, ಅಂಗಳದ ತುಂಬೆಲ್ಲಾ ಹಿಕ್ಕೆ ಹಾಕಿ ಓಡಾಡುವ ಕೋಳಿ ಹುಂಜ ಹೇಂಟೆಗಳು. ಸಾಲದ್ದಕ್ಕೆ ನನ್ನ ಪತ್ನಿ ಶಾಂತಾ ಹೇಳುತ್ತಿದ್ದಳು, ಯಾರಾದರೂ ದೊಡ್ಡವರನ್ನು ನಮ್ಮ ಮನೆಗೆ ಕರೀಬೇಡಿ. ನಮ್ಮ ಅವತಾರ ಕಂಡು ಹೆದರಿಯಾರು ಎಂದು.

ಅಂದು ಹೆಂಡತಿ ಶಾಂತಾ ಮನೆಯಲ್ಲಿರಲಿಲ್ಲ. ಬರುತ್ತೇನೆ ಎಂದ ಸೋಮಣ್ಣನನ್ನು, ಇಂದು ಮನೆಯಲ್ಲಿ ಯಾರೂ ಇಲ್ಲ ಸೋಮಣ್ಣ ಎಂದಿದ್ದೆ. ಮುಂದೆ ಯಾವಾಗಲಾದರೂ ಬರುತ್ತೇನೆ ಎನ್ನುತ್ತಾ ಸೋಮಣ್ಣ ವಾಪಾಸು ಹೋಗಿದ್ದರು. ನಂತರದ ದಿನಗಳು ಮಾತ್ರವಲ್ಲ, ಕೆಲ ವರ್ಷಗಳು ಉರುಳಿದವು.ನಾನು ಶಾಸಕರಾಗಿ ಮತ್ತೊಮ್ಮೆ ಅವಿರೋಧವಾಗಿ ಆಯ್ಕೆಯಾದೆ. ನನಗೆ ಮಂತ್ರಿಯಾಗುವ ಅವಕಾಶ ಬಂತು. ರಾಜ್ಯದ ಕ್ಯಾಬಿನೆಟ್ ದರ್ಜೆಯ ಮಂತ್ರಿಯಾದಾಗಲೂ ಅದೇ ಮನೆಯಲ್ಲಿದ್ದೆ. ಸಂತೋಷವೆಂದರೆ ನನ್ನ ಮನೆಗೆ ಪೂಜ್ಯ ಪೇಜಾವರ ಶ್ರೀಗಳು ಬಂದರು. ನನಗಾಗ ನೆನಪಾದದ್ದು ಸೋಮಣ್ಣನದ್ದು. ಅಂದು ಮನೆಗೆ ಬರುತ್ತೇನೆ ಎಂದ ಸೋಮಣ್ಣನನ್ನು ಕರೆದಿರಲಿಲ್ಲ. ಇಂದು ಬಂದಾರು ಎಂಬ ಯೋಚನೆಯಿಂದ, ಸೋಮಣ್ಣ ಮತ್ತು ಗುಜ್ಜಾಡಿಯವರಿಗೆ ಮನವಿ ಮಾಡಿದ್ದೆ. ಪೂಜ್ಯ ಪೇಜಾವರ ಶ್ರೀಗಳು ನನ್ನ ಮನೆಗೆ ಬಂದು ಪುಟ್ಟ ಸಭೆಯಲ್ಲಿ ಆಶೀರ್ವಚನ ಮಾಡಿದ್ದರು. ವೇದಿಕೆಯಲ್ಲಿ ಮತ್ತೊಂದು ಕುರ್ಚಿ ಇಟ್ಟಿದ್ದೆ. ಅದು ಸೋಮಣ್ಣನಿಗೆ.ಆದರೆ ನನ್ನ ನಿರೀಕ್ಷೆಯ ಸೋಮಣ್ಣ ಎಷ್ಟೇ ಕಾದರೂ ಬರಲಿಲ್ಲ.

ಸೋಮಣ್ಣ, ಇನ್ನೂ ಯಾಕೆ ನೀವೂ ಮತ್ತು ಗುಜ್ಜಾಡಿಯವರು ಬರಲಿಲ್ಲ ಎಂದು ಫೋನ್ ಮಾಡುವ ಧೈರ್ಯ ಮಂತ್ರಿಯಾದರೂ ನನಗಿರಲಿಲ್ಲ. ಮಂತ್ರಿ ಶ್ರೀನಿವಾಸನ ಮನೆಗೆ ಬರುವುದಕ್ಕಿಂತಲೂ ಕುಚೇಲನಂತೆ ಬದುಕ್ಕಿದ್ದ ನನ್ನ ಅಂದಿನ ಮನೆಗೆ ಬರುವುದೇ ಸೋಮಣ್ಣನಿಗೆ ಇಷ್ಟವಾದ ಕೆಲಸವಿರಬಹುದು ಎಂದು. ಕೊನೆಯವರೆಗೂ ಪೇಜಾವರರೊಂದಿಗೆ ಇಟ್ಟ ಕುರ್ಚಿ ಹಾಗೇಯೇ ಇರಿಸಿ ಸಭೆ ಸಮಾಪನಗೊಳಿಸಿದ್ದೆ. ಅಂದು ಸಾಮಾನ್ಯ ಕಾರ್ಯಕರ್ತನೊಬ್ಬನ ಮನೆಗೆ ಕರೆಯದೆ ಬರುವ ಸೋಮಣ್ಣ, ಕರೆದರೂ ಬರದಿರುವುದಕ್ಕೆ ಕಾರಣದ ಅರಿವಾಗಿತ್ತು, ಪಶ್ಚತ್ತಾಪದ ಸುಳಿಯೊಂದು ಸೆಳೆದು ಹೋಗಿತ್ತು. ಇದೇ ಸೋಮಣ್ಣನತನ.

**ಮಾತು ಕೇಳದೆ ಪ್ರಮಾದ ಮಾಡಿಕೊಂಡೆ :** ಯಾವಾಗಲೂ ಸೋಮಣ್ಣನ ಮಾತೇ ಅಂತಿಮ ಎಂದು ಅನುಸರಿಸುತ್ತಿದ್ದ ನನಗೆ ಅದೆಂತಹಾ ಮೊಂಡು ಧೈರ್ಯ ಬಂತೋ, ಸೋಮಣ್ಣನ ಹಿತವಚನ ಮೀರಿ ಅದ್ಯಾವುದೋ ಒಂದು ನಿರ್ಧಾರ ತೆಗೆದುಕೊಂಡೆ. ದುರಾದೃಷ್ಟಕ್ಕೆ ನನಗರ್ಥವಾಗುವ ಮುಂಚೆ ನನ್ನ ನಿರ್ಧಾರ ವಿಪರೀತ ಸಮಸ್ಯೆ ಸೃಷ್ಟಿಸಿತ್ತು. ನಿರ್ಧಾರ ನನ್ನದಾದರೂ ಹೆಚ್ಚು ನೋವು ಅನುಭವಿಸಿದವರು ಸೋಮಣ್ಣ. ಮತ್ತೆ ಮಾಮೂಲಿ ನಾನು ತಪ್ಪಾಯಿತು ಎನ್ನುವುದು, ಸೋಮಣ್ಣ ಮರೆತು ಒಳ್ಳೆಯದಾಗಲಿ ಎಂದು ಹಾರೈಸುವುದು ನಡೆದೇ ಹೋಯಿತು. ಒಟ್ಟಾರೆ ಸುಮಾರು ಮೂರು ದಶಕದ ನನ್ನ ಸಾರ್ವಜನಿಕ ಜೀವನದಲ್ಲಿ, ನನ್ನೆಲ್ಲಾ ನಿರಂತರ ತಪ್ಪುಗಳನ್ನು ಕ್ಷಮಿಸುತ್ತಲೇ ಬಂದ ಸೋಮಣ್ಣ ನನ್ನಂತಹಾ ಸಾವಿರಾರು ಕಾರ್ಯಕರ್ತರಿಗೆ ದಾರಿದೀಪ. ಪಾರ್ಟಿಯ ಅಂದಿನ ದೀಪದ ಚಿಹ್ನೆಯಿಂದ ಇಂದಿನ ಅರಳಿದ ಕಮಲದ ಚಿಹ್ನೆಯವರೆಗೂ ಸೋಮಣ್ಣ ಎಲ್ಲರಿಗೂ ಅಣ್ಣನಾಗಿಯೇ ಮುಂದೆ ನಿಲ್ಲುತ್ತಾರೆ ಗೌರವದಲ್ಲಿ. ಸೋಮಣ್ಣನಂತಹ ಪತಿ ಪಡೆದ ಮನೆಯೊಡತಿ ಶಾರದಕ್ಕನವರಲ್ಲೂ ತಾಯ್ತನದ ಪ್ರೀತಿ ನೋಡಿದ್ದೆ. ಉಡುಪಿ ನಗರದ ಕಾಡುಬೆಟ್ಟಿನ ಪುಟ್ಟ ಮನೆಯಿಂದ ಸೋಮಣ್ಣ ಎಂಬ ವಾಮನ ಮೂರ್ತಿ ಅಟಲ್, ಅಡ್ವಾಣಿಜಿ ಮಾತ್ರವಲ್ಲ, ಇಂದಿನ ಪ್ರಧಾನಿ ನರೇಂದ್ರ ಮೋದಿಯ ವರೆಗೆ ದೂರವಾಣಿ ಮೂಲಕ ಮಾತನಾಡುತ್ತಾ ರಾಷ್ಟ್ರ ಕಟ್ಟುವ ಕೈಂಕರ್ಯದಲ್ಲಿ ಬದುಕು ಸಮರ್ಪಣೆ ಮಾಡಿ ಸರಿಸುಮಾರು 90 ಸಂವತ್ಸರಗಳನ್ನು ನಂಬಿದ ಸಿದ್ಧಾಂತಗಳಿಗೆ ವ್ಯಯಿಸಿ, ಕೊನೆಯ ದಿನಗಳಲ್ಲೂ ರಾಮ ಮಂದಿರ ನಿರ್ಮಾಣದ ಕನಸನ್ನು ನನಸಾಗಿಸಿಕೊಂಡು ಸಂತೃಪ್ತ ಬದುಕಿನೊಂದಿಗೆ ಮುಗುಳ್ನಗೆಯಾಡುತ್ತಾ ಮರೆಯಾದ ಸೋಮಣ್ಣ ನನ್ನಂತಹ ಕಾರ್ಯಕರ್ತರಿಗೆ ಆದರ್ಶ ಮತ್ತು ದೇವರು.



# ಮಾದರಿಯೊಂದನ್ನು ಬಿಟ್ಟು ಹೊರಟುಹೋದ

# ಚೆಟ್ಟಿಯಾರರು





ಸಂತೋಷ್ ತಮ್ಮಯ್ಯ
ಅಂಕಣಕಾರರು

**ಶಾಖೆಗೆ ಹೋದ ಬಾಲಕನೊಬ್ಬ ಸಮಾಜವನ್ನು ಹೇಗೆ ಬೆಳಗಬಲ್ಲ ಎಂಬುದಕ್ಕೆ ಗೋಪಾಲ ಚೆಟ್ಟಿಯಾರರ ಬದುಕನ್ನು ಮುಲಾಜಿಲ್ಲದೆ ಉದಾಹರಣೆಯಾಗಿ ಕೊಡಬಹುದು. ಅವರ ಹೆಸರು, ಹುದ್ದೆ, ಹೊಣೆಗಾರಿಕೆಗಳು ಅವರ ವ್ಯಕ್ತಿತ್ವದ ಬಗೆ ಬೇರೆಯೇ ರೀತಿಯ ಅಭಿಪ್ರಾಯವನ್ನು ಮೂಡಿಸಬಹುದು. ಚೆಟ್ಟಿಯಾರ್ ಎಂದಾಗ ಶ್ರೀಮಂತ ಉದ್ಯಮಿಗಳ ಕುಟುಂಬವಿರಬಹುದೋ ಎನಿಸಬಹುದು, ಉಪ-ತಹಶೀಲ್ದಾರರಾಗಿದ್ದರೆಂದಾಗ ಬಡತನದ ಕಲ್ಪನೆಯಂತೂ ಯಾರಿಗೂ ಬರಲಾರದು. ಇನ್ನು ಕೇರಳದ ಅನ್ಯಾನ್ಯ ಕಡೆಗಳಲ್ಲಿ ಕೆಲಸ ಮಾಡಿದವರೆಂದಾಗ ಬಹುಶಃ ಕಮ್ಯುನಿಸ್ಟರೊಡನೆ ಹೊಂದಿಕೊಂಡು ಹೋಗಿರಬಹುದು ಎಂದೂ ಅನಿಸಬಹುದು. ಆದರೆ ಗೋಪಾಲ ಚೆಟ್ಟಿಯಾರರು ಈ ಯಾವ ಅಂದಾಜಿನಂತೆಯೂ ಇರಲಿಲ್ಲ. ನೇರ ನಡೆನುಡಿಯ, ಕರ್ಮಮಾರ್ಗದಲ್ಲಿ ನಂಬಿಕೆಯಿಟ್ಟ, ಹೇರಳ ಅವಕಾಶಗಳಿದ್ದರೂ ದುರ್ಮಾರ್ಗದಲ್ಲಿ ಹಣ ಮಾಡದ, ರಕ್ತ ಪಿಪಾಸು ಕಮ್ಯುನಿಸ್ಟರ ಭದ್ರ ಕೋಟೆಯೊಳಗಿದ್ದರೂ ಶುದ್ಧ ಸಂಘಿಯಾಗಿಯೇ ಉಳಿದವರು ಗೋಪಾಲ ಚೆಟ್ಟಿಯಾರರು.**

**ಮುಂ**ದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್ ಕೊಡದಿದ್ದರೆ ಬಿಜೆಪಿಯನ್ನೂ, ಅದರ ಮಾರ್ಗದರ್ಶಕ ಸಂಘಪರಿವಾರವನ್ನೂ ಹೇಳಹೆಸರಿಲ್ಲದಂತೆ ಮಾಡುತ್ತೇವೆ ಎಂದು ನೇರ ಬೆದರಿಕೆ ಒಡ್ಡುವ ಒಂದು ಗುಂಪು, ಇನ್ನೊಂದೆಡೆ ನಯವಾಗಿ, ನಾಜೂಕಿನ ಮುಖ ಹೊದ್ದು, ಸಂಘದ ಮುಗ್ದತೆಯ ಲಾಭ ಪಡೆದು ಸಂಘಕ್ಕಿಂತ ಸಂಘವಾಗಿ ಹೋಗುವ ಇನ್ನೊಂದು ವರ್ಗ! ಸಾಮಾಜಿಕ ತಾಣಗಳಲ್ಲಿ ನಾಲ್ಕಕ್ಷರ ಗೀಚಿ ಅದನ್ನೇ ಬದುಕಿಗೆ ದಾರಿ ಮಾಡಿಕೊಳ್ಳುವ ಸ್ವಯಂಘೋಷಿತ ಸ್ವಯಂಸೇವಕರು ಮತ್ತೊಂದೆಡೆ.

ಒಂದಿನವೂ ಸಂಘದ ಶಾಖೆಗೆ ಹೋಗದ, ಮೈತುಂಬಾ ಜಾತಿಯ ಅಂಟನ್ನು ಮೆತ್ತಿಸಿಕೊಂಡು ಮಾತಿನಲ್ಲಿ ತಿಲಕರಂತೆ ಪೋಸು ಕೊಡುವ ಐಟಂಗಳು ಕೆಲವು. ರಾಷ್ಟ್ರೀಯತೆ-ಹಿಂದುತ್ವಗಳನ್ನು ಸರಿಯಾದ ಕಾಲದಲ್ಲಿ ಕಾಯಿನ್ ಮಾಡಿದರೆ ರಾಜಕಾರಣಕ್ಕೆ ಮೆಟ್ಟಿಲಾಗಿಯೂ ಮಾಡಿಕೊಳ್ಳಬಹುದು,ಅಧಿಕಾರಕ್ಕೇರಲೂಬಹುದು, ಅನಂತರ ಯಾವ ನಾಟಕವನ್ನಾದರೂ ಆಡಬಹುದು. ಆ ನಾಟಕಗಳನ್ನೂ ಮೂರ್ಖ ಸಮಾಜ ಸಿದ್ಧಾಂತಗಳೆಂದು ನಂಬುತ್ತದೆ ಎನ್ನುವ ಅಪಾಯಕಾರಿಯಾದ ಮತ್ತೊಂದಿಷ್ಟು ವಿಷ ಸರ್ಪಗಳು! ಇಂಥವರ ಆರ್ಭಟಗಳ ನಡುವೆ ಕೆಲವರಿಗೆ ಮೂಡುವ ನಕಲಿ ಪ್ರಚಾರಕರನ್ನೂ ಸೃಷ್ಟಿಸಬಹುದೆನ್ನುವ ದುರಾಲೋಚನೆ...

ಇವೆಲ್ಲದರ ನಡುವೆ ಎಲ್ಲೋ ಶಾಲಾ ಮೈದಾನದಲ್ಲಿ ಭಗವಧ್ವಜ ನೆಟ್ಟು ಕಬಡ್ಡಿ ಆಡುವ ಹುಡುಗರು, ಅವರನ್ನು ಆಡಿಸುವ ಮುಖ್ಯ ಶಿಕ್ಷಕ. ಮುಖವಾಡಧಾರಿಗಳ ಕಿಂಚಿತ್ತೂ ಪರಿಚಯವಿಲ್ಲದೆ ಅವರು ಹಾಡುವ ಉಘೇ ವೀರಭೂಮಿಗೆ ಗೀತೆ! ವಿಪರ್ಯಾಸವೆಂದರೆ ಸಂಘ ವಿಮರ್ಶಕರಿಗೆ ಈ ಮುಖ್ಯಶಿಕ್ಷಕ ಮತ್ತು ಕಬಡ್ಡಿ ಆಡುವ ಹುಡುಗರಿಗಿಂತ ಸ್ವಯಂಘೋಷಿತ ಸ್ವಯಂಸೇವಕರೇ ಎದ್ದುಕಾಣುತ್ತಾರೆ! ಇನ್ನೊಂದೆಡೆ ಸಮಾಜಕ್ಕೆ ಒಂದು ಹಂತದಲ್ಲಿ ಛದ್ಮವೇಷದವರ ತುರಾತುರಿಗಳೇ ಸಂಘ ಎನಿಸಿಬಿಡುವ ಅಪಾಯವೂ ಬೇರೆ!

ಇವೆಲ್ಲದರ ನಡುವೆ ಈ ನೆಲದಲ್ಲಿ ಧರ್ಮ ಮಾತ್ರ ಉಳಿಯುತ್ತದೆ ಮತ್ತು ಆಳುತ್ತದೆ ಎಂಬ ಸತ್ಯವೊಂದಿದೆ. ಆ ಧರ್ಮ ಮತ್ತು ಸಂಘಸ್ಥಾಪಕರ ಧ್ಯೇಯೋದ್ದೇಶಗಳು ಛದ್ಮವೇಷಧಾರಿಗಳನ್ನು ಹೆಚ್ಚುಕಾಲ ಸಂಘದೊಳಗೆ ಇರಿಸಿಕೊಳ್ಳುವುದಿಲ್ಲ. ಒಂದಲ್ಲಾ ಒಂದು ದಿನ ನಾಟಕಕಾರರು ಸಮಾಜದಲ್ಲಿ ಬೆತ್ತಲಾಗಲೇಬೇಕು. ಕಂಡಕ್ಟರ್ ಕುಡಿದಿದ್ದರೆ ಪ್ರಯಾಣಕ್ಕೇನೂ ಅಡ್ಡಿಯಿಲ್ಲ. ಆದರೆ ಡ್ರೈವರನೇ ಕುಡಿದಿದ್ದರೆ ಬಸ್ಸು ಎಷ್ಟು ಕಿ.ಮೀವರೆಗೆ ಸಾಗೀತು?

ಸ್ವಯಂಸೇವಕತ್ವವೆನ್ನುವುದು ಯಾರೂ ಕಾಪಿ-ಪೇಸ್ಟ್ ಮಾಡಲಾಗದ, ಶಾಖೆಯ ಮೇಲೆ ಶ್ರದ್ಧೆ ಇಟ್ಟವರಿಗೆ ಮಾತ್ರ ದಕ್ಕುವ, ಬೈಠಕುಗಳಿಂದ ಬೈಠಕುಗಳಿಗೆ ಸಂವೇದನೆಯನ್ನು ಹೆಚ್ಚಿಸಿಕೊಳ್ಳುತ್ತಾ ಬರುವ ಜೀವನದ್ರವ್ಯವೇ ಹೊರತು, ತನಗೆ ಕಾರ್ಯಾಲಯದ ದಾರಿ ಗೊತ್ತು, ತನಗೆ ಆ ಹಿರಿಯರು ಪರಿಚಯ, ಇವರು ನನ್ನ ಬೆನ್ನು ತಟ್ಟುತ್ತಾರೆ ಎಂದುಕೊಳ್ಳುವುದರಿಂದ ದಕ್ಕುವ ಸಂಗತಿಯಲ್ಲ. ಹಾಗಾದರೆ ಅಸಲಿ ಸ್ವಯಂಸೇವಕ ಹೇಗಿರುತ್ತಾನೆ? ಶಾಖೆಯ ಮುಂದೆ ಕಬಡ್ಡಿ ಆಡುವ, ಆಡಿಸುವವ ಮುಂದೆ ಏನಾಗುತ್ತಾನೆ? ಮೊದಲಾದ ಸಂಗತಿಗಳು ಸಂಘ ವಿಮರ್ಶಕರಿಗೆ ಬೇಕಾಗಿಲ್ಲ. ಸಂಘಕ್ಕೂ ಪ್ರಚಾರದ ಹಂಗಿಲ್ಲ. ಹಾಗಾಗಿ ಸಂಘ ಕೆತ್ತಿದ ಸ್ವಯಂಸೇವಕತ್ವದ ಶಿಲ್ಪಗಳೆಂದೂ ಮ್ಯೂಸಿಯಮ್ಮಿಗೆ ಬರುವುದಿಲ್ಲ.

ನಾಲ್ಕು ದಿನಗಳ ಹಿಂದೆ ನಿಧನರಾದ ಕಾಸರಗೋಡು ಪೆರ್ಲದ ಹಿರಿಯ ಸ್ವಯಂಸೇವಕ ಗೋಪಾಲ ಚೆಟ್ಟಿಯಾರರು ಅಂಥವರಲ್ಲೊಬ್ಬರು. ಶಾಖೆಗೆ ಹೋದ ಬಾಲಕನೊಬ್ಬ ಸಮಾಜವನ್ನು ಹೇಗೆ ಬೆಳಗಬಲ್ಲ ಎಂಬುದಕ್ಕೆ ಗೋಪಾಲ ಚೆಟ್ಟಿಯಾರರ ಬದುಕನ್ನು ಮುಲಾಜಿಲ್ಲದೆ ಉದಾಹರಣೆಯಾಗಿ ಕೊಡಬಹುದು. ಅವರ ಹೆಸರು, ಹುದ್ದೆ, ಹೊಣೆಗಾರಿಕೆಗಳು ಅವರ ವ್ಯಕ್ತಿತ್ವದ ಬಗೆ ಬೇರೆಯೇ ರೀತಿಯ ಅಭಿಪ್ರಾಯವನ್ನು ಮೂಡಿಸಬಹುದು.

ಚೆಟ್ಟಿಯಾರ್ ಎಂದಾಕ್ಷಣ ಒಂದು ಶ್ರೀಮಂತ ಉದ್ಯಮಿಗಳ ಕುಟುಂಬ ಇರಬಹುದೆನಿಸುತ್ತದೆ. ಉಪ-ತಹಶೀಲ್ದಾರ್ ಆಗಿದ್ದರೆಂದಾಗ ಬಡತನದ ಕಲ್ಪನೆಯಂತೂ ಯಾರಿಗೂ ಬರಲಾರದು. ಇನ್ನು ಕೇರಳದ ಅನ್ಯಾನ್ಯ ಕಡೆಗಳಲ್ಲಿ ಕೆಲಸ ಮಾಡಿದವರೆಂದಾಗ ಬಹುಶಃ ಕಮ್ಯುನಿಸ್ಟರೊಡನೆ ಹೊಂದಿಕೊಂಡು ಹೋಗಿರಬಹುದು ಎಂದೂ ಅನಿಸಬಹುದು. ಆದರೆ ಗೋಪಾಲ ಚೆಟ್ಟಿಯಾರರು ಈ ಯಾವ ಅಂದಾಜಿನಂತೆಯೂ ಇರಲಿಲ್ಲ. ನೇರ ನಡೆನುಡಿಯ, ಕರ್ಮಮಾರ್ಗದಲ್ಲಿ ನಂಬಿಕೆಯಿಟ್ಟ, ಹೇರಳ ಅವಕಾಶಗಳಿದ್ದರೂ ದುರ್ಮಾರ್ಗದಲ್ಲಿ ಹಣ ಮಾಡದ, ರಕ್ತ ಪಿಪಾಸು ಕಮ್ಯುನಿಸ್ಟರ ಭದ್ರ ಕೋಟೆಯೊಳಗಿದ್ದರೂ ಶುದ್ಧ ಸಂಘಿಯಾಗಿಯೇ ಉಳಿದವರು ಗೋಪಾಲ ಚೆಟ್ಟಿಯಾರರು.

ರಾಮಜನ್ಮಭೂಮಿ ಮಂದಿರದ ಪ್ರಾಣ ಪ್ರತಿಷ್ಠೆಯಾಗುವ ದಿನದವರೆಗೂ ಅತ್ಯಂತ ಚುರುಕಿನಿಂದ ಓಡಾಡುತ್ತಿದ್ದ ಚೆಟ್ಟಿಯಾರರು ಇದ್ದಕ್ಕಿದ್ದಂತೆ ಕಾಯಿಲೆ ಬಿದ್ದರು. ಮಂಗಳೂರಿನ ಆಸ್ಪತ್ರೆಗೆ ಸೇರಿಸಲಾಯಿತು. ರಾಜ್ಯದ ಮೂಲೆ ಮೂಲೆಗಳಿಂದ ಯಾರ್ಯಾರೋ ಹೋಗಿ ನೋಡಿ ಬಂದರು. ದಿನದಿಂದ ದಿನಕ್ಕೆ ನೆನಪಿನ ಶಕ್ತಿ ಕುಂದುತ್ತಿತ್ತು. ಹೆಂಡತಿ ಮಕ್ಕಳು ಕರೆದರೂ ಉತ್ತರಿಸದಿದ್ದ ಚೆಟ್ಟಿಯಾರರ ದೇಹ ಸ್ವಯಂಸೇವಕರ ಜೈ ಶ್ರೀರಾಂ ಕರೆಗೆ ಸ್ಪಂದಿಸುತ್ತಿತ್ತು! ಮೂರನೆ ದಿನಕ್ಕೆ ದೇಹದಲ್ಲಿ ಉಸಿರಾಟ ಮಾತ್ರ ಇತ್ತು. ಆದರೆ ಬಾಯಿಂದ ಅಪ್ರಜ್ಞಾಪೂರ್ವಕವಾಗಿ ಸಂಘದ ಪ್ರಾರ್ಥನೆಯೂ, ಬೈಠಕುಗಳ ಚರ್ಚೆಗಳೂ ಬರತೊಡಗಿದವು. ನೈನಂ ಛಿಂದತಿ ಶಸ್ತ್ರಾಣಿ... ಇಲ್ಲಿ ನೆನಪಾದರೆ ಆಶ್ಚರ್ಯವೇನಿದೆ? ಅದೇ ದಿನ ಚೆಟ್ಟಿಯಾರರ ಉಸಿರೂ ನಿಂತಿತು. ಮರುದಿನ ಅಂತ್ಯಕ್ರಿಯೆಯೂ ಮುಗಿದುಹೋಯಿತು. ಬಂದ ನೆಂಟರೆಲ್ಲರೂ ಖಾಲಿಯಾದರು.

ಅಪ್ಪನ ಧ್ಯಾನದಲ್ಲಿ ಕುಳಿತ ಮಗ ಕೃಷ್ಣರಾಜರಲ್ಲಿ ತಾನು ನಲ್ವತ್ತೈದು ವರ್ಷಗಳಿಂದಲೂ ನೋಡುತ್ತಿದ್ದ ಅಪ್ಪನ ಚಿತ್ರಣವೊಂದು ಮೂಡುತ್ತಿತ್ತು. ಅದೇ ಬಿಳಿ ಶರ್ಟು, ಪಂಚೆ ಮತ್ತು ಕಪ್ಪು ಬ್ಯಾಗಿನಿಂದ ಮಾತ್ರ ಕಾಣುತ್ತಿದ್ದ ಅಪ್ಪ, ಬ್ಯಾಗು ಎಷ್ಟು ಉಬ್ಬಿದೆ ಎಂಬುದರ ಮೇಲೆ

ಅಪ್ಪನ ಪ್ರವಾಸದ ದಿನವನ್ನು ಅಳೆಯುತ್ತಿದ್ದ ದಿನಗಳು ನೆನಪಾಗುತ್ತಿದ್ದವು.

ಇಂದು ಆ ಬ್ಯಾಗು ಅನಾಥವಾಗಿದೆ, ಇನ್ನದನ್ನು ಹೊರುವವರಿಲ್ಲ, ಅಪ್ಪನ ವ್ಯಕ್ತಿತ್ವದಲ್ಲಿ ಒಂದಾಗಿಹೋದ ಆ ಬ್ಯಾಗನ್ನೊಮ್ಮೆ ನೋಡುವ ಆಸೆ ಮಗ ಕೃಷ್ಣರಾಜರಿಗಾಯಿತು. ಅಂದು ಬ್ಯಾಗಲ್ಲಿ ಬಟ್ಟೆಯಿರಲಿಲ್ಲ. ಬಹುಶ ಇನ್ನು ಈ ಬ್ಯಾಗು ಅಪ್ಪನ ಬಟ್ಟೆಯನ್ನೆಂದಿಗೂ ಹೊರಲಾರದು ಎಂದು ಅವರಿಗನಿಸಿತು. ಅಲ್ಲಿ ಕೆಲವು ಖಾಲಿ ಹಾಳೆಗಳಿದ್ದವು. ಕೆಲವು ಮಡಚಿದ ಚೀಟಿಗಳಿದ್ದವು. ಕಾಸರಗೋಡಿನಿಂದ ಮುಳ್ಳೇರಿಯಾಕ್ಕೆ ಬಂದ ಬಸ್ಸಿನ ಟಿಕೇಟಿತ್ತು. ಯಾವುದೋ ಗ್ರಾಮದ ಹೆಸರಿತ್ತು. ಯಾವುದೋ ದೂರವಾಣಿ ಸಂಖ್ಯೆಗಳಿದ್ದವು. ಗ್ರಾಮವಿಕಾಸದ ಬೌದ್ಧಿಕ್ ಬಿಂದುಗಳಿದ್ದವು. ಅವೆಲ್ಲದರ ನಡುವೆ ಅಂಗೈಯಗಲದ ಲಕೋಟೆಯೊಂದಿತ್ತು. ಕೃಷ್ಣರಾಜರು ಅದನ್ನು ತೆರೆದರು. ಅಲ್ಲಿ ಶಬರಿಮಲೆ ಅಯ್ಯಪ್ಪ ಮತ್ತು ಗುರುವಾಯೂರಪ್ಪನ ಫೋಟೋಗಳಿದ್ದವು. ಅದರ ಮೇಲಿದ್ದ ಮತ್ತೊಂದು ಫೋಟೋವನ್ನು ಕೃಷ್ಣರಾಜ್ ದಿಟ್ಟಿಸಿದರು. ಆ ದೇವರ ಫೋಟೋಗಳ ಜೊತೆ ನ. ಕೃಷ್ಣಪ್ಪನವರ ಹಳೆಯ ಫೋಟೋವನ್ನೂ ಚೆಟ್ಟಿಯಾರರು ತಾವು ಹೋದಲೆಲ್ಲಾ ಹೊತ್ತು ತಿರುಗುತ್ತಿದ್ದರು! ಅಂದರೆ ಕೃಷ್ಣಪ್ಪನವರಿಗೆ ಚೆಟ್ಟಿಯಾರರು ದೇವರ ಸ್ಥಾನವನ್ನು ಕೊಟ್ಟಿದ್ದರು! ಆದರೆ ಕೃಷ್ಣಪ್ಪನವರು ಬದುಕಿದ್ದಾಗ ಎಂದೂ ಚೆಟ್ಟಿಯಾರರು ಕೃಷ್ಣಪ್ಪನವರ ಮುಖಸ್ತುತಿ ಮಾಡಿದ್ದಾಗಲೀ, ಕೃಷ್ಣಪ್ಪನವರನ್ನು ಮೆಚ್ಚಿಸಲು ಪ್ರಯತ್ನ ಪಟ್ಟಿದ್ದಾಗಲೀ ಮಾಡಿರಲಿಲ್ಲ. ಅಷ್ಟಕ್ಕೂ ವರ್ಷಗಟ್ಟಲೆ ಅವರು ಕೃಷ್ಣಪ್ಪನವರೊಡನೆ ಮಾತಾಡುವ ಸಂದರ್ಭವೇ ಬರಲಿಲ್ಲ. ಚೆಟ್ಟಿಯಾರರು ಕೃಷ್ಣಪ್ಪನವರ ಫೋಟೋವನ್ನಿಟ್ಟುಕೊಂಡಿದ್ದಕ್ಕೆ ಇದ್ದಿರಬಹುದಾದ ಮುಖ್ಯ ಕಾರಣಗಳಲ್ಲಿ ಒಂದು ಗ್ರಾಮ ವಿಕಾಸ.

ಗ್ರಾಮ ವಿಕಾಸ ಕೃಷ್ಣಪ್ಪನವರ ಕನಸಿನ ಕೂಸು. ಸ್ವದೇಶಿ ಆರ್ಥಿಕತೆ ಮತ್ತು ಗಾಂಧಿ ಪ್ರಣೀತ ಗ್ರಾಮೋದ್ಯೋಗಗಳ ಆಧಾರದಲ್ಲಿ ಬದಲಾದ ಕಾಲಕ್ಕನುಗುಣವಾಗಿ ಗ್ರಾಮಗಳು ಸ್ವಾವಲಂಬಿಯಾಗಬೇಕೆಂಬ ರೂಪುರೇಶೆಯನ್ನು ನ. ಕೃಷ್ಣಪ್ಪನವರು ಮೂರು ದಶಕಗಳ ಹಿಂದೆಯೇ ತಯಾರಿಸಿದ್ದರು. ಅದರ ಅನುಷ್ಠಾನ ಮಂಗಳೂರು ವಿಭಾಗದಿಂದಲೇ ಆಗಬೇಕೆಂದೂ ಅವರು ಅಪೇಕ್ಷಿಸಿದ್ದರು. ಆಗ ಕೃಷ್ಣಪ್ಪನವರ ಕಣ್ಣಿಗೆ ಬಿದ್ದವರು ಅಂದಿನ ಮಂಗಳೂರು ವಿಭಾಗ ಸೇವಾ ಪ್ರಮುಖರಾಗಿದ್ದ ಇದೇ ಚೆಟ್ಟಿಯಾರರು.

ಕೃಷ್ಣಪ್ಪನವರಿಂದ ದೀಕ್ಷೆ ಪಡೆದವರಂತೆ ಚೆಟ್ಟಿಯಾರರು ಐದು ಜಿಲ್ಲೆಗಳ ಪ್ರತೀ ಗ್ರಾಮಗಳಿಗೂ ಭೇಟಿಕೊಟ್ಟರು. ಆಯ್ದ ಗ್ರಾಮಗಳಲ್ಲಿ ಗ್ರಾಮ ವಿಕಾಸದ ಯೋಜನೆಗಳನ್ನು ಅನುಷ್ಠಾನಗೊಳಿಸಿದರು. ಪರಿಣಾಮ ಜಾತಿ ಕಲಹಗಳಿಂದ ಹೋಳಾಗಿದ್ದ ಗ್ರಾಮಗಳು ಒಂದಾದವು, ವ್ಯಾಜ್ಯದಲ್ಲಿದ್ದ ದೈವಸ್ಥಾನಗಳಲ್ಲಿ ಆಚರಣೆಗಳು ಮತ್ತೆ ನಡೆದವು, ಅಸ್ಪೃಶ್ಯತೆ ನಿವಾರಣೆಯಾಗತೊಡಗಿತು, ಸರ್ವರಿಗೂ ದೇವಸ್ಥಾನ ಪ್ರವೇಶ ಸಾಧ್ಯವಾಯಿತು. ಅಷ್ಟೇ ಅಲ್ಲದೆ ಗ್ರಾಮದ ಉತ್ಸವಗಳ ಜೊತೆಗೆ ಎಲ್ಲಾ ಹಿಂದೂ ಹಬ್ಬಗಳನ್ನು ಸಾಮೂಹಿಕವಾಗಿ ಆಚರಿಸುವ ಪರಂಪರೆ ಹಲವು ಗ್ರಾಮಗಳಲ್ಲಿ ಆರಂಭವಾಯಿತು. ಸರ್ಕಾರಿ ಯೋಜನೆಗಳೇ ಬೆರಗಾಗುವಂತೆ ಗ್ರಾಮವಿಕಾಸದ ಉದಯ ಗ್ರಾಮಗಳು, ಪ್ರಭಾತ್ ಗ್ರಾಮಗಳು ಎದ್ದುನಿಂತವು. ಇವೆಲ್ಲವನ್ನೂ ಮಾಡಿದವರು ಸ್ವಯಂಸೇವಕರು. ಆದರೆ ಅವರೆಲ್ಲರೂ ಈ ಯಶಸ್ಸನ್ನು ತಮ್ಮದಲ್ಲ ಎಂದೇ ಹೇಳಲಾರಂಭಿಸಿದರು. ಚೆಟ್ಟಿಯಾರರೂ ಇವೆಲ್ಲವೂ ಸಾಧ್ಯವಾಗಿದ್ದು ಸ್ವಯಂಸೇವಕರಿಂದ ಎಂದರು. ಹೀಗೆ ಗ್ರಾಮ ವಿಕಾಸದ ಯಶಸ್ಸು, ಅದರ ಕಲ್ಪನೆಯನ್ನು ಬಿತ್ತಿದವರಿಗೇ ಸಲ್ಲಬೇಕೆಂದು ಚೆಟ್ಟಿಯಾರರು ಕೃಷ್ಣಪ್ಪನವರ ಚಿತ್ರವನ್ನು ಸದಾ ಜೊತೆಯಲ್ಲಿಟ್ಟುಕೊಂಡಿದ್ದರೋ ಏನೋ.

ಗೋಪಾಲ ಚೆಟ್ಟಿಯಾರರ ಮೂಲ ತರವಾಡು ನೀಲೇಶ್ವರ. ತಂದೆಯ ಕಾಲದಲ್ಲಿ ಚೆಟ್ಟಿಯಾರರ ಕುಟುಂಬ ಅಂದಿನ ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳಲ್ಲೊಂದೆನಿಸಿಕೊಂಡಿದ್ದ ಪೆರ್ಲಕ್ಕೆ ಬಂತು. ಅಷ್ಟಕ್ಕೂ ಚೆಟ್ಟಿಯಾರ್ ಸಮುದಾಯಕ್ಕೆ ವಲಸೆಯೆಂಬುದೇನೂ ಹೊಸದಲ್ಲ. ಕಾಲಕಾಲಕ್ಕೆ ಚೆಟ್ಟಿಯಾರ್ ಸಮುದಾಯ ಸಮಾಜದ ಆವಶ್ಯಕತೆಗೆ ತಕ್ಕಂತೆ ಪರಿವರ್ತನೆಗೊಳಪಡುತ್ತಾ ಬಂದಿದೆ. ಮಧ್ಯ ಭಾರತದಲ್ಲಿ ಮುಸಲ್ಮಾನರ ಆಕ್ರಮಣ ಹೆಚ್ಚಾದಾಗ ಬ್ರಾಹ್ಮಣರ ಒಂದು ಗುಂಪು ಆಂಧ್ರ ಸೀಮೆಗೆ ಬಂದು ಅನಿವಾರ್ಯವಾಗಿ ಕ್ಷತ್ರಿಯ ವೃತ್ತಿಯನ್ನು ಅವಲಂಬಿಸಬೇಕಾಯಿತು. ವಿಜಯನಗರ ಪತನದವರೆಗೂ ಕ್ಷತ್ರಿಯರಾಗಿಯೇ ಇದ್ದ ಚೆಟ್ಟಿಯಾರರು ಮತ್ತೆ ತಮಿಳು ನೆಲದಲ್ಲಿ ನೆಲೆಸಿ ವೈಶ್ಯ ಧರ್ಮ ಪಾಲಿಸಬೇಕಾಯಿತು. ಮುಂದೆ ಕಾಲದ ನಡೆಯಲ್ಲಿ ಚೆಟ್ಟಿಯಾರರ ಒಂದು ಗುಂಪು ಕೇರಳ, ಕರ್ನಾಟಕದುದ್ದಕ್ಕೂ ಚದುರಿದರು. ಇಂಥ ಹಿನ್ನೆಲೆಯ ಗೋಪಾಲ ಚೆಟ್ಟಿಯಾರರಿಗೆ ಧರ್ಮ ಪಾಲನೆಯ ಪಟ್ಟುಗಳೆಲ್ಲವೂ ರಕ್ತದಲ್ಲೇ ಬಂದಿದ್ದವೆನಿಸುತ್ತದೆ.

ಪೆರ್ಲಕ್ಕೆ ಬಂದ ಚೆಟ್ಟಿಯಾರ ಕುಟುಂಬ ಬಡತನದ ಬದುಕನ್ನೇ ನಡೆಸಿತು. ಅವಲಕ್ಕಿ ಕುಟ್ಟಿ ಮಾರಿದರು. ಬಡತನದಲ್ಲೇ ಓದಿದರು. ಓದಿ ಕೇರಳ ರೆವಿನ್ಯೂ ಇಲಾಖೆಯಲ್ಲಿ ಕೆಲಸಕ್ಕೂ ಸೇರಿದರು. ಸಂಘದ ಸಂಪರ್ಕ ಚೆಟ್ಟಿಯಾರರಲ್ಲಿ ಶಿಸ್ತನ್ನೂ, ಕರ್ತವ್ಯಪಾಲನೆಯಲ್ಲಿ ಕಠೋರತೆಯನ್ನೂ ಮೂಡಿಸಿದವು. ಕೇರಳದ ಅನ್ಯಾನ್ಯ ಭಾಗಗಳಿಗೆ ವರ್ಗವಾದರು. ಕಟ್ಟರ್ ಆರೆಸ್ಸೆಸ್ಸಿಗನೊಬ್ಬ ಕಾಸರಗೋಡಿನ ಮಾಸ್ಕೋ ಎಂದೇ ಹೆಸರಾಗಿದ್ದ ಬಾಡೂರು ಎಂಬಲ್ಲೂ, ಕಾಮ್ರೇಡ್‌ಗಳ ಕುಖ್ಯಾತ ಊರು ಕಣ್ಣೂರು ಜಿಲ್ಲೆಯ ಕೂತುಪರಂಬಿನಲ್ಲೂ ಕೆಲಸ ಮಾಡಿದರು. ವಿಶೇಷವೆಂದರೆ ಅಲ್ಲೂ ಜನಮನ್ನಣೆ ಗಳಿಸಿದರು!

ಬಾಡೂರಿಗೆ ಗ್ರಾಮಾಧಿಕಾರಿಯಾಗಿ ಬಂದಿದ್ದ ಚೆಟ್ಟಿಯಾರರು ಅಲ್ಲಿಂದ ತೆರಳುವಾಗ ರೆವಿನ್ಯೂ ನಿರೀಕ್ಷಕರಾಗಿದ್ದರು. ಆಗ ಬಾಡೂರಿನ ಕಾಮ್ರೇಡ್‌ಗಳು ಚೆಟ್ಟಿಯಾರರನ್ನು ಮೆರವಣಿಗೆ ಮಾಡಿ ಬೀಳ್ಕೊಟ್ಟಿದ್ದರು! ಕೂತುಪರಂಬಿನಲ್ಲೊಮ್ಮೆ ತಾಲೂಕಾಫೀಸಿನ ಎಲ್ಲರೂ ಕಡ್ಡಾಯವಾಗಿ ಕಮ್ಯುನಿಸ್ಟ್ ಪಕ್ಷಕ್ಕೆ ದೇಣಿಗೆ ನೀಡಬೇಕೆಂಬ ಬೆದರಿಕೆಗೆ ಜಗ್ಗದೆ ನಿಂತರು. ಆ ಕಾರಣದಿಂದ ಆಡಳಿತಾರೂಢ ಕಮ್ಯುನಿಸ್ಟ್ ಸರ್ಕಾರ ಚೆಟ್ಟಿಯಾರರನ್ನು ವಿಚಾರಣೆಗೆ ಕರೆಯಿತು. 'ನೀವು ಆರೆಸ್ಸೆಸ್

ಕಾರ್ಯಕರ್ತರಿದ್ದೀರಿ, ಸರ್ಕಾರಿ ನಿಯಮಗಳಿಗೆ ಇದು ವಿರುದ್ಧ' ಎಂದಿತು ಆಡಳಿತ. ಚೆಟ್ಟಿಯಾರರು ದಿಟ್ಟವಾಗಿ, 'ನಾನು ಸರ್ಕಾರಿ ಸಮಯದಲ್ಲಿ ಸರ್ಕಾರದ ಕೆಲಸವನ್ನು ಮಾತ್ರ ಮಾಡುತ್ತೇನೆ. ಉಳಿದ ಸಮಯ ವೈಯಕ್ತಿಕವಾದದ್ದು. ಸರ್ಕಾರ ಅದರಲ್ಲಿ ಮೂಗು ತೂರಿಸುವುದು ಸಲ್ಲ' ಎಂದರು. ಚೆಟ್ಟಿಯಾರರ ನಿಲುವನ್ನು ಇಡೀ ಕಛೇರಿ ಬೆಂಬಲಿಸಿತು. ಸ್ವಯಂಸೇವಕನೊಬ್ಬ ಸಮಾಜದಲ್ಲಿ ತನ್ನನ್ನು ಪ್ರಕಟಪಡಿಸಿಕೊಳ್ಳುವುದು ಹೀಗೆ ಎನ್ನುವುದಕ್ಕೆ ಉದಾಹರಣೆಯೇ ಆದರು!

ಚೆಟ್ಟಿಯಾರರ ಮುಖದಲ್ಲಿ ಸೂಸುತ್ತಿದ್ದ ಸಾತ್ವಿಕತೆಗೆ ಎಂಥವರೂ ಅಂದಾಜು ತಪ್ಪುತ್ತಿದ್ದರು. ಏಕೆಂದರೆ ಅವರು ಮುಖಕ್ಕೆ ಹೊಡೆದಂತೆ ಮಾತನಾಡುತ್ತಿದ್ದರು. ಅವರ ಸ್ನೇಹ, ಆತ್ಮೀಯತೆಯ ಪ್ರಕಟೀಕರಣವೂ ಕಠೋರತೆಯ ಮೂಲಕವೇ. ಹಾಗೆಂದು ಅವರು ಶೀಘ್ರ ಕೋಪಿಷ್ಠರಲ್ಲ, ದೀರ್ಘ ದ್ವೇಷಿಯೂ ಅಲ್ಲ. ಪ್ರವಾದಿಗಳಂತೆ ಪೋಸು ಕೊಟ್ಟು, ಒಳಗಿಂದೊಳಗೇ ಪ್ರಚಾರ ಬಯಸುವವರು, ರಾಜಕೀಯದ ನೆರಳಲ್ಲಿ ಬದುಕಲು ಹವಣಿಸುವವರು ಗೋಪಾಲ ಚೆಟ್ಟಿಯಾರರ ಬದುಕಿನಿಂದ ಕಲಿಯಬೇಕಾದುದು ತುಂಬಾ ಇದೆ. ಇಂಥವರೇ ತುಂಬಿರುವ ಕಾಲದಲ್ಲಿ ಚೆಟ್ಟಿಯಾರರಂಥವರೂ ಬದುಕಿದ್ದರಾ ಎಂದು ಅಚ್ಚರಿಯಾಗುವಂತೆ ಅವರ ಬದುಕಿನ ಪುಟಗಳು ಹೊಳೆಯುತ್ತವೆ.

ಒಮ್ಮೆ ಮಗ ಕೃಷ್ಣರಾಜರು ಕಾಸರಗೋಡಿನ ಪಟ್ಟಣ ಬ್ಯಾಂಕಿನ ಉದ್ಯೋಗಕ್ಕಾಗಿ ಪರೀಕ್ಷೆ ಬರೆದರು. ಸಂದರ್ಶನಕ್ಕೆ ಕರೆಯೂ ಬಂತು. ಆದರೆ ಚೆಟ್ಟಿಯಾರರು ಮಗನನ್ನು ಕರೆದು 'ನಿನ್ನ ಸಂದರ್ಶನ ನೆಪಮಾತ್ರಕ್ಕೆ ನಡೆಯುತ್ತದೆ, ನನ್ನ ಮಗನೆಂಬ ಕಾರಣಕ್ಕೆ ನಿನಗೆ ಕೆಲಸವೂ ಸಿಗುತ್ತದೆ. ಆದರೆ ಸಂದರ್ಶನಕ್ಕೆ ನೀನು ಹಾಜರಾಗಬಾರದು' ಎಂದು ತಾಕೀತು ಮಾಡಿದರು. ಆ ಸಮಯದಲ್ಲಿ ಚೆಟ್ಟಿಯಾರರ ಮನೆ ಆರ್ಥಿಕವಾಗಿ ಬಳಲಿತ್ತು. ತುಂಬು ಕುಟುಂಬವನ್ನು ಸಲಹುವುದರಲ್ಲಿ ಚೆಟ್ಟಿಯಾರರು ಹೈರಾಣಾಗಿ ಹೋಗಿದ್ದರು. ಆದರೂ ಧರ್ಮವನ್ನು ಬಿಡಲಿಲ್ಲ.

ಸಂಸಾರಿಯಾದರೂ ಪ್ರಚಾರಕರಂತೆ ಬದುಕಿದರು. ಪ್ರಚಾರಕರಿಗೂ ಪ್ರೇರಣೆಯಾದರು. ಪುಟ್ಟಪ್ಪಯ್ಯ, ಕಾರಂತರಂಥ ಋಷಿಸದೃಶ ವ್ಯಕ್ತಿತ್ವ, ಕಜಂಪಾಡಿ ಸುಬ್ರಹ್ಮಣ್ಯ ಭಟ್ಟರಂಥ ತಪಸ್ವಿಗಳ ಪ್ರೇರಣೆಗಳ ಪಾಕದಿಂದ ರೂಪುಗೊಳ್ಳುವ ವ್ಯಕ್ತಿತ್ವ ಅದೆಂಥಾ ಶ್ರೇಷ್ಠ ಮಟ್ಟದ್ದಾಗಿರಬಹುದೋ ಅಂಥ ಶ್ರೇಷ್ಠತೆ ಗೋಪಾಲ ಚೆಟ್ಟಿಯಾರರ ವ್ಯಕ್ತಿತ್ವದಲ್ಲಿತ್ತು. ಸೃಷ್ಟಿಯಲ್ಲಿ ಸಂಘವೊಂದನ್ನು ಬಿಟ್ಟು ಬೇರೇನೂ ಅಸ್ತಿತ್ವದಲ್ಲಿಲ್ಲ ಎನ್ನುವಂತೆ ಅವರು ಸದಾ ಸಂಘಧ್ಯಾನದಲ್ಲೇ ಬದುಕಿದರು. ಹಾಗೆ ಧ್ಯಾನಿಸುತ್ತಲೇ ಸಮಾಧಿಗೇರಿಯೂಬಿಟ್ಟರು. ವಾನಪ್ರಸ್ಥಿ ಕಾರ್ಯಕರ್ತನ ಆದರ್ಶ ಮಾದರಿಯೊಂದನ್ನು ಸ್ವಯಂಸೇವಕರಿಗೆ ಬಿಟ್ಟು ಚೆಟ್ಟಿಯಾರರು ಹೊರಟು ಹೋದರು.

# ಸನಾತನ ಧರ್ಮ ಮತ್ತು ನಮ್ಮ ಸಂಸ್ಕೃತಿ




ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಜಗನ್ನಾಥ ಭವನದ ಸಿಬ್ಬಂದಿ ವರ್ಗದವರಿಗೆ ಜನವರಿ ತಿಂಗಳ ಕೊನೆಯ ಮಂಗಳವಾರದಂದು ಆಯೋಜಿಸಿದ್ದ ವೈಚಾರಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಬೆಂಗಳೂರಿನ ಎಂಎಲ್ಎ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಗಣಪತಿ ಹೆಗಡೆ ರವರು **'ಸನಾತನ ಧರ್ಮ ಮತ್ತು ನಮ್ಮ ಸಂಸ್ಕೃತಿ'** ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು.

ಸಂಸ್ಕಾರ ಎಂಬುದು ಮನುಷ್ಯನಲ್ಲಿ ಮಾತ್ರ ಕಾಣಬಹುದಾದ ಒಂದು ನಡೆ. ಇದನ್ನು ನಾವು ಇನ್ನಾವುದೇ ಪ್ರಾಣಿಗಳಲ್ಲಿ ನೋಡಲು ಸಾಧ್ಯವಿಲ್ಲ. ಮನುಷ್ಯನ ಹುಟ್ಟಿನಿಂದಲೇ ಸಂಸ್ಕಾರ ಎಂಬುದು ಕರ್ತವ್ಯದ ರೂಪದಲ್ಲಿ ಕರಗತವಾಗಿರುತ್ತದೆ. ಆತ್ಮಾವಲೋಕನ ಮಾಡಿಕೊಳ್ಳುವ ಸಂಸ್ಕಾರವುಳ್ಳ ಮನುಷ್ಯನಿಗೆ ಯಶಸ್ಸೆಂಬುದು ಕಟ್ಟಿಟ್ಟ ಬುತ್ತಿಯಾಗಿರುತ್ತದೆ. ಮನುಷ್ಯ ತಾನು ಪ್ರತಿ ದಿನ ಬೆಳಿಗ್ಗೆ ತಾನು ಇಂದು ಏನನ್ನು ಮಾಡಿಕೊಳ್ಳಬೇಕು ಎಂಬುದರ ಕುರಿತು ಸ್ವಯಂ ಅವಲೋಕನ ಮಾಡಿಕೊಳ್ಳಬೇಕು, ಹಾಗೆಯೇ ರಾತ್ರಿಯ ವೇಳೆ ಇಂದು ನಾನು ಏನನ್ನು ಮಾಡಿದೆ ಎಂಬುದನ್ನು ಅವಲೋಕಿಸಿಕೊಳ್ಳಬೇಕು. ಇಂತಹ ಅವಲೋಕನ ಸಂಸ್ಕಾರವುಳ್ಳ ವ್ಯಕ್ತಿಯು ಸಮಾಜದಲ್ಲಿ ಒಬ್ಬ ಶ್ರೇಷ್ಠ ವ್ಯಕ್ತಿಯಾಗಿ ಹೊರಹೊಮ್ಮುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯ ಆತ್ಮಾವಲೋಕನದ ಸಂಸ್ಕಾರದ ನಡೆಯು ಉತ್ತಮ ಸಮಾಜವನ್ನು ರೂಪಿಸುವುದಕ್ಕೆ ದಾರಿದೀಪವಾಗುತ್ತದೆ. ಸಮಾಜವು ನಮಗೇನು ಮಾಡಿದೆ ಎಂಬುದಕ್ಕಿಂತ ನಾವು ಸಮಾಜಕ್ಕೆ ಏನು ಮಾಡಿದ್ದೇವೆ ಎಂಬ ಚಿಂತನೆಯೊಂದಿಗೆ ಪ್ರತಿಯೊಬ್ಬ ಮನುಷ್ಯನು ಬದುಕಬೇಕು. ಧರ್ಮ ಎಂದರೆ ಕರ್ತವ್ಯ ಎಂದರ್ಥ. ಮನುಷ್ಯ ಹುಟ್ಟಿನಿಂದ ಸಾಯುವವರೆಗೂ ಅನೇಕ ಧರ್ಮಗಳನ್ನು ಪಾಲಿಸುತ್ತಾನೆ. ಉದಾ: ತಾಯಿ ಮಾತೃಧರ್ಮದ ಮೂಲಕ ಮಕ್ಕಳ ಪಾಲನೆ, ತಂದೆ ಪಿತೃ ಧರ್ಮದ ಮೂಲಕ ಮಕ್ಕಳಿಗೆ ಸಮಾಜದಲ್ಲಿ ವ್ಯಕ್ತಿತ್ವ ರೂಪಿಸುವಲ್ಲಿ ಸಹಾಯಕರಾಗುತ್ತಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು, ಸಹ-ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ವಿಶ್ವನಾಥ ಅಣಜಿ, ಮಾಹಿತಿ ವಿಭಾಗದ ಸದಸ್ಯರು ಹಾಗೂ ಜಗನ್ನಾಥ ಭವನದ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

24 ಹಿರಿಯ ಕಾರ್ಯಕರ್ತರ ಪರಿಚಯಮಾಲೆ

# ಬೆಳ್ತಂಗಡಿ ಬಿಜೆಪಿಯ ಹಿರಿಯ ಮುತ್ಸದ್ದಿ ನೇಮಿರಾಜ ಶೆಟ್ಟಿ





ಯು.ಟಿ. ನಂದಕುಮಾರ್
ಮಾಜಿ ಮಂಡಲ ಕಾರ್ಯದರ್ಶಿ, ಬೆಳ್ತಂಗಡಿ

ಬದುಕು ಲೇವಾದೇವಿಯಲ್ಲ, ಅದು ಕಟ್ಟಿಕೊಳ್ಳುವಂತದ್ದು. ಈ ಮಾತು ರಾಷ್ಟ್ರ ನಿರ್ಮಾಣದ ಮಹತ್ವದ ಗುರಿಯೊಂದಿಗೆ ಸ್ಥಾಪಿಸಲ್ಪಟ್ಟ ಭಾರತೀಯ ಜನಸಂಘ - ಬಿಜೆಪಿ ಪರಿವಾರದ ಮುಖಂಡರಾಗಿ, ವೃತ್ತಿ ಗೌರವವನ್ನು ಎತ್ತಿ ಹಿಡಿದು ನ್ಯಾಯವಾದಿಗಳಾಗಿಯೂ ಸರಿ ಸುಮಾರು ಐದೂವರೆಯಿಂದ ಆರು ದಶಕಗಳ ಕಾಲ ನಿಸ್ವಾರ್ಥ ಸೇವೆ ಸಲ್ಲಿಸಿ, ಸಾರ್ಥಕ ಬದುಕಿನೊಂದಿಗೆ 92ನೇ ವಯಸ್ಸಿನಲ್ಲಿ ದೈವಾದೀನರಾದ ನೇಮಿರಾಜ ಶೆಟ್ಟಿಯವರಿಗೆ ಅನ್ವಯಿಸುತ್ತದೆ.

ಅಡೆಂಜ ತಿಮ್ಮಯ್ಯ ಅಂದರೆ ಮತ್ತು ನಡಿಬೆಟ್ಟುಗುತ್ತು ಶ್ರೀದೇವಿ ಅಮ್ಮ ದಂಪತಿಗಳ ಹಿರಿಯ ಪುತ್ರರಾಗಿ ಜೂನ್1, 1932ರಲ್ಲಿ ಜನಿಸಿದ ನೇಮಿರಾಜ ಶೆಟ್ಟರು ಪ್ರಾಥಮಿಕ ಶಾಲೆಯಲ್ಲಿ ಕಲಿತ ಶಿಕ್ಷಣದೊಂದಿಗೆ ಅರ್ಹತದಾನ ಸ್ವಾಮಿಜಿಯವರ ಜೊತೆಗೆ ಕಳೆದ ಸಮಯ ಅವರ ಮುಂದಿನ ಬದುಕಿಗೆ ಆಧ್ಯಾತ್ಮಿಕ ಹಾಗೂ ಪ್ರಾಪಂಚಿಕ ಜ್ಞಾನಾರ್ಜನೆಗೆ ಸಹಕಾರಿಯಾಯಿತು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎಸ್ಸಿ ವ್ಯಾಸಂಗ ಹಾಗೂ ಶಾರದಾ ವಿಲಾಸ್ ಕಾಲೇಜಿನಲ್ಲಿ ಕಾನೂನು ಪದವಿ ಪಡೆದ ಬಳಿಕ ಗಣಿತ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, 1964ರಿಂದ ಬೆಳ್ತಂಗಡಿಯಲ್ಲಿ ಕಕ್ಷಿದಾರರ ಭಾವನೆಗಳಿಗೆ ಸ್ಪಂದಿಸುತ್ತಾ ಗೌರವಾನ್ವಿತ ನ್ಯಾಯವಾದಿಯಾಗಿ ಸೇವೆ ಸಲ್ಲಿಸಿದ ಹಿರಿಮೆ ನೇಮಿರಾಜ ಶೆಟ್ಟರದ್ದು.

ವೃತ್ತಿಯಲ್ಲಿ ನ್ಯಾಯವಾದಿಯಾದರೂ, ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಪ್ರೇರಿತರಾಗಿ ಅಪ್ಪಟ ರಾಷ್ಟ್ರವಾದಿಯಾಗಿ ಗುರುತಿಸಿಕೊಂಡವರು. ಪಂ. ದೀನದಯಾಳ ಉಪಾಧ್ಯಾಯರ ಏಕಾತ್ಮತಾ ಮಾನವತಾವಾದದಿಂದ ಪ್ರೇರಿತರಾಗಿ ಭಾರತೀಯ ಜನಸಂಘದೆಡೆಗೆ ಆಕರ್ಷಿತರಾದರು. 1964 ರಿಂದ 1967ರವರೆಗೆ ಬೆಳ್ತಂಗಡಿ ತಾಲ್ಲೂಕು ಜನಸಂಘದ ಕಾರ್ಯದರ್ಶಿಗಳಾಗಿ ಬಳಿಕ ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಭಾರತೀಯ ಜನಸಂಘ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟ ಮಾಡುತ್ತಿದ್ದ ದಿನಗಳವು. 1972ರಲ್ಲಿ ಅಂದಿನ ಮೈಸೂರು ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆಯಾದಾಗ ಬೆಳ್ತಂಗಡಿಯಲ್ಲಿ ಜನಸಂಘದ ಅಸ್ತಿತ್ವ ಉಳಿಸಲು ಉರಿಮಜಲು ರಾಮಭಟ್ಟರ ಸೂಚನೆ ಮೇರೆಗೆ ಬೆಳ್ತಂಗಡಿಯಿಂದ ಜನಸಂಘದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ''ಜನಸಂಘದ ಧ್ಯೇಯ ಧೋರಣೆಗಳ ಯಶಸ್ಸಿನಲ್ಲಿ ಪಾಲ್ಗೊಂಡು ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ನನಗೆ ಅವಕಾಶ ನೀಡಿ'' ಎಂದು ಪ್ರಾರ್ಥಿಸಿಯೇ ಅವರು ಮತ ಯಾಚನೆ ನಡೆಸಿದ್ದರು. ಆ ವಿನಂತಿ ಪತ್ರದ ಅಂಚೆಕಾರ್ಡ್ ಕೆಲವು ದಿನಗಳ ಹಿಂದೆ ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿತ್ತು.

1975ರಲ್ಲಿ ದೇಶದ ಪ್ರಜಾಪ್ರಭುತ್ವದ ಧ್ವನಿಯನ್ನು ಹತ್ತಿಕ್ಕಲು ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ತುರ್ತುಪರಿಸ್ಥಿತಿ ಹೇರಿದಾಗ, ಬೆಳ್ತಂಗಡಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ವೀರಸಿಂಹ ನಾಯಕರೊಂದಿಗೆ ಸಾಥ್ ನೀಡಿದರು. ವೀರಸಿಂಹ ನಾಯಕರು ಮೀಸಾ ಅಡಿಯಲ್ಲಿ ಬಂಧಿತರಾದರು, ನೇಮಿರಾಜ ಶೆಟ್ಟರು ಹತ್ತು ತಿಂಗಳು ಸೆರೆಮನೆ ವಾಸ ಅನುಭವಿಸಿದರು.

ನೇಮಿರಾಜ ಶೆಟ್ಟರು ಯಾವುದೇ ಸ್ಥಾನಮಾನದ ಆಸೆ ಹೊಂದಿರಲಿಲ್ಲ. ಚುನಾವಣೆಗಳಲ್ಲಿ ಪಕ್ಷದ ಅಸ್ತಿತ್ವಕ್ಕಾಗಿ 1972ರಲ್ಲಿ ಸ್ಪರ್ಧಿಸಿದರೇ ವಿನಃ ಮತ್ತೆಂದೂ ಅವರು ಚುನಾವಣೆಗೆ ಸ್ಪರ್ಧಿಸಲಿಲ್ಲ. 1980ರಲ್ಲಿ ಭಾರತೀಯ ಜನತಾ ಪಾರ್ಟಿ ಅಸ್ತಿತ್ವಕ್ಕೆ ಬಂದಾಗ ಬೆಳ್ತಂಗಡಿ ತಾಲ್ಲೂಕಿನ ಪ್ರಥಮ ಅಧ್ಯಕರ್ಶರು ನೇಮಿರಾಜ ಶೆಟ್ಟರೇ ಆಗಿದ್ದರು. 1983ರಲ್ಲಿ ಬೆಳ್ತಂಗಡಿಯಲ್ಲಿ ಅವರ ನಾಯಕತ್ವದ ಚುನಾವಣೆಯಲ್ಲಿ ಬೆಳ್ತಂಗಡಿ ಪ್ರಥಮವಾಗಿ ಬಿಜೆಪಿ ಶಾಸಕರನ್ನು ಕಾಣುತ್ತದೆ. 1985ರ ಮಧ್ಯಾವದಿ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿ ಕೇವಲ 2 ಸ್ಥಾನಕ್ಕೆ ಸೀಮಿತವಾದಾಗ, ಇದೇ ನೇಮಿರಾಜ ಶೆಟ್ಟರ ಸಾರಥ್ಯದಲ್ಲಿ ಬಿಜೆಪಿ ಬೆಳ್ತಂಗಡಿಯಲ್ಲಿ ಗೆಲುವಿನ ನಗಾರಿ ಬೀರಿತ್ತು.

ಯುವಕರು ರಾಜಕೀಯಕ್ಕೆ ಬರಬೇಕು, ನಾಯಕತ್ವ ವಹಿಸಿಕೊಳ್ಳಬೇಕೆಂಬ ಸದಾಶಯದಿಂದ 1990ರ ದಶಕದಲ್ಲಿ ತನ್ನ ವಕೀಲ ಸಹದ್ಯೋಗಿ ಪ್ರತಾಪ ಸಿಂಹ ನಾಯಕ್ ಮತ್ತು ತಮ್ಮ ಕಚೇರಿಯ ಪ್ರಸಾದ್ ಕುಮಾರ್‌ರಿಗೆ ತಾಲೂಕಿನ ನಾಯಕತ್ವ ನೀಡಿ ಪ್ರೋತ್ಸಾಹಿಸಿದರು. ಅವರು ಬೆಂಬಲಿಸಿದ ಈ ಜೋಡಿ ಮುಂದೆ ಬೆಳ್ತಂಗಡಿಯ ಅಡ್ವಾಣಿ - ವಾಜಪೇಯಿ ಜೋಡಿ ಎಂದೇ ಜನಪ್ರಿಯವಾಯಿತು. ಇವರು ಹಾಕಿದ ಅಡಿಪಾಯ, ಶ್ರಮ, ಬೆವರಿನ ಫಸಲು ಇಂದು ಬೆಳ್ತಂಗಡಿಯ ಎಲ್ಲಾ ಮತಗಟ್ಟೆಗಳಲ್ಲೂ ಬಿಜೆಪಿ ಶಕ್ತಿಶಾಲಿಯಾಗಿ ರೂಪುಗೊಳ್ಳಲು ಸಹಕಾರಿಯಾಗಿದೆ.

# 'ಮಾಸದ ಮಾಧುರ್ಯ' 82ನೇ ಕಾರ್ಯಕ್ರಮದಲ್ಲಿ ಮೈಸೂರು ಶ್ರೀ ರಾಮಚಂದ್ರಾಚಾರ್ ಅವರ ದಾಸಾಮೃತ





ಮಾಸದ ಮಾಧುರ್ಯದ 82ನೇ ಕಾರ್ಯಕ್ರಮ ಅಯೋಧ್ಯೆಯಲ್ಲಿ ಪ್ರಾಣಪ್ರತಿಷ್ಠಾಪನೆಗೊಂಡ ಬಾಲರಾಮನನ್ನು ಅತ್ಯಂತ ಭಕ್ತಿಯಿಂದ ಬರಮಾಡಿಕೊಂಡು ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಪೂಜಿಸಿದ; ದಾಸವಾಣಿಯಿಂದ ಸುಪ್ರಸಿದ್ಧರಾದ ಶ್ರೀ ಮೈಸೂರು ರಾಮಚಂದ್ರಚಾರ್ ಅವರ 'ದಾಸಾಮೃತ'ದ ಸವಿ ಕಿಕ್ಕಿರಿದು ತುಂಬಿದ್ದ ಮಂಥನ ಸಭಾಂಗಣ ಎರಡೂವರೆ ಗಂಟೆಗಳ ಕಾಲ ಭಾವಪರವಶವಾಗಿದ್ದು ದಾಸವಾಣಿಗೆ ಹಾಗೆಯೇ ಶ್ರೀರಾಮಚಂದ್ರಾಚಾರ್ ಅವರ ಕಂಠಸಿರಿಗೆ ಒಲಿದಿದ್ದರ ಪ್ರತ್ಯಕ್ಷ ದರ್ಶನಕ್ಕೆ ಸಾಕ್ಷಿಯಾಯಿತು.

ದಿ. 04.02.2024ರ ಭಾನುವಾರದಂದು ಜಗನ್ನಾಥ ಬಳಗದಿಂದ ಆಯೋಜಿಸಲ್ಪಟ್ಟ 'ಮಾಸದ ಮಾಧುರ್ಯ' ಕಾರ್ಯಕ್ರಮದಲ್ಲಿ ಶ್ರೀ ಮೈಸೂರು ರಾಮಚಂದ್ರಾಚಾರ್ ಹಾಗೂ ಅವರ ಶಿಷ್ಯರಿಂದ ಸಾಯಂಕಾಲ 5.30ಕ್ಕೆ ಆರಂಭಗೊಂಡ ದಾಸ ಪದ್ಯಗಳು, ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿಗಳು, ಗಣಪತಿ ಸ್ತುತಿ, ಶಿವನ ಕುರಿತಾದ, ಶಿವಪಾರ್ವತಿ, ಶ್ರೀಕೃಷ್ಣ, ಷಣ್ಮುಖ, ದುರ್ಗಾ, ಶ್ರೀರಾಮಚಂದ್ರ, ದುಷ್ಟಶಕ್ತಿಯ ಮರ್ಧನೆ, ಶಿಷ್ಟ ಸಂಸ್ಕೃತಿಯ ಪ್ರಸಾರ, ಹನುಮಂತನ ಭಕ್ತಿ, ಮಾತೆ ಸೀತೆಯ ಆದರ್ಶ, ಲಕ್ಷ್ಮಣನ ಕರ್ತವ್ಯನಿಷ್ಠೆ ಹೀಗೆ ಪ್ರತಿಯೊಂದು ದಾಸ ಪದ್ಯಗಳು ಆಗಮಿಸಿದ್ದ ಕಲಾಭಿಮಾನಿಗಳು ಎರಡೂವರೆ ಗಂಟೆಗೂ ಹೆಚ್ಚು ಸಮಯ ಭಕ್ತಿ-ಭಾವದಲ್ಲಿ ಪರವಶರಾಗಿ ತಲೆದೂಗುತ್ತಿದ್ದ ದೃಶ್ಯ ಕನ್ನಡ ಕಾವ್ಯಕ್ಕೆ, ಸಾಹಿತ್ಯಕ್ಕೆ, ಕನ್ನಡದ ಶ್ರೇಷ್ಠ ವಿದ್ವತ್ ಪರಂಪರೆಗೆ ಹಿಡಿದ ಕನ್ನಡಿಯಾಗಿತ್ತು.

ಜಗನ್ನಾಥ ಬಳಗದ ಇಂಥಹ ಒಂದು ಅತ್ಯದ್ಭುತ ಕಾರ್ಯಕ್ರಮಕ್ಕೆ ಬೆನ್ನೆಲುಬಾಗಿ ನಿಂತವರು ಬಿಜೆಪಿ ರಾಜ್ಯ ಕಾರ್ಯಾಲಯದ ಕೋಶಾಧ್ಯಕ್ಷರಾದ ಶ್ರೀ ಸುಬ್ಬ ನರಸಿಂಹರವರು.



ಶ್ರೀ ಸುಬ್ಬನರಸಿಂಹ ರವರು ಶ್ರೀ ರಾಮಚಂದ್ರಾಚಾರ್ ಅವನ್ನು ಭೇಟಿ ಮಾಡಿ ಕಾರ್ಯಕ್ರಮದ ಸಮಯ ನಿಗದಿ ಮಾಡುವುದರಿಂದ ಆರಂಭಗೊಂಡು ಕಾರ್ಯಕ್ರಮ ಮುಗಿಯುವವರೆಗೂ ಅತ್ಯಂತ ಸಂಭ್ರಮದಿಂದ ಪಾಲ್ಗೊಂಡಿದ್ದು ಬಹಳ ಸಂತೋಷಕರ ವಿಷಯ. ಅಂದಿನ ಕಾರ್ಯಕ್ರಮಕ್ಕೆ 'ತಾವೇ ಮುಖ್ಯ ಅತಿಥಿಯಾಗಿ ಆಗಮಿಸಬೇಕು' ಎಂದು ಕೇಳಿದಾಗ ಅವರು 'ಕಾರ್ಯಕ್ರಮ ಚೆನ್ನಾಗಿ ಆಗಲು ಏನುಬೇಕೋ ಅವೆಲ್ಲವನ್ನು ನಾನು ಮಾಡುತ್ತೇನೆ, ಆದರೆ ಮುಖ್ಯ ಅತಿಥಿ ಬೇಡ' ಎಂದು ಹೇಳಿದರು. ಈ ಕಾರ್ಯಕ್ರಮ ನಮ್ಮದು ಅದಕ್ಕೆ ನೀವೇ ಮುಖ್ಯ ಅತಿಥಿಯಾಗಬೇಕು ಎಂದು ಒತ್ತಾಯಿಸಿದಾಗ ಒಪ್ಪಿಕೊಂಡಿದ್ದು ಜಗನ್ನಾಥ ಬಳಗದ ಸದಸ್ಯರಿಗೆ ಆನಂದವಾಯಿತು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಂದೀಶ್ ರೆಡ್ಡಿ, ಶ್ರೀ ಪಿ. ರಾಜೀವ್, ರಾಜ್ಯ ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು, ಲೆಕ್ಕ ಪತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಮೂಡಲಗಿರಿ ಹಾಗೂ ಜಗನ್ನಾಥ ಬಳಗದ ಸಂಚಾಲಕರಾದ ಶ್ರೀ ದತ್ತಗುರು ಹೆಗಡೆಯವರು ಉಪಸ್ಥಿತರಿದ್ದರು.

## 'ಮನ್ ಕಿ ಬಾತ್' 109



# ಜನರನ್ನು ಒಗ್ಗೂಡಿಸಿದ ಬಾಲರಾಮ

ಅಯೋಧ್ಯೆಯ ರಾಮಮಂದಿರದಲ್ಲಿ ನಡೆದ ಶ್ರೀರಾಮನ ಪ್ರಾಣಪ್ರತಿಷ್ಠೆ ಕಾರ್ಯಕ್ರಮ ಕೋಟ್ಯಂತರ ಜನರನ್ನು ಒಟ್ಟುಗೂಡಿಸಿತು ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ 'ಮನ್ ಕಿ ಬಾತ್'ನಲ್ಲಿ ಹೇಳಿದ್ದಾರೆ. ಈ ಕಾರ್ಯಕ್ರಮದ ಸಮಯದಲ್ಲಿ ದೇಶದ ಸಾಮೂಹಿಕ ಶಕ್ತಿ ಪ್ರತಿಫಲಿಸಿತು ಎಂದು ಅವರು ಪ್ರತಿಪಾದಿಸಿದರು.

ಈ ವರ್ಷದ ಮೊದಲ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ದೇಶದ ಜನರನ್ನುದ್ದೇಶಿಸಿ ಮಾತನಾಡಿದ ಅವರು, ಜನವರಿ 22ರಂದು ಅಯೋಧ್ಯೆಯಲ್ಲಿ ನಾನು 'ದೇವ್ ಟು ದೇಶ್ ಮತ್ತು ರಾಮ್ ಟು ರಾಷ್ಟ್ರ' ಎಂದು ಹೇಳಿದ್ದೆ. ಅಯೋಧ್ಯೆಯಲ್ಲಿ ನಡೆದ ಪ್ರತಿಷ್ಠಾಪನೆ ಸಮಾರಂಭ ದೇಶದ ಕೋಟ್ಯಂತರ ಜನರನ್ನು ಒಗ್ಗೂಡಿಸಿದೆ. ಪ್ರತಿಯೊಬ್ಬರ ಭಾವನೆ ಒಂದೇ ಆಗಿತ್ತು, ಪ್ರತಿಯೊಬ್ಬರ ಭಕ್ತಿ ಎಲ್ಲರ ಮಾತಿನಲ್ಲೂ ರಾಮನಿದ್ದ, ಎಲ್ಲರ ಹೃದಯದಲ್ಲೂ ರಾಮನಿದ್ದಾನೆ ಎಂದರು.

ಈ ಶುಭ ಸಮಯದಲ್ಲಿ ಅನೇಕರು ರಾಮ ಭಜನೆಗಳನ್ನು ಮಾಡಿ, ಅವನ್ನು ರಾಮನಿಗೆ ಅರ್ಪಿಸಿದರು. ಜನವರಿ 22ರ ಸಂಜೆ ಇಡೀ ದೇಶ ರಾಮ ಜ್ಯೋತಿಯನ್ನು ಬೆಳಗಿಸಿ ದೀಪಾವಳಿ ಆಚರಿಸಿತು ಎಂದು ಅವರು ನೆನಪಿಸಿಕೊಂಡರು.

### ಜನರ ಪದವಾಗಿ ಮಾರ್ಪಾಟು

ಇತ್ತೀಚೆಗೆ ಪದ್ಮ ಪ್ರಶಸ್ತಿಗಳಿಂದ ಗೌರವಿಸಲ್ಪಟ್ಟ ಅನೇಕರು ಸಮಾಜದಲ್ಲಿ ತಳಮಟ್ಟದಲ್ಲಿ ಕೆಲಸ ಮಾಡಿದವರು ಮತ್ತು ದೊಡ್ಡ ಬದಲಾವಣೆ ತರಲು ಪ್ರಚಾರದಿಂದ ದೂರವಿದ್ದಾರೆ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದರು. ಕಳೆದ ದಶಕದಲ್ಲಿ ಪದ್ಮ ಪ್ರಶಸ್ತಿಗಳ ವ್ಯವಸ್ಥೆ ಸಂಪೂರ್ಣ ಬದಲಾಗಿದ್ದು, ಈಗ ಅದು ಜನರ ಪದ್ಮವಾಗಿ ಮಾರ್ಪಟ್ಟಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ ಎಂದು ಹೇಳಿದರು.

## ಪರೀಕ್ಷಾ ಪೇ ಚರ್ಚಾ 77

### ಪ್ರಧಾನಿ ಶ್ರೀ ನರೇಂದ್ರ ಮೋದಿ ಅಭಿಮತ




**ಸ್ಪರ್ಧೆ ನಿಮ್ಮೊಂದಿಗಿರಲಿ :** ವಿದ್ಯಾರ್ಥಿಗಳು ತಮ್ಮೊಂದಿಗೆ ಸ್ಪರ್ಧಿಸಬೇಕು ಮತ್ತು ಇತರರೊಂದಿಗೆ ಸ್ಪರ್ಧಿಸಬಾರದು ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಸಲಹೆ ನೀಡಿದರು. ಅಂಕಕ್ಕೆ ತಕ್ಕಂತೆ ತಮ್ಮ ಪರಿಶ್ರಮವಿಲ್ಲವೆಂದು ಕೆಲವೊಮ್ಮೆ ಮಕ್ಕಳು ತಮ್ಮ ಮೇಲೆ ಒತ್ತಡ ಹೇರಿಕೊಳ್ಳುತ್ತಾರೆ, ಪರೀಕ್ಷೆಗೆ ತಯಾರಿ ನಡೆಸುವ ಸಮಯದಲ್ಲಿ ಸಣ್ಣ ಗುರಿಗಳನ್ನಿಟ್ಟುಕೊಂಡು ನಂತರ ಕ್ರಮೇಣವಾಗಿ ಕಾರ್ಯಕ್ಷಮತೆ ಸುಧಾರಿಸಿಕೊಳ್ಳಬೇಕು ಎಂದು ಹೇಳಿದರು.

**ವಿಸಿಟಿಂಗ್ ಕಾರ್ಡ್ ಆಗದಿರಲಿ:** ಮಕ್ಕಳ ಅಂಕಪಟ್ಟಿಯನ್ನು ವಿಸಿಟಿಂಗ್ ಕಾರ್ಡ್‌ನಂತೆ ಪರಿಗಣಿಸಬಾರದೆಂದು ಪ್ರಧಾನಿ ಶ್ರೀ ಮೋದಿ ಪೋಷಕರಿಗೆ ಸಲಹೆ ನೀಡಿದ್ದಾರೆ. ಜೀವನದಲ್ಲಿ ಹೆಚ್ಚು ಯಶಸ್ವಿಯಾಗದ ಪೋಷಕರು, ಮಕ್ಕಳ ಅಂಕಪಟ್ಟಿಯನ್ನೇ ತಮ್ಮ ವಿಸಿಟಿಂಗ್ ಕಾರ್ಡ್‌ನಂತೆ ಪರಿಗಣಿಸುತ್ತಾರೆ. ಆದರೆ ಇದು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಉತ್ತಮವಲ್ಲ, ಅದೇ ರೀತಿ ನಿಮ್ಮ ಮಕ್ಕಳನ್ನು ಪರಸ್ಪರರೊಂದಿಗೆ ಹೋಲಿಸುವುದೂ ಮಗುವಿನ ಭವಿಷ್ಯಕ್ಕೆ ಹಾನಿಕಾರಕವಾಗಿ ಪರಿಣಮಿಸಬಲ್ಲದು ಎಂದು ಪ್ರಧಾನಿ ಶ್ರೀ ಮೋದಿ ಹೇಳಿದರು.

**ವಿದ್ಯಾರ್ಥಿಗಳೊಂದಿಗೆ ಉತ್ತಮ ಬಾಂಧವ್ಯ:** ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರಬೇಕು. ಈ ಬಾಂಧವ್ಯವೇ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ಅಡಿಪಾಯವಾಗುತ್ತದೆ. ಶಿಕ್ಷಕರು ವರ್ಷದ ಮೊದಲ ದಿನದಿಂದ ತಮ್ಮ ವಿದ್ಯಾರ್ಥಿಗಳೊಂದಿಗೆ ಸಂಬಂಧ ನಿರ್ಮಿಸಲು ಪ್ರಾರಂಭಿಸಿದರೆ, ಪರೀಕ್ಷೆಗಳ ಸಮಯದಲ್ಲಿ ವಿದ್ಯಾರ್ಥಿಗಳು ಉದ್ವೇಗಕ್ಕೆ ಒಳಗಾಗುವ ಪ್ರಶ್ನೆಯೇ ಇರುವುದಿಲ್ಲ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದರು. ಶಿಕ್ಷಕರು ಪಠ್ಯಕ್ರಮವಲ್ಲದೆ ಇತರೆ ವಿಷಯಗಳನ್ನು ಚರ್ಚಿಸುವುದರಿಂದ ವಿದ್ಯಾರ್ಥಿಗಳೊಂದಿಗೆ ಉತ್ತಮ ಸಂಪರ್ಕ ಸಾಧಿಸಬಹುದು ಎಂದು ಪ್ರಧಾನಿ ಶ್ರೀ ಮೋದಿ ಹೇಳಿದರು.

ವಿದ್ಯಾರ್ಥಿಗಳು ತಮ್ಮ ನಿದ್ರೆಯ ಸಮಯವನ್ನು ರೀಲ್ಸ್ ವೀಕ್ಷಿಸಲು ವ್ಯರ್ಥ ಮಾಡಬಾರದು ಎಂದು ಸಲಹೆ ನೀಡಿದರು. ಮೊಬೈಲ್ ಬಳಸಲು ಸಹ ರೀಚಾರ್ಜ್ ಅಗತ್ಯವಿರುವಂತೆ ನಮ್ಮ ದೇಹವೂ ರೀಚಾರ್ಜ್ ಆಗುತ್ತಿರಬೇಕು ಎಂಬ ಅರಿವಿರಬೇಕು ಎಂದು ಅವರು ಹೇಳಿದರು. ವಿದ್ಯಾರ್ಥಿಗಳು ಓದು ಮತ್ತು ಆಟದ ನಡುವೆ ಸಮತೋಲನ ಸಾಧಿಸುವುದು ಅವಶ್ಯಕ. ಆರೋಗ್ಯಕರ ದೇಹ, ಆರೋಗ್ಯಕರ ಮನಸ್ಸಿಗೆ ಉತ್ತಮ ನಿದ್ರೆ ಅತ್ಯಗತ್ಯವಾಗಿದೆ ಎಂದು ಹೇಳಿದರು.

# ಗ್ರಾಮ ಚಲೋ ಅಭಿಯಾನ



ಬೆಂಗಳೂರು - ಯಶವಂತಪುರ




ಕೊಪ್ಪಳ - ಯಲಬುರ್ಗಾ



ಮೈಸೂರು - ಬ್ಯಾತಳ್ಳಿ



ಶಿವಮೊಗ್ಗ - ಜಯನಗರ



ದಾವಣಗೆರೆ



ತುಮಕೂರು




ಹಾವೇರಿ




ಬಾಗಲಕೋಟೆ



ಕಾಲೇ ವರ್ಷತು ಪರ್ಜನ್ಯಃ

# ರಾಮಾಯಣದ ಪಾತ್ರಗಳ ವಾರಸುದಾರರೂ ನಾವೇ ಆಗಬೇಕಲ್ಲವೇ?

'ಮಂದಿರವಲ್ಲೇ ಕಟ್ಟಿದೆವು' 500 ದಶಕಗಳ ಹೋರಾಟದ ಪ್ರತಿಫಲ, ಮೋದಿ ಸರ್ಕಾರದ ಇಚ್ಛಾಶಕ್ತಿಯ ಪರಿಣಾಮ. ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣವಾಗಿ, ಬಾಲರಾಮನ ಪ್ರತಿಷ್ಠಾಪನೆಯಾಗಿದೆ. ದೇಶದ ಜನರ ಭಾವದೊಳಗಿದ್ದ ರಾಮನ ಆದರ್ಶ, ಶಕ್ತಿಗಳು ಹೊರಗೆ ಪ್ರಕಟಿತವಾಗುತ್ತಿದೆ. ದೇಶದ ತುಂಬೆಲ್ಲಾ ರಾಮನಾಮದ ಸುಮಧುರ ಸ್ವರ ಮೊಳಗುತ್ತಿದೆ. ಇನ್ನೊಂದೆಡೆ ದೇಶದ ಸ್ವಾತಂತ್ರ್ಯ ಬಂದಾಗಿನಿಂದ, ಗಾಂಧೀಜಿಯಿಂದ ಹಿಡಿದು, ಇಂದಿನ ಮಕ್ಕಳವರೆಗೂ ರಾಮರಾಜ್ಯವಾಗಬೇಕೆಂಬ ಮಹದಾಸೆ ಇದ್ದೇ ಇದೆ. ಆದರೆ ರಾಮಾದರ್ಶಗಳು ಆಡಳಿತದಲ್ಲಿ ಮಾತ್ರ ಇರಬೇಕೇ?, ದೇಶ ರಾಮರಾಜ್ಯವಾಗಬೇಕನ್ನುವ ನಾವು, ನಮ್ಮ ಜೀವನದಲ್ಲಿ, ನಮ್ಮ ಸಮಾಜದಲ್ಲಿ , ನಾವು ತೊಡಗಿಸಿಕೊಳ್ಳುವ ಸಂಘಟನೆಯೊಳಗೂ ರಾಮಾದರ್ಶಗಳು ಇರಬೇಕಲ್ಲವೇ?, ಇದೆಯೇ?, ಎನ್ನುವುದರ ಬಗ್ಗೆ ಅವಲೋಕನವೂ ಅತ್ಯಗತ್ಯವಲ್ಲವೇ?.

ದಶರಥ ರಾಮನನ್ನು ಮುಂದಿನ ಅಯೋಧ್ಯಾಪತಿಯನ್ನಾಗಿ ಘೋಷಣೆ ಮಾಡಿದ್ದಾನೆ. ಇಡೀ ಅಯೋಧ್ಯೆಯಲ್ಲಿ ಸಂಭ್ರಮ ಮನೆ ಮಾಡಿದೆ. ರಾಮ ಪಟ್ಟಾಭಿಷೇಕಕ್ಕೆ ಭರದ ಸಿದ್ಧತೆಯೂ ನಡೆದಿದೆ. ಆದರೆ ಪಟ್ಟಾಭಿಷೇಕದ ದಿನದ ಚಿತ್ರಣವೇ ಬದಲಾಗಿ ಹೋಯಿತು. ಕೈಕೆಯಿಯ ಒಂದು ನಿರ್ಧಾರದಿಂದ ಸಿಂಹಾಸನವೇರಬೇಕಿದ್ದ ರಾಮ, 14 ವರ್ಷ ವನವಾಸಕ್ಕೆ ಕಾಡಿಗೆ ಹೋಗಬೇಕಾದ ಪರಿಸ್ಥಿತಿ ಬಂದು ಬಿಟ್ಟಿತು. ಅಯೋಧ್ಯೆಯ ರಾಜ ಪೀಠದ ವೈಭವವೆಲ್ಲಿ?, ಕಾಡಿನ ಬದುಕೆಲ್ಲಿ?. ಆದರೆ ರಾಮ ಕೊಂಚವೂ ಬೇಸರಿಸಿಕೊಳ್ಳಲಿಲ್ಲ. ಪಿತೃವಾಕ್ಯ ಪರಿಪಾಲನೆಗಾಗಿ, ಅಧಿಕಾರ, ಅಂತಸ್ತು, ಗೌರವ, ಹುದ್ದೆ ಎಲ್ಲವನ್ನೂ ಬಿಟ್ಟು ಕಾಡಿಗೆ ಹೊರಟು ಬಿಟ್ಟ. ಇತ್ತ ಕೈಕೆಯಿಯ ಕಾರಣದಿಂದ ರಾಮನಿಗೆ ವನವಾಸವಾದರೆ, ಭರತನಿಗೆ ಪಟ್ಟಾಭಿಷೇಕದ ಅವಕಾಶ ಲಭ್ಯವಾಗಿ ಬಿಟ್ಟಿತ್ತು. ಆದರೆ ಭರತ ಅಧಿಕಾರಕ್ಕೆ ಆಸೆ ಪಡಲಿಲ್ಲ, ಸಿಂಹಾಸನ ಸಿಕ್ಕಿತೆಂದು ಬೀಗಲಿಲ್ಲ, ಮಗನೆಂಬ ಮಮತೆಯಿಂದ ತನ್ನ ಪರ ನಿಂತ ತನ್ನ ಹೆತ್ತ ತಾಯಿಯನ್ನೇ ಜರಿದು ಬಿಟ್ಟ. ಅಣ್ಣನಿಲ್ಲದ ಅಯೋಧ್ಯೆಗೆ ತಾನು ರಾಜನಾಗಲಾರೆ ಎಂದು ಬಿಟ್ಟ. ಅಧಿಕಾರದ ಅವಕಾಶವನ್ನು ಧಿಕ್ಕರಿಸಿಬಿಟ್ಟ.

ಪಿತೃವಾಕ್ಯ ಪರಿಪಾಲನೆಗಾಗಿ ವನವಾಸಕ್ಕೆ ತೆರಳಿದ ರಾಮ, ರಾಮನ ಪತ್ನಿ ಸೀತೆಗಾಗಲಿ, ತಮ್ಮ ಲಕ್ಷ್ಮಣನಿಗಾಗಲಿ, ಅಯೋಧ್ಯೆಯ ಸಕಲ ವೈಭೋಗಗಳನ್ನು ಬಿಟ್ಟು ರಾಮನ ಜೊತೆಗೆ ತೆರಳಿ ಕಾಡಿಗೆ ಹೋಗುವ ಅವಶ್ಯಕತೆ ಇರಲಿಲ್ಲ. ಇಬ್ಬರೂ ಒಂದು ಕ್ಷಣವೂ ಯೋಚಿಸಲಿಲ್ಲ, 'ರಾಮಾ, ನೀನಿದ್ದಲ್ಲಿ ಅಯೋಧ್ಯೆ' ಎಂದು ರಾಮನೊಂದಿಗೆ ಕಾಡಿಗೆ ಹೊರಟು ಬಿಟ್ಟರು.

ದುಷ್ಟ ರಾವಣನ ಸಂಹಾರ ಮಾಡಿದವನು ರಾಮ. ಜೊತೆಯಾಗಿ ನಿಂತವನು ಹನುಮಂತ. ರಾಮಾಯಣದ ಪ್ರತೀ ಸಂಕಷ್ಟದಲ್ಲೂ ರಾಮನ ಜೊತೆಯಾಗಿ ನಿಂತವನು ಹನುಮಂತನೇ. ರಾವಣ ಸೀತೆಯನ್ನು ಅಪಹರಿಸಿದಾಗಿನಿಂದ ಹಿಡಿದು, ರಾವಣನನ್ನು ಸಂಹರಿಸಿ, ಲಂಕೆಯನ್ನು ಗೆಲ್ಲಲು ಜೊತೆಯಾದ ಹನುಮಂತನಿಗೆ ಶ್ರೀ ರಾಮ ಏನು ಕೇಳಿದರೂ ಕೊಡುತ್ತಿದ್ದ. ಆದರೆ ಹುದ್ದೆ, ಸ್ಥಾನಮಾನ, ಉಡುಗೊರೆಗಳನ್ನು ಬಯಸಲಿಲ್ಲಾ. ಬದಲಾಗಿ ರಾಮನ ಸಾಂಗತ್ಯ ಮಾತ್ರ ಬಯಸಿದ.

ಲಂಕೆಯನ್ನು ಗೆದ್ದ ರಾಮ ಅಲ್ಲಿಯೇ ನೆಲೆಸಬಹುದಿತ್ತು. ಇಲ್ಲಾ ಲಂಕೆಯನ್ನು ಪರ್ಯಾಯ ಕೇಂದ್ರವನ್ನಾಗಿ ಮಾಡಿಕೊಳ್ಳಬಹುದಿತ್ತು. ರಾಮ ಹಾಗೆ ಮಾಡಲಿಲ್ಲ. ವಿಭೀಷಣನಿಗೆ ಲಂಕೆಯ ಪಟ್ಟ ಕಟ್ಟಿ ಅಯೋಧ್ಯೆಗೆ ಹಿಂದಿರುಗಿ ಬಿಟ್ಟ.

ರಾಮಾಯಣದ ಈ ನಾಲ್ಕು ದೃಷ್ಟಾಂತಗಳು ಇಲ್ಲಿವೆ. ಎಲ್ಲದರಲ್ಲೂ ಪ್ರತಿಯೊಬ್ಬರು ಅಧಿಕಾರ, ಹುದ್ದೆ, ಸ್ಥಾನಗಳನ್ನು ತ್ಯಾಗ ಮಾಡಿ ನ್ಯಾಯ, ನೀತಿ, ಧರ್ಮ ಪರಿಪಾಲನೆಯನ್ನು ಮಾತ್ರ ತಮ್ಮ ಆದರ್ಶವನ್ನಾಗಿಸಿಕೊಂಡರು. ರಾಮರಾಜ್ಯವಾಗಿದ್ದು ಇಂತಹುವರುಗಳಿಂದಲೇ. ರಾಮರಾಜ್ಯವಾಗಬೇಕೆಂದು ಪ್ರತಿಪಾದಿಸುವ ನಮಗೆ, ನಮ್ಮೊಳಗೆ ಈ ರಾಮಾಯಣವೇ ಆದರ್ಶವಾಗಬೇಕಲ್ಲವೇ?. ಸೈದ್ಧಾಂತಿಕ ಸಂಘಟನೆಗಳಲ್ಲಿರುವ ನಾವುಗಳೂ ಅಂದಿನ ರಾಮಾಯಣದ ಈ ಪಾತ್ರಗಳ ವಾರಸುದಾರರಾಗಬೇಕಲ್ಲವೇ? ರಾಮರಾಜ್ಯವಾಗಬೇಕೆಂದು ನಿತ್ಯ ಪಠಿಸುವ ನಾವುಗಳು ಹುದ್ದೆ, ಅಧಿಕಾರ, ಕುರ್ಚಿಗಾಗಿನ ಹಂಬಲಗಳ ನಮ್ಮೊಳಗಿನ ಭಾವವನ್ನು ನಾವೇ ಒಮ್ಮೆ ಪ್ರಶ್ನಿಸಿಕೊಳ್ಳಬೇಕಿದೆ. ಉತ್ತರವನ್ನೂ ಕಂಡುಕೊಳ್ಳಬೇಕಿದೆ. **ನಿನ್ನೊಳಗೆ ಕರಗುವೆನು ನಿರ್ಮೋಹ ಕೊಡು ರಾಮ। ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ॥** ಎಂಬುದು ನಿತ್ಯ ಜಪವಾಗಲಿ.

– **ಸ್ವಯಂಭೂ**

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**